ಸಂಪುಟ 20 ಸಂಚಿಕೆ 38
ಸೆಪ್ಟಂಬರ್ 19, 1999 ಬೆಲೆ ರೂ. 3.00


ದುಡಿವ ಜನರ ಪ್ರಾಣಮಿತ್ರ

ಐಕ್ಯರಂಗ

"ಖಾವಿ ಪಡೆಗಳೇ, ಧಾಳಿಗಳಿಂದ ದೇಶವನ್ನೆಂದೂ ಗೆಲ್ಲಲಾರಿರಿ"



ಚುನಾವಣಾ ಆಯೋಗದ ಮೇಲೆ ಬಿಜೆಪಿಗೇಕೆ ಕೋಪ ?



ಮತದಾರರನ್ನು ಮರುಳುಗೊಳಿಸಲಾಗದ ಬಿಜೆಪಿ ಕುಚೇಷ್ಟೆಗಳು

ವಿದೇಶಿ ಕಂಪನಿಗಳ ಈ ಸ್ವದೇಶಿ ಗುಲಾಮರಿಗೆ ಜನತೆ ಬುದ್ಧಿಕಲಿಸಬೇಕು

ಎರಡನೇ ಹಂತದ ಚುನಾವಣೆಯ ಮತದಾನವೀಗ ಮುಗಿದಿದೆ. ಮತದಾರ ಮುಂದೂಡಲ್ಪಟ್ಟ ಕೆಲವು ಕ್ಷೇತ್ರಗಳನ್ನು ಬಿಟ್ಟರೆ ಕರ್ನಾಟಕದಲ್ಲಿ ಬಹುತೇಕ ಮತದಾನ ಪೂರ್ಣಗೊಂಡಿದೆ. ದೇಶವನ್ನುಳಿಸುವ ಈ ಗಂಭೀರ ಹೋರಾಟದಲ್ಲಿ ಮತದಾರರನ್ನು ಮನವೊಲಿಸಲು ವಿವಿಧ ರಾಜಕೀಯ ಪಕ್ಷಗಳು ನಡೆಸಿದ ಚುನಾವಣೆ ಪ್ರಚಾರ, - ಅವುಗಳು ಮುಂದೊಡ್ಡಿದ ವಿಷಯಗಳು ವಿಮರ್ಶಾರ್ಹ. ಎಡಪಕ್ಷಗಳನ್ನು ಹೊರತು ಪಡಿಸಿದರೆ, ಬಹುತೇಕ ರಾಜಕೀಯ ಪಕ್ಷಗಳು ಎತ್ತಿಕೊಂಡ ಪ್ರಶ್ನೆಗಳು ನೈಜ ಸಮಸ್ಯೆಗಳನ್ನು ಮರೆಮಾಡುವ ಅಥವಾ ಹುಲ್ಲಿನ ಪೊದೆ ಸುತ್ತ ಬಡಿಯುವ ವೈಖರಿಯವು. ರಾಜಕೀಯ ಪಕ್ಷದ ಧೋರಣೆಗಳಿಂದ ವ್ಯಕ್ತಿ ಕೇಂದ್ರೀಕೃತವಾದವು. ಹೀಗೆ ಮತದಾರರನ್ನು ದಿಕ್ಕು ತಪ್ಪಿಸಿ ಮತ ಅಪಹರಣ ಮಾಡುವ ಸಂಚಿನವು. ಈ ಮೂಲಕ ಪ್ರಜಾಪ್ರಭುತ್ವದ ಪ್ರಕ್ರಿಯೆಯಲ್ಲಿ ಜನತೆಯನ್ನು ನಿಷ್ಕ್ರಿಯಗೊಳಿಸುವಂತಹದ್ದಾಗಿವೆ. ಪತ್ರಿಕೆ ಮತ್ತು ಎಲೆಕ್ಟ್ರಾನಿಕ್ ಮಾಧ್ಯಮಗಳೂ ಸಹ ಇದೇ ವರಸೆಯನ್ನು ನಡೆಸಿದವು.

ಇಡೀ ಈ ಚುನಾವಣಾ ಪ್ರಕ್ರಿಯೆಯಲ್ಲಿ ಬಿಜೆಪಿ ಕೂಟ ಮತ್ತು ಸಂಘ ಪರಿವಾರ ಕೈಗೊಂಡ ಕುಖ್ಯಾತ ಪ್ರಚಾರದ ವೈಖರಿ ಪ್ರಜಾಪ್ರಭುತ್ವದ ವ್ಯವಸ್ಥೆಯನ್ನೇ ಬುಡಮೇಲು ಮಾಡುವ, ಹಾಗೂ ಜನತೆಯ ಮನಗಳಲ್ಲಿ ವಿಷ ಪ್ರಾಶಣ ಮಾಡಿದ್ದಾಗಿದೆ. ಯಥೇಚ್ಚ ಸುಳ್ಳುಗಳು, ಕಟ್ಟುಕಥೆಗಳು ಅನ್ಯಮತ ದ್ವೇಷ, ಸುಳ್ಳು ಮಾಹಿತಿಗಳ ಮೂಲಕ ಕೀಳು ಮಟ್ಟವನ್ನು ಅನುಸರಿಸಲು ಬಿಜೆಪಿ ಕೂಟ ಹೇಸಲಿಲ್ಲ.

ಸಂಪಾದಕೀಯ

ಇದಕ್ಕೆ ಉದಾಹರಣೆ ಕಾಂಗ್ರೆಸ್ ಅಧ್ಯಕ್ಷೆ ಸೋನಿಯಾ ಗಾಂಧಿಯವರ ಬಗ್ಗೆ ನಡೆಸಲಾದ ಅಪಪ್ರಚಾರ ಅತ್ಯಂತ ಕೀಳು ಮಟ್ಟಕ್ಕೆ ಇಳಿದಿದ್ದು. ಬಹಿರಂಗ ಪ್ರಚಾರದಲ್ಲಿ ದೇಶಿ - ವಿದೇಶಿ ಎಂಬ ಹುಟ್ಟಿನ ಮೂಲದ ಬಗ್ಗೆ ಮಾತನಾಡಿದರು. ಈ ದೇಶಕ್ಕೆ ಆಕೆಯ ಕೊಡುಗೆ ಏನು ಎಂದು ಪ್ರಶ್ನಿಸಿದರು. ಹಾಗೆ ಮುಂದುವರೆದು ಸೋನಿಯಾಗಾಂಧಿ ತಂದೆ, ಸಹೋದರರು, ಐಎಸ್ಐ ನ ಏಜೆಂಟರೆಂದೂ, ಭಾರತವನ್ನು ನಾಶಮಾಡಲೆಂದು ತಯಾರಿಸಿದ ಬಾಂಬು ಸೋನಿಯಾ ಎಂಬ ಅತ್ಯಂತ ಕೀಳು ಪ್ರಚಾರದ ಅನಧಿಕೃತ ನೋಟೀಸನ್ನು ಸಿಬಿಐ ಮಾಜಿ ಅಧಿಕಾರಿ ಎಂಬ ಹೆಸರಿನಲ್ಲಿ ಎಲ್ಲೆಡೆಗಳಲ್ಲಿ ಹಂಚಿದರು. ಸೋನಿಯಾ ಮೊದಲು ನೃತ್ಯಗಾತಿಯೆಂದು, ಇಂದಿರಾಗಾಧಿ, ರಾಜೀವ್ ಗಾಂಧಿಅವರ ಹತ್ಯೆಯ ಬಗ್ಗೆ ಪಿಸುಮಾತಿನ ಭಾರಿ ಪ್ರಚಾರವನ್ನು ಖಾಕಿ ಪಡೆಗಳು ವ್ಯವಸ್ಥಿತವಾಗಿ ನಡೆಸಿದವು. ಸುಷ್ಮಾಸ್ವರಾಜ್, ಜಾರ್ಜ್‌ಫರ್ನಾಂಡಿಸ್, ಆಡ್ವಾನಿ, ಹೆಗಡೆ, ಪಟೇಲ್, ಪ್ರಮೋದ್ ಮಹಾಜನ್ ರವರ ಮಾತುಗಳು ರಾಜಕೀಯವಾಗಿ ಎಷ್ಟೊಂದು ದಿವಾಳಿ ಎದ್ದವರೆಂಬುದನ್ನು, ಮತ್ತು ಮಹಿಳೆಯರ ಬಗ್ಗೆ ಈ ಪರಿವಾರದ ನಾಯಕರಿಗಿರುವ ನೀಚ ದೃಷ್ಟಿಕೋನವನ್ನು ಎತ್ತಿ ತೋರಿಸುತ್ತದೆ. ಇಂತಹ ಗೊಬೆಲ್ಸ್ ಸಂತತಿಯು ದೇಶದ ಉದ್ದಗಲಕ್ಕೂ ಅವ್ಯಾಹತವಾಗಿ ಪ್ರಚಾರಿಸುತ್ತಿದ್ದರೂ ಇದರ ವಿರುದ್ಧ ಮುತ್ಸದ್ದಿ ವಾಜಪೇಯಿ ಒಂದೇ ಒಂದು ಚಕಾರ ಎತ್ತಲಿಲ್ಲ. ಚುನಾವಣಾ ಆಯೋಗ ಈ ಮಹನೀಯರಿಗೆ ಮಂಗಳಾರತಿ ಎತ್ತಿದ ನಂತರವೇ ವ್ಯಕ್ತಿಗತ ಟೀಕೆ ಸಲ್ಲದು ಎಂದು ಮಾನಮುಚ್ಚಿಕೊಳ್ಳಲು ಹೆಣಗಿದ್ದು.

ಕಾರ್ಗಿಲ್‌ನಲ್ಲಿ ಈ ಸಮರ್ಥ ನಾಯಕರ ವಿಫಲತೆ, ಈಗಾಗಲೇ ಜಗ ಜ್ಜಾಹೀರಾದ ಹಲವು ಹಗರಣದಲ್ಲಿ ವಾಜಪೇಯಿ ಪಾತ್ರವನ್ನು ಬಯಲಿಗೆಳದಿದ್ದನ್ನೇ ತನ್ನ ತೇಜೋವಧೆಗೆ ವಿರೋಧ ಪಕ್ಷಗಳು ಮುಂದಾಗಿವೆ ಎಂದು, ತಾನೇಂದೂ ಅಂತಹ ತೇಜೋವಧೆ ಮಾಡಿದ ಇತಿಹಾಸವಿಲ್ಲವೆಂದು ವಾಜಪೇಯಿ ಈಗ ರೋಧಿಸತೊಡಗಿದ್ದಾರೆ.

ಯಾವುದೇ ವಿಷಯವನ್ನು ದೇಶದ ಜನರ ಮುಂದಿಡುವಾಗ, ರಾಜಕೀಯ ಪಕ್ಷಗಳನ್ನು ಟೀಕಿಸುವಾಗ, ವಿವೇಚಿಸಿ ಗಂಭೀರವಾಗಿ ರಾಜಕೀಯ, ನೈತಿಕ, ಪ್ರಜಾಪ್ರಭುತ್ವೀಯ ಸತ್ಯದ ನೆಲೆಗಟ್ಟಿನಲ್ಲಿ ವಿಷಯ ಪ್ರಚಾರಿಸಬೇಕು ಮತ್ತು ರಾಜಕೀಯವಾಗಿಯೇ ವಿವರಿಸಬೇಕು. ಆದರೆ ಬಿಜೆಪಿ ಮತ್ತು ಕುಖ್ಯಾತ ಆರ್.ಎಸ್.ಎಸ್. ಪರಿವಾರ ಬೊಬ್ಬೆಇಡುವ ವಿಧ್ವಂಶಕ ಪ್ರಚಾರದ ಪರಿ, ಅದರ ಹತಾಶೆ ಮತ್ತು ದಿವಾಳಿತನವನ್ನು ತೋರಿಸುತ್ತದೆ. ಭಾವೋನ್ಮಾದ ಎಬ್ಬಿಸಿ ಅದನ್ನೇ ಬಂಡವಾಳ ಮಾಡಿಕೊಳ್ಳಲು ಬಯಸುತ್ತವೆ. ಅವರೇ ಹೇಳುವಂತೆ ಯಕಶ್ಚಿತ್ ಹೆಣ್ಣು ಮಗಳಾದ ಸೋನಿಯಾ ಬಗ್ಗೆ ಏಕೆ ಇಷ್ಟು ಭಯ?. ಈ ವಿದೇಶಿ ಕಂಪನಿಗಳ, ಸ್ವದೇಶಿ ಗುಲಾಮರಿಗೆ ಸಿಪಿಐ(ಎಂ) ಎತ್ತಿದ ಯಾವುದೇ ಪ್ರಶ್ನೆಗಳಿಗೂ ಉತ್ತರಿಸಲು ಸಾಧ್ಯವಾಗೇ ಇಲ್ಲ. ಬಿಜೆಪಿ ಕೂಟ ಹೇಳಿಕೊಳ್ಳುತ್ತಿರುವ ಸಾಧನೆಗಳನ್ನೇ ಸಮರ್ಥಿಸಿಕೊಳ್ಳಲಾಗಲಿಲ್ಲ. ಇವರ ಆಡಳಿತದ ೧೩ ಮತ್ತು ೪ ತಿಂಗಳ ಮಹಾಸಾಧನೆಗಳನ್ನು ಬಯಲಿಗಿಡುವ 'ಸಹಮತ್' ಪೋಸ್ಟರ್ ಪ್ರದರ್ಶನ ಮೈಸೂರಿನಲ್ಲಿ ನಡೆಯುವಾಗ, ಬುದ್ಧಿಜೀವಿಗಳ ಮೇಲೆ ಖಂಡನೀಯ ಧಾಳಿ ನಡೆಸಿದ್ದು ಭಾರತದ ಭವಿಷ್ಯತ್ತು ಈ ಪರಿವಾರ ಕೈಯಲ್ಲಿ ಏನಾಗಬಹುದು ಎಂಬ ಕರಾಳ ಸತ್ಯವನ್ನು ತೋರಿಸುತ್ತದೆ. ಈ ಬಾರಿ ಇಡೀ ದೇಶದ ಜನತೆ ಇವರಿಗೆ ಬದ್ಧಿ ಕಲಿಸಬೇಕಿದೆ.



'ದಿ ವೀಕ್' ನಲ್ಲಿ ಏಸುದಾಸನ್

ನಿಮ್ಮ ಪ್ರಶ್ನೆ ? ನಮ್ಮ ಉತ್ತರ

ಸಿಪಿಐ(ಎಂ) ಪಕ್ಷ ಅನೇಕ ವರ್ಷಗಳಿಂದ ರೈತರ, ಕಾರ್ಮಿಕರ, ಮಹಿಳೆಯರ ಪರವಾಗಿ ದುಡಿಯುತ್ತಿದೆ. ಈ ಪಕ್ಷದ ಸರ್ಕಾರ ಇರುವ ರಾಜ್ಯದ ಬಗ್ಗೆ ಕೂಡ ಕೇಳಿದ್ದೇವೆ, ಓದಿದ್ದೇವೆ, ಆದರೆ ಕರ್ನಾಟಕದಲ್ಲಿ ತಾವು ಯಾಕೆ ಎಲ್ಲಾ ಕ್ಷೇತ್ರದಲ್ಲಿ ಚುನಾವಣೆ ಸ್ಪರ್ದಿಸುವದಿಲ್ಲ? ನಿನ್ನೆ ಮೊನ್ನೆ ಸ್ಥಾಪನೆ ಆದ ಪಕ್ಷಗಳು ಎಲ್ಲಾ ಕ್ಷೇತ್ರದಿಂದ ಸ್ಪರ್ಧಿಸುತ್ತಿವೆ, ಅಧಿಕಾರಕ್ಕೆ ಬರುತ್ತಿದೆಯಲ್ಲಾ?.

-ನಾಗರಾಜ್ ಹೊನ್ನಾವರ

ಸಿಪಿಐ(ಎಂ) ಗೂ ಇತರ ಪಕ್ಷಗಳಿಗೂ ದೊಡ್ಡ ವ್ಯತ್ಯಾಸ, ವ್ಯತ್ಯಾಸ ಅಷ್ಟೇ ಅಲ್ಲ ಕಂದರವುಂಟು. ಸಿಪಿಐ(ಎಂ), ಹಾಗೂ ಮತ್ತೊಂದು ಬಡ ಪಕ್ಷವಾದ ಸಿಪಿಐ ಹೊರತು ಪಡಿಸಿ ಉಳಿದ ಎಲ್ಲಾ ಪಕ್ಷಗಳು ಹೊರ ಸ್ವರೂಪದಲ್ಲಿ ಬೇರೆ ಬೇರೆ ಎಂದೂ ಕಾಣಿಸಿದರೂ ಆಳುವ ವರ್ಗವಾದ ಬಂಡವಾಳಶಾಹಿ ಭೂಮಾಲಕವರ್ಗದ ಪಕ್ಷಗಳು. ಇಂದಿನ ವ್ಯವಸ್ಥೆಯ ಭಾಗವಾಗಿರುವ ಪಕ್ಷಗಳು. ಹೀಗಾಗಿಯೇ ಆ ಪಕ್ಷಗಳಲ್ಲಿ ಯಾವ ಹೇಸಿಗೆಯೂ ಇಲ್ಲದೆ ಒಂದರಿಂದ ಮತ್ತೊಂದಕ್ಕೆ ಜಿಗಿಯುವುದು ಇವೆಲ್ಲಾ ಕಾಣುತ್ತವೆ. ದಶಕಗಳ ಕಾಲ ಕಾಂಗ್ರೆನಲ್ಲಿ ಟಿಕೆಟ್ ಸಿಗದವನಿಗೆ ಬಿಜೆಪಿ ತನ್ನ ಸ್ವರ್ಧಿಯೆಂದು ಕಣಕ್ಕಿಳಿಸುತ್ತದೆ. ಅದೇ ರೀತಿ ಕಾಂಗ್ರೆ ಇತರ ಪಕ್ಷಗಳೂ ಕೂಡ. ಕೇವಲ ಪಕ್ಷಾಂತರಿ ವ್ಯಕ್ತಿಯ ಮಟ್ಟದಲ್ಲಿ ಪಕ್ಷಾಂತಾರಿಯನ್ನು ದೂಷಿಸುವುದನ್ನು ನೋಡುತ್ತೇವೆ. ಆದರೆ ಈ ಪಕ್ಷಾಂತರಕ್ಕೆ ಪ್ರಚೋದಿಸುವ, ಅದಕ್ಕಾಗಿ ಎಲ್ಲಾ ಆಮಿಷಗಳನ್ನೊಡ್ಡುವ, ಪಕ್ಷಾಂತರಿಗಳನ್ನು ಸ್ವೀಕರಿಸುವ ಪಕ್ಷಗಳು ಅವುಗಳ ಪಾತ್ರವೇ ದೊಡ್ಡದಲ್ಲವೇ?.

ಒಟ್ಟಿನಲ್ಲಿ ಈ ಅಸಹ್ಯ ಹುಟ್ಟಿಸುವ ಈ ಕ್ರಿಯೆ ಈ ಎಲ್ಲಾ ಪಕ್ಷಗಳ ಮೂಲವೂ ಒಂದೇ ಎಂದು ತೋರಿಸುತ್ತದೆ. ಬಂಡವಾಳಶಾಹಿ ಭೂಮಾಲಿಕ ಪಕ್ಷಗಳು ಆಡಳಿತದಲ್ಲಿರುವಾಗ ಮಾತ್ರವಲ್ಲ, ಜನರಿಂದ ನಿರಾಕರಿಸಲ್ಪಟ್ಟಾಗಲೂ ಈ ವ್ಯವಸ್ಥೆಯ ಭಾಗಗಳೇ ಆದ್ದರಿಂದ ಇಡಿ ವ್ಯವಸ್ಥೆ, ಸರ್ಕಾರ, ಆಡಳಿತ, ಪೋಲಿಸ್, ಪತ್ರಿಕೆಗಳು, ಮಾಧ್ಯಮಗಳು ಸೋತ ಬಂಡವಾಳಶಾಹಿ ಪಕ್ಷಗಳಿಗೂ ಮಣೆಯುತ್ತವೆ ಅವುಗಳ ಬೆಳವಣಿಗೆಗೆ ಅವಕಾಶವೂ ಮಾಡಿಕೊಡುತ್ತವೆ. ಹಲವೊಮ್ಮೆ ನೀರು, ಗೊಬ್ಬರ ನೀಡಿ ಪ್ರಚೋದಿಸುತ್ತವೆ. ಹೀಗಾಗಿ ಈ ಪಕ್ಷಗಳ ಹುಟ್ಟು, ಬೆಳವಣಿಗೆ ಇವೆಲ್ಲಾ ಕೆಲವೇ ದಿನಗಳಲ್ಲಿಯೇ ಸಂಭವಿಸಿ ಬಿಡಬಹುದು. 1977 ರಲ್ಲಿ ಜನತಾ ಪಕ್ಷ ಹುಟ್ಟಿದಂತೆ, ರಾಮಕೃಷ್ಣ ಹೆಗ್ಗಡೆ ಹೇಗೂ ಮಾಡಿ ಮುಖ್ಯ ಮಂತ್ರಿ ಪೀಠದಲ್ಲಿ ಸ್ಥಾಪನೆಯಾದ ಕೂಡಲೇ ದೇಶದ ಪತ್ರಿಕೆಗಳು ಅವರನ್ನು ರಾಷ್ಟ್ರ ನಾಯಕನನ್ನಾಗಿ ಮಾಡಿದಂತೆ ಇನ್ನೂ ಹೇಳುವುದಾದರೆ ವಿ.ಪಿ.ಸಿಂಗ್ ಕಾಂಗ್ರೆಸ್ ನಿಂದ ಹೊರ ಬಂದೊಡನೆಯೇ ಅವರು ರಾಷ್ಟ್ರ ವ್ಯಾಪಿ ಪ್ರಚಾರ ಆ ಮೂಲಕ ಜನ ಬೆಂಬಲ ಪಡೆದು ಮುಂದೆ ಪ್ರಧಾನ ಮಂತ್ರಿಯೂ ಆಗಿ ಬಿಟ್ಟಂತೆ. 1998ರ ಹಾಗೂ ಈಗಿನ ಚುನಾವಣೆಗಳ ಮುನ್ನ ಬಿಜೆಪಿ ಹಾಗೂ ವಾಜಪೇಯಿಯ ಬಗ್ಗೆ ಅಬ್ಬರದ ಪ್ರಚಾರ ಮಾಡುತ್ತಾ ಅವರನ್ನು ಅಧಿಕಾರದಲ್ಲಿ ಕೂರಿಸಲು ವ್ಯವಸ್ಥೆಯ ದೊಡ್ಡ ಭಾಗವೇ ದುಡಿಯುತ್ತಿರುವಂತೆ ಹಾಗೆಯೇ ಚಂದ್ರಬಾಬು ನಾಯ್ಡು ರವರನ್ನು ರಾಷ್ಟ್ರ ನಾಯಕನೆಂದು ಅತಿದಕ್ಷನೆಂದು ಬಣ್ಣಿಸಿರುವಂತೆ.

ನೀವು ಕೇಳಿದ ಪ್ರಶ್ನೆಗೂ ನೀಡುತ್ತಿರುವ ಈ ಉತ್ತರಕ್ಕೂ ಏನು ಸಂಬಂಧ ಎಂದೆನ್ನಿಸಬಹುದು. ಈ ವ್ಯವಸ್ಥೆಯ ಪೂರ್ಣ ಸ್ವರೂಪವನ್ನು, ವರ್ಗದೃಷ್ಟಿಕೋನದಿಂದ ಅರ್ಥಮಾಡಿಕೊಳ್ಳದಿದ್ದರೆ ನಮ್ಮ ಪಕ್ಷದ ಕೆಲಸ ಹಾಗೂ ಸ್ವರೂಪವೂ ಅರ್ಥವಾಗುವುದಿಲ್ಲ.

ಮೇಲೆ ಹೇಳಿದಂತೆ ಹೇಗೆ ಇಡೀ ವ್ಯವಸ್ಥೆ ಬಂಡವಾಳಶಾಹಿ-ಭೂಮಾಲಿಕ ಪಕ್ಷಗಳನ್ನು ಹುಟ್ಟುಹಾಕಿ, ಪೋಷಿಸುತ್ತದೋ ಅಷ್ಟೇ ನಿರ್ದಯವಾಗಿ ಅದುರ ವರ್ಗವಿರೋಧಿಯಾದ ಸಿಪಿಐ(ಎಂ) ಅನ್ನು ತನ್ನ ಎಲ್ಲಾ ಶಕ್ತಿ ಬಳಸಿ ತುಳಿಯುತ್ತದೆ. ಬೆಳವಣಿಗೆಯನ್ನು ಚಿವುಟಿಹಾಕುತ್ತದೆ. ನಿರಂತರ ಕಮ್ಯೂನಿಸ್ಟ್ ವಿರೋಧಿ ಭಾವನೆಯನ್ನು ಹಲವು ರೂಪದಲ್ಲಿ ಹಬ್ಬಿಸುತ್ತಾ ಪಕ್ಷದ ಕಡೆಗೆ ಜನ ಆಕರ್ಷಿತರಾಗುವುದನ್ನು ತಡೆಯುತ್ತದೆ. ಇದಕ್ಕೆ ಪತ್ರಿಕೆಗಳೂ ಮಾಧ್ಯಮಗಳು, ಶಿಕ್ಷಣ, ಸಾಹಿತ್ಯ-ಕಲೆ ಎಲ್ಲವನ್ನೂ ಬಳಸಿಕೊಳ್ಳಲಾಗುತ್ತದೆ. ಪಟ್ಟ ಭದ್ರ ಹಿತಾಸಕ್ತಿಗಳು-ಪಾಳೆಯಗಾರಿ ಭೂಮಾಲಕರು (ಹಳ್ಳಿಯಲ್ಲಿ) ಪ್ರತಿ ಸಂಘಟನೆಯ ಬೆಳವಣಿಗೆಯನ್ನೂ ಹೊಸಕಿಹಾಕುತ್ತಾರೆ. ಪೋಲಿಸ್, ಇಡೀ ಸಮಾಜವನ್ನೇ- ತಂದೆ, ತಾಯಿ, ಗೆಳೆಯರು, ಶಿಕ್ಷಕರು- ಜಾತಿ ಸಂಘಗಳು, ಮಠಗಳು ಇವೆಲ್ಲವನ್ನೂ ಬಳಸುತ್ತಾರೆ.

ಹೀಗಾಗಿ ಕಮ್ಯೂನಿಸ್ಟ್ ಪಕ್ಷದ ಬೆಳವಣಿಗೆಯೇ ಒಂದು ಸಂಘರ್ಷ ತೀವ್ರ ವರ್ಗ ಸಂಘರ್ಷ. ಇದು ಎರಡು ಹಂತದಲ್ಲಿ ನಡೆಯುತ್ತದೆ. ಒಂದು ನೀವು ಹೇಳಿದಂತೆ ರೈತರ, ಕಾರ್ಮಿಕರ, ಇತರ ವಿಭಾಗಗಳ ಜೀವನದ ಪ್ರಶ್ನೆಗಳ ಪರಿಹಾರಕ್ಕಾಗಿ ಮಾಡುವ ಆರ್ಥಿಕ ಹೋರಾಟ ಈ ಹೋರಾಟ ಎಷ್ಟು ವ್ಯಾಪಕವಾಗಿ ನಡೆದರೂ, ಪ್ರಯೋಜನ ಪಡೆದುಕೊಂಡರೂ ಹೋರಾಟದಲ್ಲಿ ಪಾಲ್ಗೊಂಡವರನ್ನು ವ್ಯವಸ್ಥೆಯ ಹಿಡಿತದಿಂದ ಹೊರತೆಗೆಯದೆ, ರಾಜಕೀಯವಾಗಿ ಸೈದ್ಧಾಂತಿಕವಾಗಿ ಬಂಡವಾಳಶಾಹಿ-ಭೂಮಾಲಿಕ ವ್ಯವಸ್ಥೆಯ ಪ್ರಭಾವದಿಂದ ಹೊರತೆಗೆದ ಪಕ್ಷದ ಪ್ರಭಾವದ ಬೆಳವಣಿಗೆಯಾಗುವುದಿಲ್ಲ; ರಾಜಕೀಯವಾಗಿ ಫಲಕೊಡುವುದಿಲ್ಲ . ಇದು ಅನೇಕ ಚುನಾವಣೆಗಳಲ್ಲಿ ಸ್ಪರ್ಧಿಸಿ ಗೆದ್ದು ಸೋತು ಪಕ್ಷ ಪಡೆದಿರುವ ಅನುಭವ.

ಈ ಹಿನ್ನೆಲೆಯಲ್ಲಿ ಪಕ್ಷದ ರಾಜಕೀಯ ಸಂಘರ್ಷ, ಸೈದ್ಧಾಂತಿಕ ಸಂಘರ್ಷ ಬೆಳೆಯದೆ ಜನಸಮುದಾಯವನ್ನು ಬಂಡವಾಳಶಾಹಿ ಪ್ರಭಾವದಿಂದ ಹೊರತರದೆ ನಾವು ಎಲ್ಲಾ ಕಡೆ ಇತರ ಪಕ್ಷಗಳಂತೆ ಚುನಾವಣೆಯಲ್ಲಿ ಸ್ಪರ್ಧಿಸಿದರೆ ನಮ್ಗೆ ಫಲ ದೊರೆಯುವುದಿಲ್ಲ.

ಇದರ ಜೊತೆಗೆ ಇಂದಿನ ಚುನಾವಣಾ ಪದ್ಧತಿಯೂಒಂದು ಕಾರಣ-ಚುನಾವಣಾ ಭ್ರಷ್ಟಚಾರ-ಹಣಬಲ,ತೋಳ್ಬಲ, ಜಾತಿ ವ್ಯಕ್ತಿಗಳಿಗೆ ಪ್ರಾಶಸ್ತ್ಯ ನೀಡುವ ಒಂದು ಮ... ಹೆಚ್ಚು ಬಂದವರು ಗೆದ್ದರೂ, ಸೋತವರಿ... 40-50 ಸಾವಿರ ಜನ (ವಿಧಾನ ಸಭಾ ಚುನಾವಣೆಗಳಲ್ಲಿ), ಲಕ್ಷಗಟ್ಟಲೇ ಲೋಕಸಭಾ ಚುನಾವಣೆಗಳಲ್ಲಿ ಬೆಂಬಲಿಸಿದರೂ ಅವ... ಮತಕ್ಕೆ ಬೆಲೆಇಲ್ಲ ಎನ್ನುವ ವ್ಯವಸ್ಥೆಯು ಕಾರಣ. ಇದಕ್ಕೆ ಬದಲಾಗಿ ಪಕ್ಷ ಧೋರಣೆಗಳಿಗೆ ಪ್ರಾಧಾನ್ಯತೆ ಬರುವ ಮ... ಪ್ರಮಾಣಕ್ಕನುಗುಣ ಸ್ಥಾನ ಪದ್ಧತಿ ಇದ್ದರೆ ... ಸಿಪಿಐ(ಎಂ) ಎಲ್ಲಾ ಕಡೆಯಲ್ಲಿಯು ಸ್ಪರ್ಧಿಸಬಹುದು.

ಸ್ವದೇಶಿಯ ಸರಕಾರದ ವಿದೇಶಿ ಪರ ನಿಲುವಿನ ಮತ್ತೊಂದು ಉದಾಹರಣೆ

ಟ್ರಿಪ್ಸ್ ಪುನರ್ವಿಮರ್ಶೆ ಸಭೆಗೆ ಏನೂ ಸಿದ್ಧತೆಯಿಲ್ಲವೇಕೆ

1994 ರಲ್ಲಿ ಮರಾಕೇಶ್‌ನಲ್ಲಿ ಗ್ಯಾಟ್ ಒಪ್ಪಂದ ಟ್ರಿಪ್ಸ್ (ಅಂದರೆ ವ್ಯಾಪಾರ-ಸಂಬಂಧೀ ಬೌದ್ಧಿಕ ಆಸ್ತಿ ಹಕ್ಕುಗಳು) ಕುರಿತಾದ ಅಂಶಗಳ ಪುನರ್ವಿಮರ್ಶೆಗೆ ನವಂಬರ್‌ನಲ್ಲಿ ಅಮೆರಿಕಾದ ಸೀಟ್ಲ್‌ನಲ್ಲಿ ವಿಶ್ವವ್ಯಾಪಾರ ಸಂಸ್ಥೆಯ ಮಂತ್ರಿ ಮಟ್ಟದ ಸಮ್ಮೇಳನ ನಡೆಯಲಿದೆ. ಆದರೆ ಭಾರತದ ಹಿತಾಸಕ್ತಿಗಳನ್ನು ರಕ್ಷಿಸುವ ಉದ್ದೇಶದಿಂದ ಯಾವುದೇ ಸಿದ್ಧತೆ ನಡೆಯುತ್ತಿಲ್ಲ ಎಂಬ ಬಗ್ಗೆ ಈ ರಂಗದಲ್ಲಿನ ಪರಿಣತರು ಆತಂಕ ವ್ಯಕ್ತ ಪಡಿಸಿದ್ದಾರೆ.

ಆಗಸ್ಟ್ 28 ರಂದು ಪ್ರಖ್ಯಾತ ಲೇಖಕರು ಮತ್ತು ಪೇಟೆಂಟ್ ಹಕ್ಕುಗಳ ಬಗ್ಗೆ ವಿಶೇಷ ಅಧ್ಯಯನ ನಡೆಸಿರುವ ಪರಿಣತರ ಒಂದು ನಿಯೋಗ ರಾಷ್ಟ್ರಪತಿ ಕೆ.ಆರ್. ನಾರಾಯಣನ್ ರನ್ನು ಭೇಟಿಯಾಗಿ ಈ ವಿಷಯದಲ್ಲಿ ಒಂದು ಮನವಿ ಪತ್ರವನ್ನು ಸಲ್ಲಿಸಿದೆ.

ಭಾರತ ಸರಕಾರ ಈ ರೀತಿ ಸಿದ್ಧತೆ ನಡೆಸದಿರುವುದರಿಂದ 1994 ರ ಒಪ್ಪಂದದಲ್ಲಿ ಆಗಿದ್ದ ಅನ್ಯಾಯವನ್ನು ಸರಿಪಡಿಸಲು ಸಿಕ್ಕಿರುವ ಒಂದು ಉತ್ತಮ ಅವಕಾಶವನ್ನು ನಾವು ಕಳೆಕೊಳ್ಳುವಂತಾಗಬಹುದು ಎಂದು ನಿಯೋಗ ನೆನಪಿಸಿದೆ.

ನ್ಯಾಯಮೂರ್ತಿ ವಿ.ಆರ್.ಕೃಷ್ಣ ಅಯ್ಯರ್, ಡಾ.ಬಿಪ್ಲವ್ ದಾಸ್‌ಗುಪ್ತಾ, ಡಾ. ಮುಚುಂದ್ ದುಬೆ, ಬಿ.ಕೆ.ಶೀಲ್, ಪ್ರೊ. ಪ್ರಭಾತ್ ಪಟ್ನಾಯಕ್, ಎಸ್.ಪಿ.ಶುಕ್ಲಾ ಹಾಗೂ ಸ್ವಾಮಿ ಅಗ್ನಿವೇಶರು ಇದ್ದ ಈ ನಿಯೋಗ ಈಗಲಾದರೂ ಸರಕಾರದ ಬಳಿ ಈ ವಿಚಾರವನ್ನೆತ್ತಿ ಈ ಬಗ್ಗೆ ಒಂದು ರಾಷ್ಟ್ರೀಯ ಸಮ್ಮತಿಯನ್ನು ರೂಪಿಸಬೇಕು ಎಂದು ರಾಷ್ಟ್ರಪತಿಗಳನ್ನು ಆಗ್ರಹ ಪಡಿಸಿತು.

ಈ ಪುನರ್ವಿಮರ್ಶೆ ಸಭೆಯಲ್ಲಿ ಬಡ ದೇಶಗಳು ಒಟ್ಟಾಗಿ ತಮ್ಮ ಕಣ್ಣೋಟವನ್ನು ಮುಂದಿಡದಿದ್ದರೆ ಟ್ರಿಪ್ಸ್ ಒಪ್ಪಂದದಲ್ಲಿ ಉಳಿದಿರುವ ಅಲ್ಪಸ್ವಲ್ಪ ಆರ್ಥಿಕ ಸಾರ್ವಭೌಮತ್ವವನ್ನು ಶ್ರೀಮಂತ ದೇಶಗಳು ಕಿತ್ತುಕೊಳ್ಳುತ್ತವೆ ಎಂದು ನಿಯೋಗ ಅರ್ಪಿಸಿದ ಮನವಿ ಎಚ್ಚರಿಸಿದೆ.

ಜಗತ್ತಿನ ಅತ್ಯಂತ ಬಡದೇಶಗಳ ಪಟ್ಟಿಯಲ್ಲಿ ಬರುವ ಭಾರತವನ್ನು ಇನ್ನೂ ಕೆಲವು ತಲೆಮಾರುಗಳಲ್ಲಾದರೂ ಮಧ್ಯಮ ಆದಾಯದ ದೇಶಗಳ ಪಟ್ಟಿಯಲ್ಲಿ ತರಬಹುದೇ ಎಂಬುದನ್ನು ನಿರ್ಣಯಿಸುವ ... ಮಹತ್ವಪೂರ್ಣ ಸಭೆಗೆ ಏನೇನೂ ಸಿದ್ಧತೆ ನಡೆದಿಲ್ಲ. ಈ ಬಗ್ಗೆ ಒಂದು ರಾಷ್ಟ್ರೀಯ ಒಮ್ಮತ ರೂಪಿಸಲು ಸರಕಾರ ಏನೇನೂ ಮಾಡಿಲ್ಲ. ರಾಜ್ಯಸಭೆಯ ಅಧಿವೇಶನ ಕರೆಯಬಹುದಿತ್ತು. ಆದಾಗದಿದ್ದರೆ ಕನಿಷ್ಠ ಒಂದು ಸರ್ವಪಕ್ಷ ಸಭೆಯನ್ನಾದರೂ ಕರೆಯಬಹುದಿತ್ತು. ಅದನ್ನೂ ಮಾಡಿಲ್ಲ. ಕ್ಷೇತ್ರದ ಪರಿಣತರೊಡನೆ ಸಮಾಲೋಚನೆಯನ್ನು ನಡೆಸಿಲ್ಲ. ಸರಕಾರದ ನಿಲುವಿನಿಂದಾಗಿ ಮುಂದಿನ ಸರಕಾರವೂ ದಿಕ್ಕಿನಲ್ಲಿ ಏನೂ ಮಾಡಲಾಗದಂತಹ ... ಏರ್ಪಡುತ್ತದೆ ಎಂದು ನಿಯೋಗ ಹೇಳಿದೆ.

ದೇಶಭಕ್ತಿ, ಸ್ವಾಭಿಮಾನ ಕೇವಲ ತಮ್ಮಲ್ಲಿದೆ ಎಂದು ಹಾರಾಡುತ್ತಿರುವ ಬಿಜೆಪಿ ಕೂಟದ ಮುಖಂಡರಿಗೆ ಬಹುಶಃ ಈ ... ಯೋಚಿಸಲು ಕೂಡಾ ಪುರುಸೊತ್ತು ... ಏಕಿರಬಹುದು? ಇದು ಕೂ... ವಿದೇಶಿಯರನ್ನು ಸಂತುಷ್ಟಗೊಳಿಸಲಿ... ಇರಬಹುದೇ? ಇದು ಅತ್ಯಂತ ವಿದೇಶಿ-... ಸರ್ಕಾರ ಎಂಬುದನ್ನು ಪರಿಣತರ ಈ ಅ... ಕೂಡಾ ಸಾಬೀತು ಮಾಡುತ್ತಿದೆಯಲ್ಲವೇ...

ಚುನಾವಣಾ ಆಯೋಗದ ಮೇಲೆ ಬಿಜೆಪಿ ಏಕೆ ಕೆಂಡ ಕಾರುತ್ತಿದೆ?

ಆರ್‌ಎಸ್‌ಎಸ್ ಪತ್ರಿಕೆ 'ಪಾಂಚಜನ್ಯ' ಚುನಾವಣಾ ಯೋಗ ಕಾಂಗ್ರೆಸ್ ಪರವಾಗಿ ವರ್ತಿಸುತ್ತಿದೆ ಎಂದು ರೋಪಿಸಿದ ಬಗ್ಗೆ ಕಳೆದ ಸಂಚಿಕೆಯಲ್ಲಿ ಓದಿದ್ದೀರಿ. ಬಿಜೆಪಿ ುಖಂಡರೂ ಇಂತಹ ಟೀಕೆಯಲ್ಲಿ ಹಿಂದೆ ಬಿದ್ದಿಲ್ಲ. ಇದಕ್ಕೆ ಾರಣಗಳೇನು ಎಂದು ತಡಕಾಡಬೇಕಾದ ಅವಶ್ಯಕತೆಯಿಲ್ಲ. ಂವಿಧಾನಾತ್ಮಕ ಸಂಸ್ಥೆಗಳ ಬಗ್ಗೆ ಬಿಜೆಪಿಯ ದ್ವೇಷದ ಬಿಂಬವೇ ಲ್ಲಿಯೂ ಕಾಣಸುತ್ತಿರುವುದು. ನಮ್ಮ ಗಣತಂತ್ರದ ರ್ಮನಿರಪೇಕ್ಷ ಸ್ವರೂಪವನ್ನು, ಸಮಗ್ರತೆಯನ್ನು ಎತ್ತಿ ತೋರುವ ಂವಿಧಾನ ರಚಿಸಿದ ಸಂಸ್ಥೆಗಳೆಂದರೆ ಬಿಜೆಪಿಗೆ ಅದೇಕೋ ದ್ವೇಷ.

ಮೂವರು ಸದಸ್ಯರಿರುವ ಚುನಾವಣಾ ಆಯೋಗವನ್ನು ಚಿಸಿದ್ದು ದೇಶದಲ್ಲಿ ನಿಷ್ಪಕ್ಷಪಾತ ಚುನಾವಣೆಗಳನ್ನು ಡೆಸಲಿಕ್ಕಾಗಿ. ಇದನ್ನು ಕಟ್ಟುನಿಟ್ಟಾಗಿ ಪಾಲಿಸಲು ೊರಟಿರುವುದೇ ಚುನಾವಣಾ ಆಯೋಗದ ಬಗ್ಗೆ ಜೆಪಿ-ಆರ್‌ಎಸ್‌ಎಸ್ ನ ಕೋಪಕ್ಕೆ ಕಾರಣ.

ಬಿಜೆಪಿ ಕೂಟ ಜೂನ್ ತಿಂಗಳಲ್ಲೇ ಅವಸರದಲ್ಲಿ ಚುನಾವಣೆ ಡೆಸಬೇಕೆಂದು ಬಯಸಿತ್ತು. ಆದರೆ ಚುನಾವಣಾ ಆಯೋಗ ಅದು ೇಳಿದಂತೆ ಕುಣಿಯಲು ನಿರಾಕರಿಸಿತು. ಅಲ್ಲಿಂದಲೇ ರಂಭವಾಯಿತು ಬಿಜೆಪಿಕೂಟದ ಕೋಪ. ನಂತರ ಮುಖ್ಯ ುನಾವಣಾ ಆಯುಕ್ತರ ಮೇಲೆ, ಚುನಾವಣಾ ಆಯೋಗದ ಮೇಲೆ ಆ ಕೂಟದಿಂದ ಒಂದಿಲ್ಲೊಂದು ಧಾಳಿ, ದೂರು ೇಳಿಬರುತ್ತಲೇ ಇದೆ.

ಟೆಲಿವಿಷನ್ ಚಾನೆಲ್‌ಗಳಲ್ಲಿ ಜಾಹೀರಾತಿಗೆ ಅವಕಾಶ ೊಡಬಾರದು ಎಂಬ ಆಯೋಗದ ನಿರ್ಣಯವನ್ನೇ ಗೊಳ್ಳಿ. ಇದೇನು ಹೊಸ ನಿರ್ಣಯವಲ್ಲ. ಹಿಂದೆ ತಗೊಂಡ ರ್ಣಯವನ್ನು ಅದು ಪುನರುಚ್ಚರಿಸಿದೆಯಷ್ಟೆ. ಇದು ರ್ಕಬದ್ಧ ಕೂಡಾ. ಏಕೆಂದರೆ ಕಪ್ಪು ಹಣದ ಬಲವಿಲ್ಲದ ಾಜಕೀಯ ಪಕ್ಷಗಳಿಗೆ ಟಿ.ವಿ.ಚಾನೆಲ್‌ಗಳಲ್ಲಿ ಜಾಹೀರಾತು ಸಮಯ ಖರೀದಿಸಲು ಬೇಕಾದ ಅಪಾರ ಹಣದ ಸಾಮರ್ಥ್ಯವಿರುವುದಿಲ್ಲ. ಅದರ ಬದಲು ದೂರದರ್ಶನ, ಆಕಾಶವಾಣಿಯಲ್ಲಿ ಆಯೋಗ ಸಮಯ ಒದಗಿಸಿದೆ. ಆದರೆ ಬಿಜೆಪಿ ಈ ನಿರ್ಣಯಕ್ಕೆ ಪಕ್ಕಾ ವಿರೋಧಿ. ಏಕೆಂದರೆ ಬಂಡವಾಳಶಾಹಿ ಪೋಷಕರು ಸುರಿದ ಅಪಾರ ಹಣ ಅವರ ಬಳಿ ತುಂಬಿ ತುಳುಕುತ್ತಿದೆ. ಇದರ ಸಹಾಯದಿಂದ ಟೆಲಿವಿಷನ್ ಚಾನೆಲ್‌ಗಳಲ್ಲಿ ರಾಜಕೀಯ ಪ್ರಚಾರವನ್ನು ತುಂಬಿಬಿಡುವ ಯೋಜನೆ ಅದರದಾಗಿತ್ತು. ಅದೀಗ ನೆರವೇರಿಲ್ಲ. ಕೋಪ ಸಹಜ ತಾನೆ?

ಚುನಾವಣಾ ಆಯೋಗಕ್ಕೆ ಅಭಿಪ್ರಾಯ ಸಂಗ್ರಹ, ಅಭಿಮತ ಸಮೀಕ್ಷೆ, ಎಕ್ಸಿಟ್ ಪೋಲ್‌ಗಳನ್ನು ಚುನಾವಣೆ ಆರಂಭವಾದಂದಿನಿಂದ ನಿಷೇಧಿಸುವ ಆದೇಶ ನೀಡುವ ಅಧಿಕಾರವಿಲ್ಲ ಎಂದು ಬಿಜೆಪಿ ಸರಕಾರ ಸುಪ್ರೀಂ ಕೋರ್ಟ್ ಎದುರು ವಾದಿಸುತ್ತಿದೆ. ಆದರೆ ಅದರ ಮೈತ್ರಿಕೂಟದ ಹೊಸ ಸದಸ್ಯ ಜನತಾದಳ(ಯು) ತದ್ವಿರುದ್ಧ ಅಭಿಪ್ರಾಯ ನೀಡಿದೆ. ಅದೂ ಸಹಜ ತಾನೇ?

ಬಿಜೆಪಿಯ ಕೋಪ ಹೆಚ್ಚಿಸಿದ ಇನ್ನೊಂದು ಸೂಚನೆಯೆಂದರೆ ಪ್ರಧಾನಮಂತ್ರಿಗಳು ಚುನಾವಣಾ ಪ್ರಚಾರಕ್ಕೆ ಹೋಗುವಾಗ ಸರಕಾರ ಒದಗಿಸಿದ ವಿಮಾನದಲ್ಲಿ ಪತ್ರಿಕಾ ಜನಗಳನ್ನು ಕೊಂಡೊಯ್ಯಬಾರದು ಎಂಬುದು. ಇದು ಪಕ್ಷಪಾತಪೂರ್ಣ, ಮಾಧ್ಯಮದ ಮೇಲೆ ಮಿತಿಹಾಕುವ ಕ್ರಮ ಎಂದು ಟೀಕಿಸಿದೆ. ಆದರೆ 1998 ರ ಚುನಾವಣೆಗಳಲ್ಲಿ ಆಗಿನ ಪ್ರಧಾನಮಂತ್ರಿ ಗುಜರಾಲ್‌ರವರಿಗೆ ಕೂಡಾ ಇಂತಹುದೇ ಸೂಚನೆಯನ್ನು ಅನ್ವಯಿಸಲಾಗಿತ್ತು ಎಂಬುದನ್ನು ಅದೇಕೋ ಮರೆತೇ ಬಿಟ್ಟಿದೆ. ಆಗ ಬಿಜೆಪಿ ಈ ಬಗ್ಗೆ ತುಟಿಪಿಟಿಕ್ಕೆಂದಿರಲಿಲ್ಲ.

ಸರ್ವಾಧಿಕಾರಿಶಾಹಿ ಮನೋಭಾವದ ಬಿಜೆಪಿ-ಆರ್‌ಎಸ್‌ಎಸ್ ಕೂಟ ಸಂಸದೀಯ ಪ್ರಜಾಪ್ರಭುತ್ವ ವ್ಯವಸ್ಥೆಯ ಪ್ರಮುಖ ಆಧಾರಗಳಾಗಿರುವ ಸಂಸ್ಥೆಗಳನ್ನೆಲ್ಲಾ ವ್ಯವಸ್ಥಿತವಾಗಿ ಬುಡಮೇಲು ಮಾಡುವ ಹವಣಿಕೆಯಲ್ಲಿದೆ ಎಂಬುದನ್ನು ಇವೆಲ್ಲಾ ಜನತಾದಳ (ಸಂಯುಕ್ತ) ದಂತಹ ಕಣ್ಣಿದ್ದ ಕುರುಡರೂ ಬೆಚ್ಚುವಂತೆ ಎತ್ತಿ ತೋರುತ್ತಿದೆ. ತಮ್ಮ 'ಹಿಂದುತ್ವ' ವನ್ನು ಹೇರುವ ದೂರಗಾಮಿ ಉದ್ದೇಶಕ್ಕೆ ಇದು ಅವರಿಗೆ ಅನಿವಾರ್ಯ.

ರಾಷ್ಟ್ರಪತಿ ಕೆ.ಆರ್.ನಾರಾಯಣನ್‌ರವರ ಮೇಲೆ ವ್ಯವಸ್ಥಿತ ಧಾಳಿಗಳ ಹಿಂದಿರುವುದು ಕೂಡ ಇದೇ ಯೋಚನೆ. ಎಐಡಿಎಂಕೆ ಬೆಂಬಲ ಹಿಂತೆಗೆದುಕೊಂಡ ನಂತರ ವಾಜಪೇಯಿ ಯವರನ್ನು ಬಹುಮತ ಸಾಬೀತು ಪಡಿಸುವಂತೆ ಅವರು ಕೇಳಿದ್ದು ಪಕ್ಷಪಾತದ ವರ್ತನೆ ಎಂದು ಈಗಲೂ ಈ ಕೂಟ ಹೇಳಿಕೊಳ್ಳುತ್ತಿದೆ. ಆದರೆ ಇತ್ತೀಚಿನ ಅವಧಿಗಳಲ್ಲಿ ಕೂಡಾ ದೇವೇಗೌಡರಿಗೆ, ಗುಜರಾಲ್‌ರಿಗೆ ಇದನ್ನೇ ಹೇಳಲಾಗಿತ್ತು. ಆಗ ಬಿಜೆಪಿ ಆ ಸರಕಾರಗಳನ್ನು ಅಧಿಕಾರದಿಂದಿಳಿಸುವಲ್ಲಿ ಸಂತೋಷದಿಂದ ಭಾಗವಹಿಸಿತ್ತು ಎಂದು ಮಾತ್ರ ಅವರಿಗೆ ನೆನಪಿಸಬಾರದಂತೆ. ಒಂದು ಉಸ್ತುವಾರಿ ಸರಕಾರ ತನ್ನ ಮಿತಿ ಮೀರದಂತೆ ವಾಜಪೇಯಿ ಸರಕಾರಕ್ಕೆ ಆಗಾಗ ಕಡಿವಾಣ ಹಾಕಿದ್ದು ರಾಷ್ಟ್ರಪತಿಗಳ ಮೇಲೆ ಕಾವಿಪಡೆಗಳು ಕಿಡಿಕಾರಲು ಮತ್ತೊಂದು ಕಾರಣ.

ಬಿಜೆಪಿ ಸೇನಾಪಡೆಗಳ ಸಮಗ್ರತೆಯನ್ನು ಕೂಡಾ ನಿರಂತರವಾಗಿ ಬುಡಮೇಲು ಮಾಡುವ ಪ್ರಯತ್ನ ನಡೆಸಿದೆ. ಅಡ್ಮಿರಲ್ ಭಾಗವತರ ವಜಾ ಇದಕ್ಕೆ ಒಂದು ಉದಾಹರಣೆಯಷ್ಟೆ. ಸ್ವತಂತ್ರ ಸೇನಾಧಿಕಾರಿಗಳನ್ನು ಬದಿಗೊತ್ತಿ ಕಾವಿ ಬುದ್ಧಿಯ ಅಧಿಕಾರಿಗಳಿಗೆ ಪ್ರೋತ್ಸಾಹ ನೀಡಲಾಗುತ್ತಿದೆ.

ರಾಷ್ಟ್ರಪತಿಗಳಾಗಲೀ, ಚುನಾವಣಾ ಆಯೋಗವಾಗಲೀ ಅಥವಾ ಸಶಸ್ತ್ರ ಸೇನಾ ಪಡೆಗಳ ಉನ್ನತಾಧಿಕಾರಿಗಳೇ ಆಗಲಿ ಬಿಜೆಪಿ-ಆರ್‌ಎಸ್‌ಎಸ್ ಕೂಟ ಇವರೆಲ್ಲರ ಬಗ್ಗೆ ತೋರುತ್ತಿರುವ ವರ್ತನೆಯಲ್ಲಿ ಒಂದು ನಿರ್ದಿಷ್ಟ ವಿಧಾನ ಎದ್ದು ಕಾಣುತ್ತಿದೆ. ಈ ಎಲ್ಲಾ ಸಂಸ್ಥೆಗಳನ್ನು ತಮ್ಮ ಅಡಿಯಾಳಾಗಿಸಬೇಕು, ಇಲ್ಲವೇ ತಮ್ಮ ಹತೋಟಿಯ ಆಚೆಗಿರುವವರನ್ನು ಬುಡಮೇಲು ಮಾಡಬೇಕು - ಇದೇ ಆ ನಿರ್ದಿಷ್ಟ ವಿಧಾನ. ಆದ್ದರಿಂದ ಬಿಜೆಪಿಯನ್ನು ತಡೆಯುವಲ್ಲಿ ವಿಫಲತೆಯೆಂದರೆ ಅದು ನಮ್ಮ ಈ ಗಣತಂತ್ರ ತಳಪಾಯಕ್ಕೇ ಸಂಚಕಾರ ಎಂದೇ ಅರ್ಥ.

ಸಿಪಿಐ(ಎಂ) ಮುನ್ನಡೆಯತ್ತ

ಮೊದಲ ಸುತ್ತಿನ ಮತದಾನದಲ್ಲಿ ಸಿಪಿಐ(ಎಂ) ಸ್ಪರ್ಧಿಸಿದ 8 ಕ್ಷೇತ್ರಗಳ ವರದಿಯನ್ನು ನೀವು ಈಗಾಗಲೇ ಓದಿದ್ದೀರಿ. ಎರಡನೇ ಸುತ್ತಿನ ಮತದಾನದಲ್ಲಿ ಎರಡು ಕ್ಷೇತ್ರಗಳಲ್ಲಿ ಸಿಪಿಐ(ಎಂ) ಸ್ಪರ್ಧಿಸಿದೆ.

ಉಲ್ಲಾಳ: ದ.ಕನ್ನಡ ಜಿಲ್ಲೆಯ ಕ್ಷೇತ್ರ ಇದು. ಮಂಗಳೂರು ನಗರದ ಭಾಗಗಳೂ ಸೇರಿದಂತೆ ನಗರದ ಹೊರವಲಯದ ಗ್ರಾಮೀಣ ಪ್ರದೇಶ, ಸಮುದ್ರ ತೀರ, ಉಲ್ಲಾಳದ ಪ್ರಸಿದ್ಧ ದರ್ಗಾ ಈ ಕ್ಷೇತ್ರದ ಭಾಗಗಳು.

ಈ ಕ್ಷೇತ್ರದ ಪ್ರದೇಶದಲ್ಲಿ ರೈತ ಸಂಘ 50 ರ ದಶಕದಿಂದಲೂ ಅಲ್ಲಿಯ ಭೂಮಾಲಿಕರ ವಿರುದ್ಧ, ಗೇಣಿದಾರರ ಪರವಾಗಿ ತೀವ್ರವಾಗಿ ಸಂಘರ್ಷ ನಡೆಸಿದೆ. ರೈತರ ಹತ್ತು ಹಲವು ಸಮಸ್ಯೆಗಳ ಬಗ್ಗೆ ಹೋರಾಟ ಮಾಡಿದೆ. ಸಹಕಾರಿ ಚಳುವಳಿಯಲ್ಲಿಯೂ ಪ್ರವೇಶ ಮಾಡಿ ದಕ್ಷ ಹಾಗೂ ಪ್ರಾಮಾಣಿಕ ಸೇವೆಯನ್ನು ಸಲ್ಲಿಸಿ ಹೆಸರು ಗಳಿಸಿದೆ.

ದ.ಕ ಜಿಲ್ಲೆಯ ಪ್ರಸಿದ್ಧ ಬೀಡಿ ಕಾರ್ಮಿಕರ ಚಳುವಳಿಯ ಮುಖ್ಯ ನೆಲೆಗಳಲ್ಲಿ ಉಲ್ಲಾಳ ಕ್ಷೇತ್ರವೂ ಒಂದು. ಹೀಗೆ ಬೀಡಿ ಕಾರ್ಮಿಕರ ನಡುವೆಯೂ ಪ್ರಭಾವ ಹೊಂದಿದೆ. ಹೆಂಚಿನ ಕಾರ್ಮಿಕರೂ ಕೂಡ ದೊಡ್ಡ ಸಂಖ್ಯೆಯಲ್ಲಿ ಈ ಕ್ಷೇತ್ರದಲ್ಲಿದ್ದಾರೆ. ಈ ಕ್ಷೇತ್ರದಲ್ಲಿ ಸಿಪಿಐ(ಎಂ) ಈಗಾಗಲೇ ಹಲವು ಬಾರಿ ಅಭ್ಯರ್ಥಿಗಳನ್ನು ನಿಲ್ಲಿಸಿದೆ. 1983 ರಲ್ಲಿ ಪಿ.ರಾಮಚಂದ್ರರಾವ್ ಈ ಕ್ಷೇತ್ರದಿಂದ ಸ್ಪರ್ಧಿಸಿ ಜಯಗಳಿಸಿದರು.

ಈ ಬಾರಿ ಪಕ್ಷದ ಸ್ಪರ್ಧಿ, ಈಗಾಲೇ ಐಕ್ಯರಂಗದ ಓದುಗರಿಗೆ ಗೊತ್ತಿರುವಂತೆ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಬಿ.ಮಾಧವ ರವರು. ಕೆ.ಜಯರಾಮಶೆಟ್ಟಿ, 1994 ರಲ್ಲಿ ಈ ಕ್ಷೇತ್ರದಿಂದ ಚುನಾಯಿತರಾಗಿದ್ದವರು ಈ ಬಾರಿಯೂ ಬಿಜೆಪಿ ಅಭ್ಯರ್ಥಿ. ಕಾಂಗ್ರೆ ನಿಂದ ಹಿಂದೆ ಶಾಸಕರಾಗಿ ಆಯ್ಕೆಯಾಗಿದ್ದ ಯು.ಟಿ.ಫರೀದ್ ಸ್ಪರ್ಧಿಯಾಗಿದ್ದಾರೆ.

ನೂರಾರು ಜನ ಹೆಂಚಿನ ಕಾರ್ಮಿಕರು, ರೈತರು, ಬೀಡಿಕಾರ್ಮಿಕರು ಮಹಿಳೆಯರು ಮನೆ ಮನೆಗೆ ತೆರಳಿ ಬಿರುಸಿನ ಪ್ರಚಾರ ಕೈಗೊಂಡಿದ್ದಾರೆ. ಇತರೆಲ್ಲಾ ಪಕ್ಷಗಳ ವಾಹನಗಳ ಆರ್ಭಟದೊಡನೆ ಕಾರ್ಮಿಕ, ರೈತರ ಈ ಕಾಲು ಯಾತ್ರೆ ಸ್ಪರ್ಧಿಸಿ ಜನ ಮನ ಗೆಲ್ಲಲು ಪ್ರಯತ್ನ ನಡೆಸಿದೆ.

ಈ ತ್ರಿಕೋನ ಸ್ಪರ್ಧೆಯಲ್ಲಿ, ಬಿಜೆಪಿಯನ್ನು ಸೋಲಿಸುವ ದೃಢ ನಿರ್ಧಾರ ಮತದಾರರಲ್ಲಿ ಪ್ರತಿಬಿಂಬಿತವಾಗಿದೆ. ಅಲ್ಪ ಸಂಖ್ಯಾತರ ಮತಗಳೇ ನಿರ್ಧಾರಕವಾಗುವ ಈ ಕ್ಷೇತ್ರದಲ್ಲಿ ಪಕ್ಷ ಗೆಲುವನ್ನು ನಿರೀಕ್ಷಿಸುತ್ತದೆ.

ಹಾನಗಲ್:

ಈ ಬಾರಿ ಹೊಸದಾಗಿ ಸ್ಪರ್ಧಿಸುತ್ತಿರುವ ಕ್ಷೇತ್ರದಲ್ಲಿ ಹಾವೇರಿ ಜಿಲ್ಲೆಯ ಹಾನಗಲ್ ಕೂಡ ಒಂದು. ಕೃಷಿ ಕೂಲಿಕಾರ ಸಂಘಟನೆ ಶೀಘ್ರವಾಗಿ ಹಬ್ಬುತ್ತಿರುವ ಈ ಕ್ಷೇತ್ರದಲ್ಲಿ ಇತ್ತೀಚೆಗೆ ಡಿ.ವೈ.ಎಫ್.ಐ, ಪ್ರಾಂತ ರೈತ ಸಂಘ, ಎಸ್.ಎಫ್.ಐ ಸಂಘಟನೆಗಳೂ ಆರಂಭವಾಗಿವೆ. 1967 ರಿಂದಲೇ ಆರಂಭವಾದ ಭೂಮಿ ಆಕ್ರಮಣ ಚಳುವಳಿ 1994 ರಿಂದ ಈ ಪ್ರದೇಶದಲ್ಲಿ ವ್ಯಾಪಕವಾಗಿ ಬೆಳೆದಿದ್ದು ಹಲವು ಧೀರೋದಾತ್ತ ಹೋರಾಟಗಳನ್ನು ನಡೆಸಲಾಗಿದೆ. 1997 ರಲ್ಲಿ 800 ಕ್ಕೂ ಹೆಚ್ಚು ಜನ ಕೂಲಿಕಾರರು ಜೈಲಿಗೆ ಹೋಗಿದ್ದರು.

ಈ ಚಳುವಳಿಯ ಮುಂದಿನ ಹೆಜ್ಜೆಯಾಗಿ ಆಕ್ರಮ ಭೂಮಿ ಸಕ್ರಮಗೊಳಿಸಲು ಸಮಿತಿಯ ಪದನಿಮಿತ್ತ ಅಧ್ಯಕ್ಷರೂ ಆಗಿರುವ ಫಕೀರಪ್ಪ ಹೋತನಹಳ್ಳಿ ಶಾಸಕ ಸ್ಥಾನಕ್ಕೆ ಸ್ಪರ್ಧಿಸಲು ನಿರ್ಧರಿಸಲಾಯಿತು.

ತರಾತುರಿಯಿಂದಲೇ ಚುನಾವಣಾ ಪ್ರಚಾರಕ್ಕೆ ಇಳಿದರೂ ಧಾರವಾಡ, ದಾವಣಗೆರೆ, ಉ.ಕ ಹಾಗೂ ಬೆಳಗಾಂ ಜಿಲ್ಲೆಯ ವಿದ್ಯಾರ್ಥಿ, ಯುವ ಜನ ಹಾಗೂ ಕಾರ್ಮಿಕ ಸಂಗಾತಿಗಳು ಸ್ಥಳೀಯ ಕೂಲಿಕಾರ ಸಂಗಾತಿಗಳು ಹಾಗೂ ಪ್ರಾಂತ ರೈತ ಸಂಘದ ಮುಂದಾಳುಗಳೊಡನೆ ಸೇರಿ ಹಳ್ಳಿ ಹಳ್ಳಿಗೂ ತೆರಳಿ ಪ್ರಚಾರ ನಡೆಸಿದರು. ಕೇವಲ ಊರಿನ ದಣಿಗಳ ಒತ್ತಡಗಳಿಗೊಳಗಾಗಿ ಮೂಕರಾಗಿ ಮತ ಹಾಕುವುದಷ್ಟೇ ಗೊತ್ತಿದ್ದ ಕೂಲಿಕಾರರಿಗೆ ತಾವೇ ಪ್ರಚಾರದ ಮುಂದಾಳಾಗಿ ತಮ್ಮವನೇ ಆದ ಒಬ್ಬ ಅಭ್ಯರ್ಥಿಗೆ ಮತ ಯಾಚಿಸುವುದು ಒಂದು ಹೊಸ ಅನುಭವ.

ಅನೇಕ ಗ್ರಾಮಗಳಲ್ಲಿ ಪಟ್ಟಭದ್ರ ಹಿತಾಶಕ್ತಿಗಳ ಬೆದರಿಕೆಗಳಿಗೆ ಮಣಿಯದೆ ಈ ಕೆಲಸ ಮಾಡಿದ್ದಾರೆ.

ಸಾಮೂಹಿಕ ಸಂಘಟನೆಗಳ ಬೆಂಬಲದ ಜೊತೆಗೆ ಮಧ್ಯಮವರ್ಗದ ಕೆಲವು ರೈತ ನಾಯಕರು ನಮ್ಮ ಅಭ್ಯರ್ಥಿಯ ಬೆಂಬಲಕ್ಕೆ ಕೈ ಕೂಡಿಸಿದ್ದಾರೆ.

ಕಾಂಗ್ರೆಸ್, ಜನತಾ ದಳ (ಬಿಜೆಪಿ ಬಣ) ದಿಂದ ಈ ಕ್ಷೇತ್ರದಿಂದ ಈಗಾಗಲೇ ಎರಡೆರಡು ಬಾರಿ ಗೆದ್ದಿರುವವರು ಮೂರನೇ ಬಾರಿಗೆ ಸ್ಪರ್ಧಿಸಿದ್ದಾರೆ. ಸುಮಾರು ಎರಡು ದಶಕಗಳಿಂದ ಈ ಇಬ್ಬರು ವ್ಯಕ್ತಿಗಳ ದಬ್ಬಾಳಿಕೆಗೆ ಸಿಕ್ಕಿರುವ ಜನ ಹೊಸ ಶಕ್ತಿಯೊಂದರ ಬರುವಿಗಾಗಿ ಹಾರೈಸುತ್ತಿದ್ದಾರೆ. ಆದರೆ ನಮ್ಮ ಪಕ್ಷ, ಚಿಹ್ನೆ, ಅಭ್ಯರ್ಥಿ ಎಲ್ಲವೂ ಹೊಸತಾದ್ದರಿಂದ ಉಂಟಾಗುವ ಸಮಸ್ಯೆಗಳು, ಜೊತೆಗೆ ಇವರು ಈ ಎರಡೂ ಪ್ರಬಲ ಶಕ್ತಿಗಳನ್ನು ಸೋಲಿಸುವ ಸಾಮರ್ಥ್ಯವುಳ್ಳವರೇ ಎಂಬ ಸಂದೇಹವನ್ನು ಬಿಟ್ಟು ಸಿಪಿಐ(ಎಂ) ಗೆ ಮತ ನೀಡುವರೇ? ಕಾದು ನೋಡಬೇಕಾಗಿದೆ.

ಸಿಪಿಐ(ಎಂ) ಮುಖಂಡರ ದೂರದರ್ಶನ/ಆಕಾಶವಾಣಿ ಪ್ರಚಾರ


ದೂರದರ್ಶನ

ಸೆಪ್ಟೆಂಬರ್	14	ರಾತ್ರಿ 7	ಪ್ರಕಾಶ್ ಕಾರಟ್
”	19	ರಾತ್ರಿ 8.15	ಬೃಂದಾಕಾರಟ್
”	26	ರಾತ್ರಿ 8.15	ಮಹಮ್ಮದ್ ಸಲೀಂ
”	28	ರಾತ್ರಿ 8.10	ಜ್ಯೋತಿಬಸು

ಆಕಾಶವಾಣಿ

ಸೆಪ್ಟೆಂಬರ್	14	ರಾತ್ರಿ 9.40	ಪ್ರಕಾಶ್ ಕಾರಟ್
”	22	ರಾತ್ರಿ 10.05	ಸುಭಾಷಿಣಿ ಅಲಿ
”	29	ರಾತ್ರಿ 9.30	ಜ್ಯೋತಿಬಸು
”	30	ರಾತ್ರಿ 9.55	ಮುಂದೆ ತಿಳಿಸಲಾಗುವುದು

ನಮ್ಮ ಪ್ರೀತಿಯ ಮಾಸ್ತ್ರು ಕಾಂ.ಪಿ.ರಾಮಚಂದ್ರರಾವ್ ನಿಧನರಾಗಿ ಇದೇ ಸೆ. 18 ಕ್ಕೆ ಒಂದು ವರುಷವಾಗುತ್ತಿದೆ. ಈ ಸಂದರ್ಭದಲ್ಲಿ 'ಐಕ್ಯರಂಗ' ಅವರ ನೆನಪಿನಲ್ಲಿ ಒಂದು ವಿಶೇಷ ಪುರವಣಿ ಪ್ರಕಟಿಸುತ್ತಿದೆ. ಐಕ್ಯರಂಗದ ಮುಂದಿನ ಸಂಚಿಕೆಯೊಂದಿಗೆ ನಿಮ್ಮ ಕೈಸೇರಲಿದೆ. ಈ ಸಂಚಿಕೆಯ ಬೆಲೆ ರೂ. 5.00 ನಿಮ್ಮಪ್ರತಿಯನ್ನು ಮರೆಯದೆ ಕಾದಿರಿಸಿಕೊಳ್ಳಿ




ಏಜೆನ್ಸಿದಾರರಲ್ಲಿ ವಿನಂತಿ

ದೇಶ ಈಗ ಒಂದು ನಿರ್ಣಾಯಕ ಘಟ್ಟದ ಮೂಲಕ ಹಾದು ಹೋಗುತ್ತಿದೆ. ಕರ್ನಾಟಕ ದುಡಿವ ಜನರ ಪ್ರಾಣ ಮಿತ್ರ 'ಐಕ್ಯರಂಗ' ಈ ಘಟ್ಟದಲ್ಲಿ ತನ್ನ ಪಾತ್ರವನ್ನು ಪರಿಣಾಮಕಾರಿಯಾಗಿ ವಹಿಸಲು ಪ್ರಯತ್ನಿಸುತ್ತಿದೆ. ಇದರಲ್ಲಿ ಏಜೆನ್ಸಿದಾರರಾದ ನಿಮ್ಮ ಸಹಕಾರ ಬಹಳ ಮುಖ್ಯವಾಗುತ್ತದೆ. ನಮ್ಮ ಎಲ್ಲಾ ಪ್ರಿಯ ಏಜೆನ್ಸಿದಾರರು ತಮ್ಮ ಬಿಲ್ ಬಾಕಿಯನ್ನು ತಕ್ಷಣವೇ ಪಾವತಿ ಮಾಡಿ ಹಣಕಾಸು ಮುಗಟ್ಟಿನಿಂದ ನಿಮ್ಮ ಪ್ರಿಯ ಪತ್ರಿಕೆಯನ್ನು ಪಾರು ಮಾಡಬೇಕು ಎಂದು ಮತ್ತೊಮ್ಮೆ ಕಳಕಳಿಯಿಂದ ವಿನಂತಿಸಿಕೊಳ್ಳುತ್ತೇವೆ. ಮೂರು ತಿಂಗಳುಗಳಿಂದ ಹೆಚ್ಚು ಬಾಕಿಯಿಡುವ ಏಜೆನ್ಸಿಗಳನ್ನು ಇನ್ನು ಮುಂದೆ ನಿರ್ವಾಹವಿಲ್ಲದೆ ರದ್ದು ಮಾಡಬೇಕಾಗುತ್ತದೆ ಎಂಬುದನ್ನು ಗಮನಿಸಬೇಕಾಗಿ ವಿನಂತಿ.

ಸಂ.



ಚುನಾವಣೆ-99



ಮುಂದುವರೆದ ಜಾಹೀರಾತು ಯುದ್ಧ

ಕಳೆದ ಸಂಚಿಕೆಯಲ್ಲಿ ಬಿಜೆಪಿ, ಸಂಯುಕ್ತ ಜನತಾದಳಗಳ ಜಾಹೀರಾತುಗಳ ವೈಖರಿ ನೋಡಿದ್ದೀರಿ. ಈ ಬಾರಿ ಕಾಂಗ್ರೆಸ್, ಜಾತ್ಯಾತೀತ ಜನತಾದಳಗಳ ಜಾಹೀರಾತುಗಳ ಬಗ್ಗೆ ನೋಡೋಣ.

ಕಾಂಗ್ರೆಸ್‌ನ ಚುನಾವಣಾ ಜಾಹೀರಾತುಗಳು ಬಿಜೆಪಿಯ ಕೋಮುವಾದಿ ನೀತಿಗಳ ಬಗ್ಗೆ ದಾಳಿಯ ಮೇಲೆ ಆಧಾರಿತವಾಗಿವೆ ಎಂಬುದು ಆಶ್ಚರ್ಯವಲ್ಲ.

"ನಿಮ್ಮ ಪರಿವಾರದ ತೀವ್ರವಾದಿಗಳು, ಆದಿವಾಸಿಗಳ ಧಾರ್ಮಿಕ ಸ್ಥಳಗಳನ್ನು ಧ್ವಂಸಗೊಳಿಸುತ್ತಿದ್ದಾಗ, ಧರ್ಮಪರಿವರ್ತನೆಯ ಬಗ್ಗೆ ಚರ್ಚೆಗಾಗಿ ಕರೆ ಕೊಟ್ಟಿದ್ದಾದರೂ ಏತಕ್ಕೆ?"

"ಭಾರತದ ಉದಾರ-ಧಾರಾಳ ಮೌಲ್ಯಗಳನ್ನು ತುಳಿದು ಧ್ವಂಸಗೊಳಿಸಲು ಹವಣಿಸಿದ ಬಾಳಾ ಠಾಕರೆ ಅವರಿಗೆ ನೀವು ಯಾಕಾಗಿ ಕುಮ್ಮಕ್ಕು ನೀಡಿದಿರಿ"

ಇದು ಕಾಂಗ್ರೆಸ್ 'ತಾತ್ಕಾಲಿಕ ಸರ್ಕಾರಕ್ಕೆ ನಮ್ಮದೊಂದು ಪ್ರಶ್ನೆ' ಎಂದು ಹಾಕುವ ಪ್ರಶ್ನೆ.

ಆದರೆ ಆದರಲ್ಲೂ ಕಾಂಗ್ರೆಸ್ ಕೋಮು ಸೌಹಾರ್ದತೆ, ದೇಶದ ಐಕ್ಯತೆ ಕಾಪಾಡಿಕೊಳ್ಳುವ ಭರವಸೆ ಕೊಡುವ ಬದಲಾಗಿ

'ನಮಗೆ ಬೇಕು, ಸ್ಥಿರ-ಸುಭದ್ರವಾದ ಸರ್ಕಾರ

ನಮಗೆ ಬೇಕು, ನಡೆಯಬಲ್ಲ, ಉಳಿಯಬಲ್ಲ ಸರ್ಕಾರ'

ಅಂತ ಕಿರುಚಿಕೊಳ್ಳುತ್ತದೆ. ಜಾಹೀರಾತಿನಲ್ಲಿ ಮಾತ್ರವಲ್ಲ ಬೇರೆ ಎಲ್ಲಾ ಕಡೆಯೂ ಕಾಂಗ್ರೆಸ್ ಪ್ರಚಾರ ಭದ್ರತೆಗೆ. ಹಲವು ಪಕ್ಷಗಳ ಸಂಯುಕ್ತ ರಂಗ ಸ್ವಭಾವತಃ ಅಭದ್ರ ಎಂದು ಹಳಿಯುವ ಘೋಷಣೆಗಳು. ಕಳೆದ ಕೆಲವು ವರ್ಷಗಳ ರಾಜಕೀಯ ಬದಲಾವಣೆಗಳಿಂದ ಕಾಂಗ್ರೆಸ್ ಏನೂ ಕಲಿತಿಲ್ಲ. ಬಿಜೆಪಿಯೂ ಸಾಕಷ್ಟು ಕಲಿತಿದೆ. ತನ್ನ ತಂತ್ರಗಳನ್ನು ಬದಲಿಸಿದೆ.

ಇನ್ನು ಕಾರ್ಗಿಲ್, ಲಾಹೋರ್ ಬಸ್ ಯಾತ್ರೆಯನ್ನು ಮೂದಲಿಸುವುದನ್ನು ಕಾಂಗ್ರೆಸ್ ಮರೆತಿಲ್ಲ. ಅದೆ ಪುನಃ ಗಿಳಿಪಾಠ 'ಸುಭದ್ರ ಸರ್ಕಾರ'ದ್ದೇ. 'ಕಡು ಬಡತನ, ಬೆಲೆ ಏರಿಕೆ, ಮರಣಕೂಪವಾಗಿರುವ ರಸ್ತೆಗಳ' ವಿರುದ್ಧ ಹೋರಾಡಲು ಕೆಲವೇ ಗಂಟೆ ಇದೆ ಎಂದು ಎಚ್ಚರಿಕೆ ನೀಡುವ ಜಾಹೀರಾತಿನಲ್ಲೂ ಅದಕ್ಕೆ ಕಾರಣವಾದ ನೀತಿಗಳ ಬಗ್ಗೆ ಪ್ರಸ್ತಾಪವಿಲ್ಲ. ಆ ಬಗ್ಗೆ ಸ್ವಯಂ ವಿಮರ್ಶೆ ಇಲ್ಲ. ಬದಲಾವಣೆ ಇಲ್ಲ.

ಪಾಕಿಸ್ತಾನದಿಂದ ಸಕ್ಕರೆ ಆಮದಿನಲ್ಲಿ ಭ್ರಷ್ಟಾಚಾರದ ಬಗೆಗಿನ ಜಾಹೀರಾತಿನಲ್ಲಿ ಇತರ ಭ್ರಷ್ಟಾಚಾರದ ಹಗರಣಗಳ ಬಗ್ಗೆ ಸುದ್ದಿ ಇಲ್ಲ. ಆದರಲ್ಲೂ 50 ಸಾವಿರ ಕೋಟಿಯ ಶತಮಾನದ ಮಹಾಹಗರಣದ ಬಗ್ಗೆ ಚಕಾರವೆತ್ತಿಲ್ಲ. ಕಾಂಗ್ರೆಸ್‌ನ ಟೆಲಿಕಾಂ ಹಗರಣದ ರೆಕಾರ್ಡನ್ನು ಎರಡೂವರೆಪಟ್ಟು ಮೀರಿಸಿತೆಂಬ ಅಸೂಯೆಯೇ? ತಮ್ಮ ಹಗರಣ ಒಪ್ಪಿಕೊಳ್ಳಬೇಕಾಗುತ್ತದೆ ಎಂದು ಭಯವೇ?

'ಸ್ವದೇಶಿ ಲಾಬಿಗಳು ಆರ್ಥಿಕವನ್ನು ಹಾಳುಗೆಡವಿದರು' ಎಂದು ಟೀಕಿಸುವಾಗಲೂ ವಿದೇಶಿ ಹೂಡಿಕೆ ಕಡಿಮೆಯಾಯಿತು ಎಂದು ಪ್ರಲಾಪ ಮತ್ತು ಇವು ನಿಜವಾಗಿಯೂ 'ಸ್ವದೇಶಿ' ಲಾಬಿಗಳಲ್ಲ ಎಂಬ ಸೂಚನೆ ಸಹ ಇಲ್ಲ. ಸೋನಿಯಾ ವಿದೇಶಿ ಮೂಲದ ಬಿಜೆಪಿ ಪ್ರಚಾರವನ್ನು ಕಾಂಗ್ರೆಸ್ ಉಪೇಕ್ಷಿಸಿದ್ದು ಮಾತ್ರ ಸರಿಯಾಗೇ ಇದೆ.

ಜಾತ್ಯಾತೀತ ಜನತಾದಳದ

'ನಾವಂತೂ ಈ ತಪ್ಪುಗಳನ್ನು ಮಾಡಿಲ್ಲ.....' ಜಾಹೀರಾತು ಶಕ್ತಿಶಾಲಿಯಾಗಿ ಬಿಜೆಪಿ-ಸಂಯುಕ್ತ ಜನತಾದಳ ಕೂಟವನ್ನು ಬಲವಾಗಿ ಛೇಡಿಸುತ್ತದೆ.

"ನಾವು ಮಹಾತ್ಮ ಗಾಂಧಿಯನ್ನು ಕೊಲ್ಲಲಿಲ್ಲ
ಮಸೀದಿಯನ್ನು ಕೆಡವಲಿಲ್ಲ, ಹೃದಯಗಳನ್ನು ಒಡೆಯಲಿಲ್ಲ
ಚರ್ಚುಗಳನ್ನು ಕೆಡವಲಿಲ್ಲ
ಕಣ್ಮುಚ್ಚಿ ಕಾವ್ಯಮಯ ಭಾಷಣ ಮಾಡುತ್ತಾ ಆಕ್ರಮಣಕಾರರು ದೇಶದೊಳಕ್ಕೆ ನುಗ್ಗಿದರೂ ಗಮನಿಸದಯೇ ಅಜಾಗರೂಕರಾಗಿದ್ದು
ಆಮೇಲೆ 'ಕಾರ್ಗಿಲ್.. ಕಾರ್ಗಿಲ್' ಎಂದು ಬೊಬ್ಬಿಡಲಿಲ್ಲ"


ಇವೆಲ್ಲಾ ಆ ಜಾಹೀರಾತು ಪಟ್ಟಿ ಮಾಡಿರುವ 'ನಾವು ಮಾಡದ ತಪ್ಪುಗಳು'

ಬಸವಣ್ಣನವರ ಸಾಮಾಜಿಕ ಪರಿಕಲ್ಪನೆಯನ್ನು ಅನುಷ್ಠಾನ ಮಾಡಿದ್ದೇವೆ ಎನ್ನುವುದು ಅತಿಶಯೋಕ್ತಿಯಾದರೂ 'ಸಾಮಾಜಿಕ ನ್ಯಾಯ' ವನ್ನು ಪ್ರಚಾರದ ವಿಷಯವಾಗಿ ಮಾಡಿದ್ದು ಗಮನಾರ್ಹ.

ಹೌದು, ಗೋವಿಂದಾಚಾರ್ಯರರು ಹೇಳಿದ್ದು ಸರಿ
'ವಾಜಪೇಯಿಜಿ ಮುಖವಾಡ ಮಾತ್ರ'

ಎಲ್ಲಾ ಬೂರ್ಜ್ವಾ ಪಕ್ಷಗಳ ಚುನಾವಣಾ ಜಾಹೀರಾತುಗಳ ಮಧ್ಯೆ ಮಿಂಚಿದ್ದು 'ಕೋಮುವಾದದ ವಿರುದ್ಧ ಸಮರ ಎಂಬ ಪತ್ರಿಕೆ ದಿನಪತ್ರಿಕೆಗಳಲ್ಲಿ ಕೊಟ್ಟ ಜಾಹೀರಾತು. ಇದು ಆ ಜಾಹೀರಾತುವಿನ ಘೋಷಣೆ

"ಮುಗ್ಧರ ಕಗ್ಗೊಲೆಯಾಗಲಿ, ಮಹಿಳೆಯರಿಗೆ ಅಪಮಾನವಾಗಲೀ!
ಸ್ಟೈನ್ಸ್‌ನ ಹೋಮವಾಗಲಿ,
ಧಾರ್ಮಿಕ ಸ್ಥಳಗಳನ್ನು ಕೆಡಿಸುವುದು,
ಕ್ರಿಕೆಟ್ ಪಿಚ್‌ಗಳನ್ನು ತೋಡಿದ್ದಾಗಲೀ,
ಪ್ರುಡೆನ್ಶಿಯಲ್ ಕಪ್ ಒಡೆದದ್ದಾಗಲೀ!
ಪತ್ರಿಕೆಗಳ ಮೇಲೆ ದಾಳಿಯಾಗಲಿ,
'ಫೈರ್' ನ ಥಿಯೇಟರುಗಳ ಮೇಲೆ ದಾಳಿಯಾಗಲಿ!
ನೀವು ಈ ಕುಕೃತ್ಯಗಳ ಬಗ್ಗೆ ಮರುಗಿದಿರಿ
ಆದರೂ ಈ ಕೇಡಿಗಳ 'ಪರಿವಾರ'ವನ್ನು
ನಡೆಸುತ್ತಿದ್ದೀರಿ



ಹೌದು, ಗೋವಿಂದಾಚಾರ್ಯ ಹೇಳಿದ್ದು ಸರಿ।
'ವಾಜಪೇಯಿಜೀ ಬರಿಯ ಮುಖವಾಡ ಮಾತ್ರ॥

-ಶರತ್ ಚಂದ್ರ

ಕರ್ನಾಟಕದಲ್ಲಿ ಮೊದಲ ಹಂತದ ಚುನಾವಣೆ ಮುಗಿದಿದೆ. ನಂತರ 40 ಮತದಾನ ಕೇಂದ್ರಗಳಲ್ಲಿ ಮರು ಮತದಾನವೂ ನಡೆದಿದೆ. ಈ ಸಂಚಿಕೆ ನಿಮ್ಮ ಕೈ ಸೇರುವ ವೇಳೆಗೆ ಇಲ್ಲಿ 1999ರ ಚುನಾವಣೆಗಳು ಪೂರ್ಣಗೊಳ್ಳುತ್ತವೆ. ನಮ್ಮ ಗಮನ ಬೇರೆ ರಾಜ್ಯಗಳ ಚುನಾವಣೆಗಳತ್ತ ಹೋಗುತ್ತದೆ. ಮೊದಲ ಹಂತದಲ್ಲಿ ಭಾರತದ ಇತರೆಡೆಗಳಿಗಿಂತ ಹೆಚ್ಚು ಮತದಾನ ನಡೆದಿದೆ. ಆದರೆ ಕಳೆದಬಾರಿಯಷ್ಟು ನಡೆದಿಲ್ಲ ಎನ್ನಲಾಗಿದೆ. ಏನೇ ಆದರೂ ಬಿಜೆಪಿಯ 'ಮಾದರಿ ರಾಜ್ಯ' ಗುಜರಾತಿಗಿಂತ ಹೆಚ್ಚು ಉತ್ಸುಕತೆಯಿಂದ ಜನ ಮತದಾನದಲ್ಲಿ ಭಾಗವಹಿಸಿದ್ದಾರೆ. ಏಕೆಂದರೆ ಕಾರ್ಗಿಲ್ ಅವರಿಗೆ ನಮಗಿಂತ ಬಹಳ ಸಮೀಪ, ಬಿಜೆಪಿಯ ಆಳ್ವಿಕೆಯನ್ನಂತೂ 'ಚೆನ್ನಾಗಿ' ಅನುಭವಿಸಿದ್ದಾರೆ. ಉತ್ಸುಕತೆಯ ಅಭಾವಕ್ಕೆ ಇದೇ ಕಾರಣವಿರಬಹುದೇನೋ.

★★★

ಮುಂದುವರಿದ ಗೊಂದಲ

ಮೊದಲಹಂತದ ಚುನಾವಣೆ ಮುಗಿದರೂ ಕೋಮುವಾದಿಗಳು ಮತ್ತು ಅದರ ಮಿತ್ರರ ನಡುವಿನ ಸೀಟುಗಳ ಗೊಂದಲವಂತೂ ಮುಗಿದಿಲ್ಲ. ಅದು ಎರಡನೇ ಹಂತಕ್ಕೂ ಮುಂದುವರಿಯಿತು. ಸಮನ್ವಯ ಸಮಿತಿ, ಜಂಟಿ ಪ್ರಚಾರ ಇತ್ಯಾದಿಗಳ ಬಗ್ಗೆ ಹೇಳಿದ್ದರೂ ಯಾವುದೂ ಜಾರಿಗೆ ಬಂದಿಲ್ಲ. ಬಿಜೆಪಿ ಮುಖಂಡರು ಜಾಣ ಮರೆವು ಪ್ರದರ್ಶಿಸಿದರು. ಅವರು ಇದೇ ಧೋರಣೆಯನ್ನು ಮುಂದುವರೆಸಿದರೆ ಪಶ್ಚಾತ್ತಾಪ ಪಡಬೇಕಾಗುತ್ತದೆ ಎಂದು ಜನತಾದಳ(ಸಂಯುಕ್ತ)ದ ಮುಖಂಡರು ಅಳುಮೋರೆ ಹಾಕುತ್ತಿದ್ದಾರೆ.

'ನಾವು ನಿವೃತ್ತಿ ಆಗಿಲ್ಲ'

ಇದು ಹಲವು ಕಡೆಗಳಿಂದ ಮೊದಲ ಹಂತದ ಚುನಾವಣೆಯ ದಿನದವರೆಗೂ ಬಿಜೆಪಿ/ದಳ(ಯು) ಅಭ್ಯರ್ಥಿಗಳಿಂದ ಕೇಳಬರುತ್ತಿದ್ದ ಮಾತುಗಳು - ತಮ್ಮ ಪರಮಮಿತ್ರ ಹೆಗಡೆಯವರ ಕೇಳಿಕೆಯನ್ನು ಸಂಪೂರ್ಣವಾಗಿ ಕಡೆಗಣಿಸಿದ ಯಡಿಯೂರಪ್ಪನವರು ಗುಲ್ಬರ್ಗದಲ್ಲಿ ಬಿಜೆಪಿಯ ರೇವೂರವರೇ ಎನ್‌ಡಿಎ ಅಧಿಕೃತ ಅಭ್ಯರ್ಥಿ ಕಾಂತಾರವರು ನಿವೃತ್ತಿಯಾಗಲು ಸೂಚಿಸಬೇಕು ಎಂದು ಆಗ್ರಹಪಡಿಸಿದರಂತೆ.

★★★

ಚಿಕ್ಕಮಗಳೂರಿನಲ್ಲಂತು ಯಡಿಯೂರಪ್ಪನವರ ಬಿಜೆಪಿ ಮತ್ತು ಹೆಗಡೆಯವರ ಲೋಕಶಕ್ತಿ ಅಭ್ಯರ್ಥಿಗಳು ತಿಕ್ಕಾಟಕ್ಕೆ ಇಳಿದರು. 'ವಾಜಪೇಯಿ ಫೋಟೋ ಹಾಕಿಕೊಂಡು ಮತ ಕೇಳುವ ಹಕ್ಕು ನಿಮಗಿಲ್ಲ. ಶಕ್ತಿ ಇದ್ದರೆ ವಾಜಪೇಯಿ ಫೋಟೋ ತೆಗೆದು ಚುನಾವಣೆ ಎದುರಿಸಿ' ಎಂದು ಬಿಜೆಪಿ ಅಭ್ಯರ್ಥಿ ಸೂಚಿಸಿದರು ಎಂದು ಪತ್ರಿಕೆಗಳು ವರದಿ ಮಾಡಿವೆ. ಹೆಗ್ಡೆಯವರು ಇದಕ್ಕೆ ಏನೆನ್ನುತ್ತಾರೆ ಎಂದು ವರದಿಯಾಗಿಲ್ಲ.

★★★

ಹೆಗಡೆಯವರು ಏನನ್ನುತ್ತಾರೋ, ಅವರನ್ನು ನಂಬಿ ಹೋದ ಪಟೇಲರಿಗಂತೂ 'ಸಾಕಪ್ಪ, ಸಾಕು' ಅನಿಸಿದಂತಿದೆ. ಇದೇ ತನ್ನ ಅಂತಿಮ ಸ್ಪರ್ಧೆ ಎಂದು ಮತದಾನದ ನಂತರ ತಮ್ಮ ಊರಿನಲ್ಲಿ ಅವರು ತಿಳಿಸಿರುವುದಾಗಿ ವರದಿಯಾಗಿದೆ. ಅಧಿಕಾರದ ಆಸೆಯಿಂದ ಸ್ಪರ್ಧಿಸಿಲ್ಲ, ರಾಜಕೀಯ ಬೆಳವಣಿಗೆಗೆ ಸ್ಥಿರತೆ ನೀಡಲು, ರಾಷ್ಟ್ರದ ಒಳಿತಿಗಾಗಿ ಮಾತ್ರ ತಾನು ಈ ಬಾರಿ ಸ್ಪರ್ಧಿಸಿದ್ದು, ಇದೇ ಅಂತಿಮ ಎಂದು ಅವರು ಹೇಳಿದ್ದಾರೆ. ಜನ ಈ ಮಾತುಗಳನ್ನು ಎಷ್ಟರ ಮಟ್ಟಿಗೆ ನಂಬಿದ್ದಾರೆ ಎಂದು ತಿಳಿಯಲು ಒಂದು ತಿಂಗಳು ಕಾಯಬೇಕು.

★★★

ವಸ್ತುನಿಷ್ಠ ಪತ್ರಕರ್ತ ಎಂದೆನಿಸಿಕೊಂಡ ಅರುಣ್ ಶೌರಿಯ ವಸ್ತುನಿಷ್ಠತೆ ಎಷ್ಟು ಮಟ್ಟಿಗೆ ಇದೆಯೆಂದು ಬಹಳ ಹಿಂದೆಯೇ ಬೆಳಕಿಗೆ ಬಂದಿತ್ತು. ಅವರು ಬಿಜೆಪಿ ಪರವಾಗಿ ರಾಜ್ಯಸಭಾ ಸದಸ್ಯರಾದಾಗ ಮತ್ತು ನಂತರ ಇನ್ನಷ್ಟು ಸ್ಪಷ್ಟವಾಯಿತು. ಈಸಲ ಬಳ್ಳಾರಿಗೆ ಬಿಜೆಪಿ ವೀಕ್ಷಕರಾಗಿ ಬಂದಿದ್ದ ಅವರು ಬೆಂಗಳೂರಿನಲ್ಲಿ ಪತ್ರಿಕಾ ಸಮ್ಮೇಳನ ಕರೆದು ಸುಷ್ಮಾ ಗೆಲವು ಖಚಿತ ಎಂದು ಸಾರಿ ಹೋಗಿದ್ದಾರೆ. ಅದೇ ಉಸಿರಿನಲ್ಲಿ ಸುಷ್ಮಾ ಸೋತರೂ ಸ್ವದೇಶಿ-ವಿದೇಶಿ ಚರ್ಚೆಯನ್ನು ಕೈ ಬಿಡುವುದಿಲ್ಲ ಎಂದೂ ಹೇಳಿದ್ದಾರೆ. ನಂತರ ಸೋನಿಯಾರಿಗೆ ರಾಜಕೀಯ ಜೀವನದ ಅನುಭವ ಏನಿದೆ ಎಂದು ಪ್ರಶ್ನಿಸುತ್ತಾರೆ. ಕಾಂಗ್ರೆಸ್ ಸಂಪೂರ್ಣ ನಕಾರಾತ್ಮಕ ಹಾಗೂ ಸುಳ್ಳು ಪ್ರಚಾರ ನಡೆಸುತ್ತಿದೆ ಎಂದಿದ್ದಾರೆ. ನಿಜವಿರಬಹುದು. ಆದರೆ ಮಹಾಜನ್,

ಇಣುಕು-ನೋಟ

ಫರ್ನಾಂಡೀಸ್ ಬಿಡಿ, ಸ್ವತಃ ಅರುಣ್ ಶೌರಿಯ ಈ ಮೂರು ಬಗೆಯ ಮಾತುಗಳಾದರೂ ಏನನ್ನು ಬಿಂಬಿಸುತ್ತಿವೆ ಎಂದು ಜನ ಕೇಳುತ್ತಿದ್ದಾರೆ.

★★★

ಸುಷ್ಮಾರವರು 300 ಕ್ಕೂ ಹೆಚ್ಚು ಸಭೆಗಳಲ್ಲಿ ಸ್ವಚ್ಛ ಕನ್ನಡದಲ್ಲಿ ಮಾತನಾಡಿ ಮತದಾರರ ಮನಗೆದ್ದರು, ಇದೇ ಒಂದು ಮಹಾಸಾಧನೆ ಎನ್ನುತ್ತಾರೆ ಬಿಜೆಪಿ ಪ್ರಚಾರಕರು. 22 ವರ್ಷಗಳ ಹಿಂದೆ ಚಿಕ್ಕಮಗಳೂರಿನಲ್ಲಿ ಇಂದಿರಾಗಾಂಧಿಯವರ ವಿರುದ್ಧ ಪ್ರಚಾರಕ್ಕೆ ಬಂದಿದ್ದಾಗ ಕಲಿತ ಕನ್ನಡಕ್ಕೆ ಧೂಳು ತಗುಲಿತ್ತು, ಅದನ್ನು ಒರೆಸಿಕೊಂಡು ಕನ್ನಡದಲ್ಲಿ ಮಾತನಾಡಿದೆ ಎನ್ನುತ್ತಾರಂತೆ ಸುಷ್ಮಾ. ಆದರೆ ನಿಜ ತಂತ್ರ ಬೇರೆಯೇ ಇದೆ ಎಂದು 'ಹಿಂದೂ' ಪತ್ರಿಕೆ ವರದಿ ಮಾಡಿದೆ. ಇದು ಬನಾರಸ್ ಹಿಂದೂ ವಿಶ್ವವಿದ್ಯಾಲಯದ ಪ್ರೊ. ವಿಶ್ವನಾಥ ಮಿಶ್ರ ವಿಕಾಸಗೊಳಿಸಿದ ಒಂದು ವಿಶಿಷ್ಟ ವಿಧಾನದ ಫಲ. ಈ ವಿಧಾನದ ಮೂಲಕ ಯಾರಾದರೂ ಯಾವುದೇ ಭಾಷೆಯನ್ನು ಎಂಟು ವಾರದೊಳಗೆ ಕಲಿಯಬಹುದು. ಬೇರೆಡೆಗಳಿಂದ ಬರುವ ಬೌದ್ಧ ಯಾತ್ರಿಗಳು ಇದೇ ವಿಧಾನದಿಂದ ಇಲ್ಲಿಯ ಭಾಷೆಗಳನ್ನು ಕಲಿತಿದ್ದಾರೆ. ಅಷ್ಟೇಕೆ, ನಮ್ಮ ಮಲೆಯಾಳಿ ರಾಷ್ಟ್ರಪತಿಗಳು ಹಿಂದಿ ಕಲಿತು ಇಂಗ್ಲೀಷಿನಂತೆಯೇ ಹಿಂದಿಯಲ್ಲಿಯೂ ಭಾಷಣ ಮಾಡುತ್ತಿರುವುದು ... ವಿಧಾನದಿಂದಾಗಿ ಎಂದು ಆ ಪತ್ರಿಕೆ ತಿಳಿ...

★★★

ಟಿಕೆಟ್‌ಗಾಗಿ ಧರಣಿ

ಬಾಗೇಪಲ್ಲಿಯಲ್ಲಿ ಗಲಭೆ ... ಚುನಾವಣೆ ಮುಂದೂಡಲು ಕಾರಣರಾ... ಈಗ ಆ ದಿನ ಗೋಲಿಬಾರಿನಲ್ಲಿ ಮಡಿ... ಫೋಟೋ ಸಹಿತ ಕಾಂಗ್ರೆಸ್ ಕಚೇರಿ... ಧರಣಿ ನಡೆಸಿದ್ದಾರೆ. ಟಿಕೆಟ್ ಕೊಡ... ಸಂಪಂಗಿ ಅವರನ್ನು ಬಂಡಾ... ಅಭ್ಯರ್ಥಿಯಾಗಿ ಕಣಕ್ಕಿಳಿಸುವು... ಹೇಳುತ್ತಿದ್ದಾರಂತೆ. ಕಳೆದ ಬಾರಿ ಅ... ಟಿಕೆಟ್ ನಿರಾಕರಿಸಿದ್ದ ಕಾಂಗ್ರೆಸ್ ವ... ಈ ಬಾರಿ ಬೆದರಿಕೆಗೆ ತಲೆಬಾಗುತ್ತಾ... ಎಂದು ಕ್ಷೇತ್ರದ ಮತದಾ... ನೋಡುತ್ತಿದ್ದಾರೆ.

★★★

ಜನ ಸೇರದಿದ್ದರೆ ಟಿ.ವಿ. ಚರ್ಚೆ ನಡೆಸೋಣ

ಬಿಜೆಪಿ-ಶಿವಸೇನೆ ಆಳ್ವಿಕ... ಮಹಾರಾಷ್ಟ್ರದ ನಾಶಿಕ್‌ನಲ್ಲಿ ಅಡ್ವಾಣಿ... ಸಭೆಗೆ ಒಂದು ಸಾವಿರ ಜನವೂ ಸೇರ... ಆಗ ತಮ್ಮ ಮುಜುಗರವನ್ನು ಮರೆಮಾ... ಅಡ್ವಾಣಿ ಪಕ್ಷಗಳ ನಡುವೆ ಟಿ.ವಿ. ... ನಡೆಯಬೇಕು ಎಂದು ಸೂಚಿಸಿದ... ಪಾಪ, ಈಗ ಜನ ಉರಿಬಿಸಿಲಿನಲ್ಲಿ ... ಮುಖಂಡರಿಗಾಗಿ ಗಂಟೆ ಗ... ಕಾಯಬೇಕು, ಟಿ.ವಿ.ಚರ್ಚೆಯಲ್ಲಿ ... ಪ್ರಮೇಯವೇ ಇಲ್ಲ, ಮನೆಯಲ್ಲಿ ... ಮೇಲೆ ಕಾಲು ಹಾಕಿಕೊಂಡು ಕೇಳಬ... ಮನಬಂದಂತೆ. ಕೇಳುವುದು ಬೇಡವ... ಟಿ.ವಿ. ಮುಚ್ಚಿಬಿಡುವ ಅವಕಾಶವೂ ... ಎಂದು ಒಬ್ಬ ಸಭಿಕರು ತಮ್ಮ... ಹೇಳಿಕೊಂಡರಂತೆ. 'ಅಡ್ವಾಣಿಯವರ ... ಕೇಳಿದ ಮೇಲಂತೂ ಕೆಲವೇ ನಿಮಿಷ... ಟಿ.ವಿ.ಬಂದ್ ಆಗಿ ಬಿಡುತ್ತದೆ. ಏಕೆ... ಅವರು ಆ ಸಭೆಯಲ್ಲಿ ಯುದ್ಧದ ... ಮಾತನಾಡುವುದಿಲ್ಲ ಎಂದು ಹೇಳಿ, ... ಆ ಬಗ್ಗೆ ಮಾತ್ರ ಮಾತನಾಡಿ... ಎಂದು ಇಂಡಿಯನ್ ಎಕ್ಸ್‌ಪ್ರೆಸ್ ವರ... ವರದಿ ಮಾಡಿದ್ದಾರೆ.

★★★

'ನಿತೀಶನ ಕೃಷ್ಣಲೀಲೆ'

ಟಿವಿ ಮಹಾಭಾರತದ 'ಕೃಷ್ಣ' ನಿ... ಭಾರದ್ವಾಜ ತನ್ನ ಪುನರಾಯ್ಕೆಗೆ ಕೃ... ನಡೆಸಿದ್ದಾನಂತೆ. ಮಧ್ಯಪ್ರದೇ... ಸ್ಪರ್ಧಿಸುತ್ತಿರುವ ಬಿಜೆಪಿ ಅಭ್ಯರ್ಥಿ ... ಮನೆಮನೆಗೆ ಹೋಗಿ 'ಮೈಯ್ಯಾ ... ಮಖನ್‌ದೋ' (ಅಮ್ಮ ನನಗೆ ಬೆಣ್ಣೆ ... ಎನ್ನುತ್ತಾನಂತೆ. ಕೆಲವು ಕಡೆ ಮಹಿ... ಬೆಣ್ಣೆ ಕೊಡುತ್ತಾರಂತೆ. ಇದೇ ... ಪ್ರಚಾರದ ವೈಖರಿ. ಕೆಲವು ಕಡೆ ... ಹೇಳಿದರಂತೆ- ನಮಗೆ ನೀನು ... ಕೊಟ್ಟಿದ್ದಿಯಾ ಅಂತ. ಚುನಾವಣೆ...

'ಕನ್ನಡಪ್ರಭ'ದಲ್ಲಿ ನರೇಂದ್ರ



ಹೀಗನ್ನುತ್ತಾರೆ

ಮೊನ್ನೆ ಶ್ರೀ ಪ್ರಮೋದ್ ಮಹಾಜನ್‌ರವರನ್ನು "... ಮಹಿಸದೆ ಕಾರ್ಗಿಲ್ ಯುದ್ಧವನ್ನು ನೀವೇ ತಂದು ಕೊಂಡಿದ್ದಲ್ಲ... ಎಂದು ಪ್ರಶ್ನಿಸಿದ್ದಕ್ಕೆ ಆತ "ಇಂಥ ಪ್ರಶ್ನೆ ಎತ್ತುವ... ದೇಶದ್ರೋಹಿಗಳು" ಎಂದುಬಿಟ್ಟರು! ಇದನ್ನು ಕೇಳಿದಾಕ್ಷಣ ನನಗೆ ಕಾರ್ಗಿಲ್ ಯುದ್ಧ ಮಧ್ಯಂತರ ಚುನಾವ... ಉದ್ದೇಶಪೂರ್ವಕವಾಗಿ ತಂದುಕೊಂಡ ಯುದ್ಧ ಅನ್ನಿಸಿಬಿಟ್ಟ... ಶ್ರೀ ಪ್ರಮೋದ್ ಮಹಾಜನ್‌ರವರಿಗೆ ಕಾರ್ಗಿಲ್ ಯ... ತಂದುಕೊಂಡದ್ದು ದೇಶದ್ರೋಹಿ ಕೃತ್ಯ ಎಂಬ ಒಳ ಅ... ಇದೆ ಅನ್ನಿಸಿತು. ಇನ್ನೊಬ್ಬರು ಅವರನ್ನು ದೇಶದ್ರೋಹಿ ಅನ್ನು... ಮೊದಲೇ ಅವರೇ ಇನ್ನೊಬ್ಬರಿಗೆ ದೇಶದ್ರೋಹಿ ಎಂದು ... ಹೊಟ್ಟೆ ಒಳಗೆ ಇರುವುದನ್ನು ಮರೆಮಾಚಲು ಪ್ರಯತ್ನಿಸುತ್ತಿ... ಅನ್ನಿಸಿತು.

ದೇವನೂರ ಮಹಾ...





ಚುನಾವಣೆ-99

ಐಕ್ಯರಂಗ

ದೆಹಲಿಗೆ ಹೋದವನನ್ನು ಈಗಲೇ ನೋಡಿರುವುದು ಎಂದು ಮಂಗಳಾರತಿ ಮಾಡಿದರಂತೆ. ತೆರೆದ ಜೀಪಿನ ಮೇಲೆ ಮೆರವಣಿಗೆ ಹೋಗುವಾಗ ಥರ್ಮೋಕೋಲ್ 'ಸುದರ್ಶನ ಚಕ್ರ' ಹಿಡಿದಿರುತ್ತಾನಂತೆ. ಅವನು ಮಾತನಾಡುವ ವೇದಿಕೆಗಳಲ್ಲೆಲ್ಲಾ ಅರ್ಜುನನಿಗೆ ಯುದ್ಧಭೂಮಿಯಲ್ಲಿ ಗೀತೋಪದೇಶ ಮಾಡುವ ಚಿತ್ರ. ಇವೆಲ್ಲಾ ನಾಟಕಗಳು ಯಾಕೆ? ಏಕೆಂದರೆ ಈ ಬಿಜೆಪಿ ಅಭ್ಯರ್ಥಿಗೆ ಬೇರೆ ಹೇಳಲು ತನ್ನದೇ ಆದ ಸಾಧನೆಗಳು ಏನೂ ಇಲ್ಲ. ಅಲ್ಲದೆ ಆತನ ವಿರುದ್ಧ ಸ್ಪರ್ಧಿಸುತ್ತಿರುವ ಕಾಂಗ್ರೆಸ್ ಅಭ್ಯರ್ಥಿ ರಾಜ್ಯದ ಮುಖ್ಯಮಂತ್ರಿ ದಿಗ್ವಿಜಯ ಸಿಂಗ್‌ನ ತಮ್ಮ. ಸದ್ಯ ನಿತೀಶ್ ಬಾಲಕೃಷ್ಣ ಲೀಲೆ ಆಡುತ್ತಿದ್ದಾನೆ. ರಾಸಕ್ರೀಡೆ ಆಡದಿದ್ದರೆ ಸಾಕು ಎಂದುಕೊಳ್ಳುತ್ತಿರಬೇಕು ಜನ.

★★★

'ಪಹಲೆ ಪಾಣಿ ಫಿರ್ ಅಡ್ವಾಣಿ'

ಅಡ್ವಾಣಿ ಗುಜರಾತಿನ ಗಾಂಧಿನಗರದಲ್ಲಿ ತನಗೆ ಭದ್ರ ಕ್ಷೇತ್ರವೆಂದು ವಲಸೆ ಹೋದವರು ಈಗ ಏದುಸಿರು ಬಿಡುತ್ತಿದ್ದಾರಂತೆ. ಕಾಂಗ್ರೆಸ್ ಅಭ್ಯರ್ಥಿ ಟಿ.ಎನ್.ಶೇಷನರ ಭರದ ಪ್ರಚಾರ, ಗುಜರಾತ್ ಬಿಜೆಪಿಯೊಳಗಿದ ಆಂತರಿಕ ಕಲಹ, ಎರಡು ಬಾರಿ ಆಯ್ಕೆಯಾದರೂ ಕ್ಷೇತ್ರದಲ್ಲಿ ಏನೂ ಬೆಳವಣಿಗೆ ಕಾಣದೆ ರೇಗಿರುವ ಮತದಾರ-ಇವೆಲ್ಲಾ ಅಡ್ವಾಣಿಯನ್ನು ಸಂಕಟಕ್ಕೆ ಸಿಲುಕಿಸಿವೆಯೆಂದು ಅವರ ಕೆಲವು ಸಾರ್ವಜನಿಕ ಸಭೆಗಳಲ್ಲಿ ರೇಗಿದ ಜನ ಹಳಿದರಂತೆ. ಹಲವು ಕಡೆ ಮಾತನಾಡಲು ಬಿಡಲಿಲ್ಲ. ಅಲ್ಲಿನ ರಾಜ್ಯ ಸಚಿವಾಲಯಗಳಿಗೆ ಸರ್ಕಾರಿ ನೌಕರರ ಮಧ್ಯೆ ಪ್ರಚಾರ ಮಾಡಲು ಹೋದಾಗ ಅಡ್ವಾಣಿ ವಿರುದ್ಧ ಘೋಷಣೆಗಳನ್ನು ಕೂಗಿದರಂತೆ. ಎಲ್ಲೆಲ್ಲೂ ನೀರಿನ ಸಮಸ್ಯೆ ಇರುವ ಈ ಕ್ಷೇತ್ರದಲ್ಲಿ ಅಡ್ವಾಣಿಗೆ ಎದುರಾದ ಘೋಷಣೆ ಎಂದರೆ

'ಪಹ್ಲೆಪಾಣಿ, ಫಿರ್ ಅಡ್ವಾಣಿ' (ಮೊದಲು ನೀರು, ಆಮೇಲೆ ಅಡ್ವಾನಿ)

ಬಿಜೆಪಿ-ಅಡ್ವಾನಿಗಳ ಕಾರ್ಗಿಲ್, ಪೋಖ್ರಾನ್, ಸೋನಿಯಾ ವಿದೇಶಿಯ ನಾಟಕದ ಮೇಲೆ ಜನ ನೀರೆರಚುತ್ತಿದ್ದಾರಂತೆ.

★★★



ಪಂಜಾಬ್ ಮುಖ್ಯಮಂತ್ರಿ ಮಗನಿಂದ ಪರ್ತಕರ್ತನಿಗೆ ಕೆನ್ನೆ ಏಟು

ಪಂಜಾಬ್ ಮುಖ್ಯಮಂತ್ರಿ ಪ್ರಕಾಶ್ ಸಿಂಗ್ ಬಾದಲ್‌ನ ಮಗ ಸ್ಪರ್ಧಿಸಿರುವ ಕ್ಷೇತ್ರದಲ್ಲಿ ಭಾರಿ ಹಿಂಸಾಚಾರ. ಅಕಾಲಿದಳದ ಮತ್ತು ಕಾಂಗ್ರೆಸ್ ಬೆಂಬಲಿಗರ ನಡುವೆ ಯಾವಾಗಲೂ ಮಾರಾಮಾರಿ. ಇಂತಹದೇ ಮಾರಾಮಾರಿಯ ಸಂದರ್ಭದಲ್ಲಿ ಇದ್ದ 'ಯುವರಾಜ' ಬಾದಲ್ ಸ್ಥಳೀಯ ಡಿಎಸ್‌ಪಿಯ ಕಿವಿಯಲ್ಲಿ ಗುಟ್ಟಾಗಿ ಏನೋ ಹೇಳುತ್ತಿರುವದರ ಪೋಟೋ ತೆಗೆಯಲು ಯತ್ನಿಸಿದ 'ದೇಶ ಸೇವಕ್' ಪತ್ರಿಕೆಯ ಪರ್ತಕರ್ತ ಛಾಯಾಗ್ರಾಹಕನ ಮೇಲೆ 'ಯುವರಾಜ'ನಿಗೆ ಕೋಪ ನೆತ್ತಿಗೇರಿತು. ಆ ಪತ್ರಕರ್ತ-ಛಾಯಾಗ್ರಾಹಕನ ಕಪಾಳಕ್ಕೆ ಬಿಗಿದನಂತೆ. ಈ ಮಾರಾಮಾರಿಗಳಲ್ಲಿ ಪೋಲಿಸರು ಆಳುವ ಪಕ್ಷ ಅಕಾಲಿದಳ-ಬಿಜೆಪಿಯ ಪರ ವಹಿಸುತ್ತಿದ್ದಾರೆ ಎಂಬ ವ್ಯಾಪಕ ಆಪಾದನೆಯ ಹಿನ್ನೆಯಲ್ಲಿ ಇಂತಹ ಫೋಟೋ ತನ್ನ ಇಮೇಜಿಗೆ ಭಾರಿ ತೊಂದರೆ ಮಾಡಬಹುದೆಂದು 'ಯುವರಾಜ' ಬಾದಲ್‌ಗೆ ಕೋಪ ಬಂದಿರಬೇಕು.

ಆದರೆ ಈ ಕೆನ್ನೆ ಏಟು ಅಕಾಲಿದಳಕ್ಕೆ

ಇಣುಕು-ನೋಟ

ಬಹಳ ದುಬಾರಿಯಾಗಿದೆ. ಪತ್ರಕರ್ತರ ಕೂಟ ಈ ಘಟನೆಯನ್ನು ಗಂಬೀರವಾಗಿ ತೆಗೆದುಕೊಂಡಿದೆ 'ಬಾದಲ್' ಕ್ಷಮೆ ಕೋರಬೇಕೆಂದು ಒತ್ತಾಯಿಸಿದೆ. ಈ ಕ್ಷೇತ್ರದಲ್ಲಿ ಸಿಪಿಐ(ಎಂ) ಅಭ್ಯರ್ಥಿ ಸ್ಪರ್ಧಿಸಿದ್ದಾರೆ.

★★★

ಮೊದಲ ಸುತ್ತಿನ ಚುನಾವಣೆ ಹಿಂಸಾಚಾರದಲ್ಲಿ ಆಂಧ್ರಪ್ರದೇಶಕ್ಕೆ ಅಗ್ರಸ್ಥಾನ

ಮೊದಲ ಸುತ್ತಿನಲ್ಲಿ ಚುನಾವಣೆಗೆ ಸಜ್ಜಾದ ಕ್ಷೇತ್ರದಲ್ಲಿ ಹಿಂಸಾಚಾರದಲ್ಲಿ (ಚುನಾವಣಾ ಪೂರ್ವ, ಚುನಾವಣಾ ನಂತರ) ಆಂಧ್ರಪ್ರದೇಶಕ್ಕೆ ಅಗ್ರಸ್ಥಾನ. ಚಂದ್ರಬಾಬು ನಾಯ್ಡು ತೆಲುಗು ದೇಶಂ ಮತ್ತು ಕಾಂಗ್ರೆಸ್ ಎರಡಕ್ಕೂ ಇದು ನಿರ್ಣಾಯಕ ಹೋರಾಟ. ಎರಡೂ ಪಕ್ಷಗಳಿಗೆ ಗೂಂಡಾ ಪಡೆ ಇದೆ. ಆದ್ದರಿಂದ ಅವರು ಹೊಡೆದಾಡಲು ಆರಂಭಿಸಿದ್ದಾರೆ. ಚುನಾವಣಾ ದಿನ ಹಿಂಸಾಚಾರ ನಡೆದ 184 ಮತಗಟ್ಟೆಗಳಲ್ಲಿ 111 ಮತಗಟ್ಟೆಗಳು ಆಂಧ್ರಪ್ರದೇಶದ್ದು. ಕ್ರಿಮಿನಲ್ ರೆಕಾರ್ಡ್ ಇರುವ ಅಭ್ಯರ್ಥಿಗಳಿರುವ ರಾಜ್ಯದಲ್ಲೂ ಆಂಧ್ರಕ್ಕೆ ಅಗ್ರಸ್ಥಾನವಂತೆ. 46 ಅಭ್ಯರ್ಥಿಗಳಿಗೆ ಕ್ರಿಮಿನಲ್ ರೆಕಾರ್ಡ್ ಇದೆಯಂತೆ. ಇದರಲ್ಲಿ ಸಿಂಹಪಾಲು ಚಂದ್ರಬಾಬು ನಾಯ್ಡು ತೆಲುಗುದೇಶಂದ್ದೆ. 12 ಕಾಂಗ್ರೆಸ್, ತಲಾ 2 ಅಣ್ಣಾ ತೆಲುಗು ದೇಶಂ, ತಲಾ 1 ಜನತಾದಳ, ಬಿಜೆಪಿ. ಚುನಾವಣಾ ಹಿಂಸಾಚಾರದಲ್ಲಿ ತೊಡಗಿಲ್ಲವೆಂದರೆ ಎಡಪಕ್ಷಗಳು ಮಾತ್ರ.

ತೆಲುಗು ದೇಶಂ ಮಂತ್ರಿಯೊಬ್ಬರ ಮನೆಯಲ್ಲಿ ಬಾಂಬ್ ಸ್ಫೋಟಿಸಿ ಆ ಕ್ಷೇತ್ರದಲ್ಲಿ ಚುನಾವಣೆ ಮುಂದೂಡಬೇಕಾಯಿತು. ಹಿಂಸಾಚಾರಕ್ಕೆ ಬೇಕಾದ ಸ್ಫೋಟಕಗಳು ಮಂತ್ರಿ ಮನೆಯಲ್ಲಿ ಇದ್ದವು ಎಂದು ಜನರಿಗೆ ಗುಮಾನಿ.

ರಾಷ್ಟ್ರಪತಿಗಳನ್ನೂ ಜರಿದ ಪ್ರಧಾನಿ

ಈ ಬಾರಿ ಬಿಜೆಪಿ ಚುನಾವಣಾ ಪ್ರಚಾರ ಅನಾಗರಿಕ ಮಟ್ಟಕ್ಕೆ ಇಳಿದಿದೆ ಎಂದು ಎಲ್ಲರಿಗೂ ಗೊತ್ತು. ಆ ರೀತಿ ಮಾಡಿದವರಿಗೆ ಬುದ್ಧಿವಾದ ಹೇಳಿದ ಪ್ರಧಾನಿಗಳೇ ಇದಕ್ಕೆ ಹೊರತಾಗಿಲ್ಲ. ಕೆಲವು ಕಡೆ ಅಧ್ಯಕ್ಷ ಕೆ.ಆರ್. ನಾರಾಯಣ್‌ರನ್ನು ಕೆಲವು ಚುನಾವಣಾ ಸಭೆಗಳಲ್ಲಿ ದೂರಿದರು ಎಂದು ವರದಿಯಾಗಿದೆ. ಕಾಂಗ್ರೆಸ್ ರಾಜ್ಯ ಸರ್ಕಾರಗಳನ್ನು ಅಸ್ಥಿರಗೊಳಿಸಲು ಕಲಂ 356 ರ ದುರ್ಬಳಕೆ ಮಾಡಿದೆ ಎಂದು ಆಪಾದಿಸುತ್ತಾ, ನಿಜವಾದ ಬಳಕೆ ಮಾಡಲು ಹೊರಟ ಕಾಂಗ್ರೆಸ್ ರಾಷ್ಟ್ರಪತಿಗಳನ್ನು ದಾರಿತಪ್ಪಿಸಿತು ಎಂದು ಹೇಳಿದ್ದಾಗಿ ವರದಿಯಾಗಿದೆ. ಇದು ಹಂಗಿಸುವುದಲ್ಲದೆ ಮತ್ತೇನು? ಬಿಹಾರದಲ್ಲಿ ರಾಷ್ಟ್ರಪತಿ ಆಡಳಿತ ವಜಾಮಾಡಲು ನಿರ್ಧರಿಸಿದ್ದು ತಮ್ಮ ಸ್ವಂತ ಬುದ್ಧಿ ಉಪಯೋಗಿಸಿ, ಕಾಂಗ್ರೆಸ್ ಸಲಹೆ ಮೇರೆಗೆ ಅಲ್ಲ ಎಂದು ಎಲ್ಲರಿಗೂ ಗೊತ್ತು. ಹಾಗಾದರೆ ಈ ಕಿಡಿಗೇಡಿತನ ಏಕೆ?.

ಕಾಶ್ಮೀರದ ಅನಂತ್‌ನಾಗ್ ಚುನಾವಣೆ ಮುಂದಕ್ಕೆ

ಸಿಪಿಐ(ಎಂ) ನ ಕೇಂದ್ರ ಸಮಿತಿ ಸದಸ್ಯ ಹಾಗೂ ಜಮ್ಮು ಕಾಶ್ಮೀರ ರಾಜ್ಯ ಸಮಿತಿ ಕಾರ್ಯದರ್ಶಿ ಯುಸೂಫ್ ತರಿಗಾಮಿ ಸ್ಪರ್ಧಿಸಿರುವ ಅನಂತ್ ನಾಗ್ ಕ್ಷೇತ್ರದಲ್ಲಿ ಚುನಾವಣೆ ಮುಂದಕ್ಕೆ ಹೋಗಿದೆ. ಜಮ್ಮು ಕಾಶ್ಮೀರದಲ್ಲಿ ಚುನಾವಣೆ ನಡೆಯದಂತೆ ಮಾಡಲು ಪ್ರಯತ್ನಿಸುತ್ತಿರುವ ಪಾಕಿಸ್ತಾನ ಬೆಂಬಲಿತ ಭಯೋತ್ಪಾದಕರಿಗೆ ಸ್ವಲ್ಪ ಸಮಾಧಾನ ಆಗಬಹುದು. ಅನಂತ್‌ನಾಗ್‌ನ ಬಿಜೆಪಿ ಅಭ್ಯರ್ಥಿಯನ್ನು ಭಯೋತ್ಪಾದಕರು ಕೊಂದಿದ್ದಾರೆ. ಅದರಿಂದಾಗಿ ಚುನಾವಣೆ ಮುಂದಕ್ಕೆ ಹೋಗಿದೆ.



ಅಧಿಕಾರಕ್ಕಾಗಿ ಯಜ್ಞದಲ್ಲಿ ವ್ಯಕ್ತಿಪೂಜೆಯ ಹವಿಸ್ಸು

ಈ ಚುನಾವಣೆಗಳಲ್ಲಿ ತಮ್ಮ 13+4 ತಿಂಗಳ ದುರಾಡಳಿತವನ್ನು ಮರೆಮಾಚಲು ಕಾರ್ಗಿಲ್ ವಿಜೇತ ವಾಜಪೇಯಿಯವರನ್ನು ಅಬ್ಬರಿಸುವಲ್ಲಿ ಬಿಜೆಪಿ ಕಾಂಗ್ರೆಸ್(ಐ)ನ ವ್ಯಕ್ತಿಪೂಜೆಯ ದಾಖಲೆ ಗಳನ್ನು ಮೀರಿಸಿ ನಿಂತಿದೆ ಎಂಬುದನ್ನು ನಾವು ಈಗಾಗಲೇ ಗಮನಿಸಿದ್ದೇವೆ. ಲಕ್ನೌನಲ್ಲಿ ಅವರ ನಾಮಪತ್ರ ಸಲ್ಲಿಕೆಯ ಅಬ್ಬರ ಇದಕ್ಕೆ ಅನುಗುಣವಾಗಿತ್ತು. ಇದಕ್ಕೆಲ್ಲಾ ಖರ್ಚು ಯಾರದ್ದು, ಬಿಜೆಪಿಯದ್ದೇ ಅಥವಾ ಸರಕಾರದ್ದೇ ಎಂಬ ಸಂದೇಹ ಹಲವರಲ್ಲಿ ಮೂಡಿದೆ.

ಸಪ್ಟೆಂಬರ್ 7 ರಂದು ಬೆಳಿಗ್ಗೆ ಲಕ್ನೌನ ವಿಧಾನಸಭಾ ಮಾರ್ಗದಲ್ಲಿ ಪಕ್ಷದ ಚುನಾವಣಾ ಕಚೇರಿಯನ್ನು ಉದ್ಘಾಟಿಸಿದ ನಂತರ ಒಂದು ಯಜ್ಞ-ಬಹುಶಃ ಮತದಾರರನ್ನು ಕೇಳಿಕೊಳ್ಳುವ ಮೊದಲು ದೇವತೆಗಳಿಗೆ ತನ್ನನ್ನು ಮತ್ತೆ ಪ್ರಧಾನಮಂತ್ರಿ ಮಾಡಿಸಿ ಎಂದು ಕೇಳಿಕೊಳ್ಳಲೋ ಎಂಬಂತೆ, ಅಥವಾ ಮತದಾರರು ತನ್ನ ವಿಫಲತೆಗಳನ್ನೆಲ್ಲಾ ಮರೆಯುವಂತೆ ಮಾಡಿ ಎಂದೋ ಹವಿಸ್ಸುಗಳನ್ನು ಅರ್ಪಿಸಿದ ಈ ಲಂಚ-ಮುಕ್ತ ಎನಿಸಿಕೊಳ್ಳುವ ಪ್ರಧಾನಮಂತ್ರಿ ಮೋಟಾರುಗಳ ದೊಡ್ಡ ಯಾತ್ರೆಯಲ್ಲಿ ಚುನಾವಣಾಧಿಕಾರಿಗಳ ಕಚೇರಿಯತ್ತ ತೆರಳಿದರು. ದಾರಿಯುದ್ದಕ್ಕೂ ವ್ಯಕ್ತಿಪೂಜೆಯ ಅಬ್ಬರವೋ ಅಬ್ಬರ. ಕಹಾಂ ಪಡೇ ಹೊ ಚಕ್ಕರ್ ಮೇ - ಕೋಯಿ ನಹೀಂ ಹೈ ಠಕ್ಕರ್ ಮೇ - ಅಂದರೆ ನಿಮಗೆದುರಾಳಿ ಯಾರು ಎಂಬ ಘೋಷಣೆ - ಹಾಗಿದ್ದರೂ ಈ ಅಬ್ಬರ ಯಾಕೆ ಎಂದು ಪ್ರಶ್ನಿಸುವವರು ಅಲ್ಲಿರಲು ಸಾಧ್ಯವಿರಲಿಲ್ಲ. ಆದರೆ ಈ ವ್ಯಕ್ತಿಪೂಜೆಯ ಅಬ್ಬರದಲ್ಲಿ ತಾನೊಂದು ಮುಖವಾಡ ಮಾತ್ರ ಎಂದು ವಾಜಪೇಯಿ ಬಹುಶಃ ಮರೆತಿರಲಿಲ್ಲ. "ಇಲ್ಲೀಗ ಹೊಸ ಸಂಬಂಧ. ಇಲ್ಲಿ ನೀವು ಮತದಾರ-ನಾನು ಉಮೇದುವಾರ" ಎಂದು ನೆನಪಿಸಿದರು.

ಈ ಅಬ್ಬರದ ಪ್ರದರ್ಶನದಲ್ಲಿ ಹಲವಾರು ಸರ್ಕಾರಿ ಕಾರುಗಳನ್ನು ಬಳಸಲಾಗಿತ್ತು ಎಂಬ ಆಪಾದನೆಯಂತೂ ಬಂದಿದೆ. ಚುನಾವಣಾ ಆಯೋಗ ಈ ಇಡೀ ಯಾತ್ರೆಯನ್ನು ಚಿತ್ರೀಕರಿಸಿ ಕೊಂಡಿದೆಯಂತೆ. ಮಂತ್ರಿಗಳು ಈ ರೀತಿ ಸರಕಾರೀ ಕಾರುಗಳನ್ನು ಬಳಸಿ ಮೆರವಣಿಗೆಯಲ್ಲಿ ನಾಮಪತ್ರಗಳನ್ನು ಸಲ್ಲಿಸಿದಕ್ಕೆ ಚುನಾವಣಾ ಆಯೋಗ ಆಕ್ಷೇಪ ವ್ಯಕ್ತಪಡಿಸಿತ್ತು.

ಇಷ್ಟೇ ಅಲ್ಲ-ಈ ನಾಮಪತ್ರ ಸಲ್ಲಿಕೆಯ ಅಬ್ಬರ, ಆ ದಿನದ ಸ್ಥಳೀಯ ಪತ್ರಿಕೆಗಳಲ್ಲಿ ಒಂದು ದೊಡ್ಡ ವ್ಯಾಪಾರೀ ಗುಂಪಿನ ಪೂರ್ಣ ಪ್ರಮಾಣದ ಜಾಹೀರಾತು ಪ್ರಕಟಿಸಿತಂತೆ. ಬಿಜೆಪಿಯನ್ನು ಬೆಂಬಲಿಸಿ ಅಲ್ಲಿ ಪ್ರಧಾನ ಮಂತ್ರಿ ವಾಜಪೇಯಿಯವರನ್ನು ಹಾಡಿಹೊಗಳಿತು. ತಮಗೆ 17 ತಿಂಗಳಲ್ಲಿ ಸಕಲ ಸಂಪತ್ತನ್ನೂ ದಯಪಾಲಿಸಿದ ಈ 'ದೇವತೆ'ಗೆ ಬಂಡವಾಳಶಾಹಿ ಗುಂಪುಗಳು ಅರ್ಪಿಸಿದ ಹವಿಸ್ಸುಗಳು ಇಷ್ಟೇ ಅಲ್ಲ - ನಾಮಪತ್ರ ಸಲ್ಲಿಕೆಯ ಈ ಮೆರವಣಿಗೆಯ ದಾರಿಯುದ್ದಕ್ಕೂ ತಳಿರು-ತೋರಣಗಳಿಗೆ, ಒಂದೊಂದು ಕಮಾನಿಗೆ ಒಂದೊಂದು ವ್ಯಾಪಾರೀ ಗುಂಪು ಅಪಾರ ಹಣ ಚೆಲ್ಲಿತ್ತು ಎಂದೂ ಹೇಳಲಾಗಿದೆ.

ಜತೆಗೆ ನವದೆಹಲಿಯಿಂದ ಪತ್ರಕರ್ತರ ಒಂದು ದೊಡ್ಡ ತಂಡವನ್ನೇ ವಿಮಾನದಲ್ಲಿ ತರಲಾಯ್ತು. ಲಕ್ನೌಗೆ ಬಂದಿಳಿದ ಸುಮಾರು 40 ಪತ್ರಕರ್ತರು, ಫೋಟೋಗ್ರಾಫರುಗಳು, ವಿಡಿಯೋಗ್ರಾಫರುಗಳು ಬಿಜೆಪಿ ವ್ಯವಸ್ಥೆ ಗೊಳಿಸಿದ ಅಥವಾ ಸರಕಾರೀ ವಾಹನಗಳಲ್ಲಿ ಓಡಾಡುತ್ತಿದ್ದರು ಎಂದೂ ವಿರೋಧ ಪಕ್ಷಗಳು ಚುನಾವಣಾ ಆಯೋಗಕ್ಕೆ ದೂರು ನೀಡಿವೆ. ಚುನಾವಣೆಯ ನೀತಿ ಸಂಹಿತೆ ಇರುವುದೇ ಎಲ್ಲ ಅಭ್ಯರ್ಥಿಗಳಿಗೂ ಸಮಾನ ಅವಕಾಶ ಕೊಡಲೆಂದು, ಆದರೆ ವಾಜಪೇಯಿಯವರ ನಾಮಪತ್ರ ಸಲ್ಲಿಕೆಯ ಅಬ್ಬರದಲ್ಲಿ ಇದೆಲ್ಲಾ ಮೂಲೆಗುಂಪಾಯಿತು ಎಂದು ಪತ್ರಕರ್ತರೊಬ್ಬರು ಹೇಳಿದ್ದಾರೆ.

ನಾಮಪತ್ರ ಸಲ್ಲಿಸಿದ ನಂತರ ವಾಜಪೇಯಿಯವರ ಭಾಷಣವೂ ಬಿಜೆಪಿಯ ಈ ಬಾರಿಯ ಚುನಾವಣಾ ಪ್ರಚಾರದಲ್ಲಿ ಎದ್ದು ಕಾಣುತ್ತಿರುವ ಗೋಸುಂಬೆತನಕ್ಕೆ ಇನ್ನೊಂದು ಉದಾಹರಣೆ ಯಾಗಿತ್ತು. ನನ್ನ ಐವತ್ತು ವರ್ಷಗಳ ರಾಜಕೀಯ ಜೀವನದಲ್ಲಿ ನಾನೆಂದೂ ಪ್ರತಿಸ್ಪರ್ಧಿಗಳ ವಿರುದ್ಧ ಹೀನ, ತುಚ್ಛ ಮಾತುಗಳನ್ನಾಡಿಲ್ಲ, ಬೇರೆಯವರಿಂದಲೂ ನಾನು ಇದನ್ನೇ ನಿರೀಕ್ಷಿಸುತ್ತೇನೆ ಎಂದು ಭಾವ ಪೂರ್ಣವಾಗಿ ಹೇಳಿದರಂತೆ. ಬೇರೆ ಯವರು ಎಂದರೆ ಅದರಲ್ಲಿ ಪ್ರಮೋದ್ ಮಹಾಜನ್, ಫರ್ನಾಂಡೀಸ್ ರವರು ಇದ್ದಾರೋ ತಿಳಿಯಲಿಲ್ಲ. (ಈ ವ್ಯಂಗ್ಯಚಿತ್ರ ಈ ಗೋಸುಂಬೆ ತನವನ್ನು ಸುಂದರವಾಗಿ ಚಿತ್ರಿಸಿದೆ)



'ಹಿಂದು'ನಲ್ಲಿ ಸುರೇಂಧ್ರನ್

ಹೀಗನ್ನುತ್ತಾರೆ

'ವಾಜಪೇಯಿಯ ಮುಖ ನೋಡಿ ಓಟು ಹಾಕಿ' ಎಂಬ ಮಂತ್ರ ಘೋಷಣೆ ಡೆಲ್ಲಿಯಿಂದ ಹಳ್ಳಿಯ ತನಕ ಹರಡುತ್ತಿದೆ. ಭರತನಾಟ್ಯದಭಂಗಿಗಳಲನ್ನು ಪ್ರದರ್ಶಿಸುತ್ತಾ ಮಾತನಾಡುವ, ತಾನು ಮಾತನಾಡಿದ್ದೇ ಸಾರ್ವತ್ರಿಕ ಸತ್ಯವೆಂದು ಭ್ರಮಿಸುವ ವಾಜಪೇಯಿಯವರಿಗೆ ಬಾಬರಿಮಸೀದಿ ಕೆಡವುವುದು ತಪ್ಪು ಎಂದು ಗೊತ್ತಿದ್ದರೂ ಅದನ್ನು ಹೇಳಲಿಲ್ಲ.

ಮಸೀದಿ ಬಿದ್ದಾಗ ಸಾರ್ವಜನಿಕವಾಗಿ ಕಣ್ಣೀರು ಸುರಿಸುತ್ತಾ, ನನಗೆ ಏನೂ ಗೊತ್ತಿಲ್ಲ, ನಾನು ಇದಕ್ಕೆ ಹೊಣೆಗಾರನಲ್ಲ ಎಂದು ಅಳುಮುಂಜಿ ವೇಷ ತೊಟ್ಟ ಇವರಿಗೆ, ದಿಟ್ಟವಾಗಿ ಮಸೀದಿ ಬೀಳಿಸಿದ್ದು ನಮ್ಮ ಪಕ್ಷದ ನಾಯಕರ ಭಂಡತನ ಎಂದು ಹೇಳಲು ಸಾಧ್ಯವಾಗಲೇ ಇಲ್ಲ.

('ಅಗ್ನಿ' ಪತ್ರಿಕೆ)

ಬಿಜೆಪಿದು ಗರ್ಭಗುಡಿ ಸಂಸ್ಕೃತಿ. ಕಾಂಗ್ರೆಸ್‌ದು ಪ್ಯಾಲೇಸ್-ಕಲ್ಚರ್, ಆಸ್ಥಾನ ಸಂಸ್ಕೃತಿ. ಇಲ್ಲಿ ಹೊಗಳುಭಟರು, ಹೇಳಿದ್ದು ಕೇಳಿಕೊಂಡು ಇರುವವರು ಜಾಸ್ತಿ. ಎರಡರಿಂದಲೂ ಉಪಯೋಗವಿಲ್ಲ. ಎರಡೂ ಪಾರ್ಟಿ ಹಿಡಿಸಲಿಲ್ಲ ಬಿಟ್ಟೆ.

ಯಾವುದೇ ಕಾರಣಕ್ಕೂ ಬಿಜೆಪಿಗೆ ಓಟುಕೊಡಬಾರದು. ಆದರಲ್ಲಿ ಒಳ್ಳೇ ವ್ಯಕ್ತಿ ಇದ್ದರೂ ಕೊಡಬಾರದು. ಯಾಕೆಂದರೆ ಬಿಜೆಪೀಲಿ ರೆಜಿಮೆಂಟೇಷನ್ ಇದೆ. ಅದು ಕಟ್ಟುನಿಟ್ಟಾಗಿ ಆರ್‌ಎಸ್‌ಎಸ್ ಏನು ಹೇಳುತ್ತೋ ಅದನ್ನು ಪಾಲಿಸುತ್ತದೆ. ಅಲ್ಲಿ ಯಾರೂ ವಿರೋಧ ಧ್ವನಿ ಎತ್ತುವ ಹಾಗಿಲ್ಲ. ಅದಕ್ಕೆ ಒಳ್ಳೇ ಉದಾಹರಣೆ ನಾನೇ ಇದ್ದೀನಿ. ಬಿಜೆಪಿಯವರು ಸಮಾಜವನ್ನು ಒಡೆದು, ಧರ್ಮ ಧರ್ಮಗಳ ಜನರನ್ನು ವಿಂಗಡಣೆ ಮಾಡಿ ರಾಜಕೀಯವಾಗಿ ಅದರ ಉಪಯೋಗ ಪಡೆಯಲು ನೋಡ್ತಾರೆ. ಜೊತೆಗೆ ರಾಷ್ಟ್ರಕ್ಕೆ ಗಂಡಾಂತರ ತಂದು, ಅದನ್ನು ರಾಜಕೀಯ ಲಾಭಕ್ಕೆ ಬಳಸಿಕೊಳ್ತಾರೆ. ಅದಕ್ಕೆ ತಕ್ಕ ಉದಾಹರಣೆ ಕಾರ್ಗಿಲ್.

ಎಚ್.ಎನ್. ನಂಜೇಗೌಡ.

ಸೆಪ್ಟಂಬರ್ 5 ಮತದಾನದೊಂದಿಗೆ 13ನೇ ಲೋಕಸಭಾ ಚುನಾವಣೆಗಳು ಆರಂಭವಾಗಿವೆ. ದಿಲ್ಲಿ, ಪಂಜಾಬ್, ಚಂಢೀಗಡ, ಹರ್ಯಾಣ, ರಾಜಸ್ತಾನದಲ್ಲಿ, ತಮಿಳುನಾಡು, ಕರ್ನಾಟಕ ಹಾಗೂ ಮಹಾರಾಷ್ಟ್ರದ ಕೆಲವು ಕ್ಷೇತ್ರಗಳಲ್ಲಿ ಮತದಾನ ನಡೆದಿದೆ. ಈ ಸಂಚಿಕೆ ಓದುಗರ ಕೈಸೇರುವ ವೇಳೆಗೆ ಎರಡನೇ ಹಂತ ಚುನಾವಣೆಗಳೂ ಮುಗಿದಿರುತ್ತವೆ. ಇದುವರೆಗಿನ ಪ್ರಚಾರದಲ್ಲಿ ಕಂಡುಬಂದಿರುವ ಅಂಶಗಳ ಬಗ್ಗೆ ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಹರ್ಕಿಶನ್ ಸಿಂಗ್ ಸುರ್ಜಿತ್ ಬರೆದಿದ್ದಾರೆ.



ಬಿಜೆಪಿಯ ಕುಚೇಷ್ಟೆಗಳು ನಮ್ಮ ಜನಗಳನ್ನು ಮರುಳುಗೊಳಿಸಬಲ್ಲವೇ

- ಸುರ್ಜಿತ್

ಆಳುವ ಬಿಜೆಪಿ ಮತ್ತು ಅದರ ಮಿತ್ರ ಪಕ್ಷಗಳಿಗೆ ತಮ್ಮ ಬಚಾವ್ ಮಾಡಿಕೊಳ್ಳಬೇಕಾಗಿ ಬಂದಿದೆ. ತಮ್ಮ ಸುಮಾರು 17 ತಿಂಗಳ ಆಡಳಿತದ ಕೃತ್ಯ-ಕುಕೃತ್ಯಗಳ ಲೆಕ್ಕ ಕೊಡಬೇಕಾಗಿ ಬಂದಿದೆ. ಇದು ಇದುವರೆಗೆ ನಡೆದಿರುವ ಪ್ರಚಾರದ ವೈಖರಿಯಿಂದ ಸ್ಪಷ್ಟವಾಗಿ ಕಾಣಬಂದಿರುವ ಸಂಗತಿ. ಈ ಎಲ್ಲಾ ರಾಜ್ಯಗಳಲ್ಲಿ ವಿರೋಧ ಪಕ್ಷಗಳ ರ್‍ಯಾಲಿಗಳು ಜನರ ಸ್ಪಂದನ ಗಳಿಸಿದ್ದು, ಮತ್ತೆ ಅಧಿಕಾರಕ್ಕೆ ಮರಳುವ ಆಳುವ ಕೂಟದ ನಿರೀಕ್ಷೆಗಳಿಗೆ ಜನ ನೀರೆರಚುವಂತೆ ಕಾಣುತ್ತಿದೆ. ಈ ಎಲ್ಲಾ ಪ್ರದೇಶಗಳಲ್ಲಿ ಸಂಚರಿಸಿ, ದೊಡ್ಡ ಚುನಾವಣಾ ಸಭೆಗಳನ್ನುದ್ದೇಶಿಸಿ ಮಾತನಾಡಿದ ನಾನೇ ಸ್ವತಃ ವಿರೋಧ ಪಕ್ಷಗಳ ರ್‍ಯಾಲಿಗಳಲ್ಲಿ ಭಾರೀ ಜನಸ್ತೋಮ ಸೇರುತ್ತಿರುವುದನ್ನು ಕಂಡಿದ್ದೇನೆ.

ನಿಜ, ಇದು ಮಾಧ್ಯಮಗಳು - ಪತ್ರಿಕೆ ಮತ್ತು ಟಿ.ವಿ.ಗಳು ನೀಡುವ ಚಿತ್ರಕ್ಕಿಂತ ಸಂಪೂರ್ಣ ಭಿನ್ನವಾದದ್ದು - ಅವುಗಳ ಪ್ರಕಾರ ಬಿಜೆಪಿ ಮತ್ತೆ ಅಧಿಕಾರಕ್ಕೆ ಮರಳುತ್ತದೆ - ಅದೂ ಇನ್ನಷ್ಟು ಶಕ್ತಿಯೊಂದಿಗೆ. ಆದರೆ ನೆಲದಲ್ಲಿನ ವಾಸ್ತವತೆ ಭಿನ್ನವಾಗಿರುವಂತೆ ಕಾಣುತ್ತದೆ. ಆಳುವ ಕೂಟ ಮತ್ತು ಮಾಧ್ಯಮಗಳಲ್ಲಿನ ಅವರ ಹಿತೈಷಿಗಳಿಗೆ ಜನಸಮೂಹಗಳು ಎಂತಹ ಅಚ್ಚರಿಯನ್ನು ಕಾದಿರಿಸಿದ್ದಾರೆ ಎಂದು ಅಕ್ಟೋಬರ್ 7 ರಿಂದ ಅರಿವಿಗೆ ಬರಲಾರಂಭಿಸಿದರೆ ಅದರಲ್ಲಿ ಬಹಳ ಆಶ್ಚರ್ಯವೇನಿಲ್ಲ.

ಇದುವರೆಗಿನ ಚುನಾವಣಾ ಪ್ರಚಾರ ಒಂದು ವಿಷಯವನ್ನಂತೂ ಸ್ಪಷ್ಟಪಡಿಸಿದೆ. ಅದೇನೆಂದರೆ ಬಿಜೆಪಿ ಮತ್ತು ಅದರ ಮಿತ್ರರಿಗೆ ಜನರೆದುರು ಇಡಲು ವಿಷಯಗಳೇ ಇದ್ದಂತಿಲ್ಲ. ವಿಷಯಗಳೇ ಅಲ್ಲದ ವಿಷಯಗಳನ್ನು ಅಥವಾ ಜನರನ್ನು ತಪ್ಪುದಾರಿಗೆಳೆಯಬಯಸುವ ವಿಷಯಗಳನ್ನಷ್ಟೇ ಅವರು ಎತ್ತುತ್ತಿದ್ದಾರೆ. ಉದಾಹರಣೆಗೆ, ಅವರು ವಿದೇಶಿ ಸೋನಿಯಾ-ಸ್ವದೇಶಿ ವಾಜಪೇಯಿಯ ಬೊಬ್ಬೆ ಎಬ್ಬಿಸಲು ಪ್ರಯತ್ನಿಸುತ್ತಿದ್ದಾರೆ. ಕಾರ್ಗಿಲ್‌ನ ಪ್ರಯೋಜನ ಗಿಟ್ಟಿಸಲು ಯತ್ನಿಸುತ್ತಿದ್ದಾರೆ. ಇತ್ತೀಚೆಗೆ ಪರಮಾಣು ಧೋರಣೆಯ ಬಗ್ಗೆಯೂ ಮಾತನಾಡಲಾರಂಭಿಸಿದ್ದಾರೆ. ಪರಮಾಣು ಲೇಪಿತ ಕ್ಷಿಪಣಿಗಳ ಸಹಾಯದಿಂದ ತಮ್ಮ ಮುಂದಿರುವ ಚುನಾವಣಾ ವೈತರಣಿಯನ್ನು ದಾಟಬಹುದೆಂಬ ಭ್ರಮೆ ಅವರಿಗೆ. ಇವಿಷ್ಟೇ ಬಿಜೆಪಿ ಮುಖಂಡರ ಹಾಗೂ ಅವರ ಮಿತ್ರರ ದಾಸ್ತಾನಿನಲ್ಲಿರುವ ಸರಕುಗಳು. ನಿಜವಾಗಿಯೂ ಹಿಂದೆಂದೂ ಯಾವ ಆಳುವ ಪಕ್ಷಕ್ಕೂ ತನ್ನ ಚುನಾವಣಾ ಪ್ರಚಾರಕ್ಕೆ ವಿಷಯಗಳ ಈ ರೀತಿಯ ಬರ ಬಂದಿರಲಿಲ್ಲ.

ಇನ್ನೊಂದು ಹತಾಶೆ

ಇಂತಹ ಸನ್ನಿವೇಶದಲ್ಲಿ ಆಳುವ ಕೂಟದ ಮುಖಂಡರು ಈಗ ಚಾರಿತ್ರ್ಯವಧೆಯ ಮಟ್ಟಕ್ಕಿಳಿದು ಬೈಗುಳ ಭಾಷೆಗಳನ್ನು ಬಳಸಲಾರಂಭಿಸಿದರೆ ಆಶ್ಚರ್ಯವಿಲ್ಲ. ಶ್ರೀಮತಿ ಸೋನಿಯಾ ಗಾಂಧಿಯವರ ವಿರುದ್ಧ ಪ್ರಮೋದ್ ಮಹಾಜನ್‌ರ ಇತ್ತೀಚಿನ ಅಸಭ್ಯ ಮಾತುಗಳು ಬಿಜೆಪಿ ಮುಖಂಡರು ಎಂತಹ ಹತಾಶ ಸ್ಥಿತಿಗೆ ತಲುಪಿದ್ದಾರೆ ಎಂಬುದರ ಒಂದು ಸಂಕೇತ ನೀಡಿದೆಯಷ್ಟೆ. ಆರ್‌ಎಸ್‌ಎಸ್ - ಬಿಜೆಪಿ ಈಗಲೂ ಹೊಲಸು ಭಾಷೆ ಬಳಸುವಲ್ಲಿ, ಚಾರಿತ್ರ್ಯವಧೆಯಲ್ಲಂತೂ ನಿಸ್ಸೀಮರಾಗಿಯೇ ಉಳಿದಿದ್ದಾರೆ.

ಆದರೆ ನಮ್ಮ ಗ್ರಾಮೀಣ ಜನ ಹೇಳುವಂತೆ, ನಿಶ್ಯಕ್ತನೊಬ್ಬ ತನ್ನ ಎದುರಾಳಿಯನ್ನು ಬೈಯುವುದಲ್ಲದೆ ಬೇರೇನೂ ಮಾಡಲಾರ!

ಈ ಸರಕಾರ ತನ್ನ ಇಡೀ ಅಧಿಕಾರಾವಧಿಯಲ್ಲಿ ದೇಶ ಮತ್ತು ಜನಗಳನ್ನು ಬಾಧಿಸುವ ಯಾವುದೇ ಗಮನಾರ್ಹ ಪ್ರಶ್ನೆಯನ್ನು ಎತ್ತಿಕೊಳ್ಳಲೇ ಇಲ್ಲ ಎಂಬುದೀಗ ಸ್ಪಷ್ಟ. ಈ ಆಳ್ವಿಕೆಯಲ್ಲಿ ಕಾರ್ಮಿಕರು, ರೈತರು, ಕೃಷಿಕೂಲಿಕಾರರು, ಅಷ್ಟೇ ಅಲ್ಲ ನಗರದ ಮಧ್ಯಮ ವರ್ಗಗಳ ಜೀವನಮಟ್ಟ ಇನ್ನಷ್ಟು ಹದಗೆಟ್ಟಿದೆಯೇ ಹೊರತು ಸುಧಾರಿಸಲಿಲ್ಲ. ಈರುಳ್ಳಿ ಇದರ ಅತ್ಯುತ್ತಮ ಪ್ರತೀಕ. ಇನ್ನೊಂದೆಡೆ ದಿಲ್ಲಿಯಲ್ಲಿನ ಈ ಸರಕಾರ ಜನಗಳನ್ನು ಡ್ರಾಪ್ಸಿ ಸಾವಿಗೆ ತುತ್ತಾಗಿಸಿಯಾದರೂ ತೈಲ ಉದ್ಯಮದ ಕುಳಗಳಿಗೆ ಲಾಭ ಸೂರೆ ಮಾಡಲು ಅವಕಾಶ ನೀಡಿತು - ಶ್ರೀಮಂತರು ಇನ್ನಷ್ಟು ಶ್ರೀಮಂತರಾಗಲು ಹೇಗೆ ಇದು ಅವಕಾಶ ಮಾಡಿಕೊಟ್ಟಿತು ಎಂಬುದಕ್ಕೆ ಇದು ಒಂದು ಉದಾಹರಣೆಯಷ್ಟೆ.

ಅದೇ ವೇಳೆಗೆ ಅಲ್ಪಸಂಖ್ಯಾತರಿಗೆ ಮತ್ತು ರಾಷ್ಟ್ರೀಯ ಐಕ್ಯತೆಗೆ ಈ ಸರಕಾರ ಮಾಡಿದ ಅಪಚಾರ ಅಪಾರ. ಆರ್‌ಎಸ್‌ಎಸ್ ಪಡೆಗಳು ಯಾವುದೇ ಅಡೆತಡೆಯಿಲ್ಲದೆ ತಮ್ಮ ಧ್ವಂಸಕಾರ್ಯ ನಡೆಸಲು ಅವಕಾಶ ನೀಡಿತು. ಕಾರ್ಗಿಲ್‌ನಲ್ಲಿ ಅವರ ವಿಫಲತೆ ಟೆಲಿಕಾಂ ವಲಯದಲ್ಲಿ ಅದರ ಭ್ರಷ್ಟ ನಡುವಳಿಕೆಗಳು ಅದರ ದೇಶ-ವಿರೋಧಿ ಸ್ವರೂಪದ ಜೀವಂತ ಪ್ರತೀಕಗಳಾಗಿ ಬಿಟ್ಟಿವೆ. ಇದನ್ನು ಯಾರೂ ಮೀರಿಸಲು ಸಾಧ್ಯವಿಲ್ಲ! ಪಾಕಿಸ್ತಾನದೊಂದಿಗೆ ಸಕ್ಕರೆ ವ್ಯವಹಾರದ ಬಗ್ಗೆಯೂ ಸರಕಾರ ವಿವರಣೆ ಕೊಡಬೇಕಾದ ಪರಿಸ್ಥಿತಿ ತಂದುಕೊಂಡಿದೆ.

ಸಿಪಿಐ(ಎಂ) ಇತ್ತೀಚೆಗೆ ಪ್ರಕಟಿಸಿರುವ ಹತ್ತು ಕಿರುಹೊತ್ತಿಗೆಗಳು ಬಿಜೆಪಿ ನೇತೃತ್ವದ ಸರಕಾರದ ನಿಜ ಸ್ವರೂಪವನ್ನು ಉದಾಹರಣೆಸಹಿತ ಬಯಲಿಗೆಳೆದಿವೆ. ಇಂತಹ ಒಂದು ಪಕ್ಷ ಅಧಿಕಾರದಲ್ಲಿ ಮುಂದುವರೆಯುವುದು - ದೇಶದ ವರ್ತಮಾನ ಮತ್ತು ಭವಿಷ್ಯಕ್ಕೆ ಸಂಚಕಾರ-ತರುತ್ತದೆ ಎಂಬುದನ್ನು ಮನಗಾಣಿಸಿವೆ.

ಸ್ವದೇಶಿ ಧೋತಿ, ವಿದೇಶಿ ನಡೆ

ಈ ರೀತಿ ಜನರೆದುರು ಇಡಬಹುದಾದ ವಿಷಯಗಳಿಲ್ಲದೆ, 17 ತಿಂಗಳಲ್ಲಿ ಹೇಳಬಹುದಾದ ಸಾಧನೆಗಳಿಲ್ಲದೆ ಇರುವುದರಿಂದಲೇ ಬಿಜೆಪಿ ಮ[illegible] ಅದರ ಮಿತ್ರರು ವಿರೋಧಿ ಮುಖಂಡರ ಮ[illegible] ವೈಯಕ್ತಿಕ ಧಾಳಿ ಆರಂಭಿಸಿದ್ದಾರೆ. ಅರ್ಥಹಿ[illegible] ಚರ್ಚೆಗಳನ್ನು ನಡೆಸುತ್ತಿದ್ದಾರೆ.

ಬಿಜೆಪಿ ಮುಖಂಡರಲ್ಲಂತೂ ಈಗ ಸ್ವದ[illegible] ಎಂಬುದೇನಾದರೂ ಉಳಿದಿದ್ದರೆ ಅದು ಅ[illegible] ಧೋತಿಗಳು ಮಾತ್ರ ಎಂಬ ಕಟು ಸತ್ಯವನ್ನು [illegible] ಯಾರು ತಾನೇ ಮರೆಯಲು ಸಾಧ್ಯ? ಭಾ[illegible] ಸ್ವತಂತ್ರವಾಗಿ 52 ವರ್ಷಗಳಲ್ಲಿ ಈ ಸರಕಾರದ[illegible] ವಿದೇಶಿ-ಪರ ಸರಕಾರವನ್ನು ಹಿಂದೆಂದೂ ಕಂಡಿ[illegible] ಅದು ವಿದೇಶಾಂಗ ಪ್ರಶ್ನೆಗಳಲ್ಲಾಗಬಹು[illegible] ಮಿಲಿಟರಿ ಧೋರಣೆಗಳಲ್ಲಾಗಬಹುದು, ಆ[illegible] ಮತ್ತು ವಾಣಿಜ್ಯ ವಲಯಗಳಲ್ಲೇ-ಇರಬಹು[illegible] ಹಣ್ಣಿನ ರಸ, ಉಪ್ಪಿನ ಕಾಯಿಯನ್ನೂ ಸೇರಿಸಿ [illegible] ಐಟಂಗಳನ್ನು ಮುಕ್ತ ಸಾರ್ವತ್ರಿಕ ಲೈಸೆನ್ಸ್[illegible] ಜಿ.ಎಲ್) ಪಟ್ಟಿಗೆ ತಂದು ಅವುಗಳ ಆಮ[illegible] ಮುಕ್ತ ಅವಕಾಶ ಒದಗಿಸಿ ಸ್ಥಳೀ[illegible] ಉದಿಮೆಗಳನ್ನು ಹಾಳುಗೆಡಹಿರುವು[illegible] ಪೇಟೆಂಟ್ ಪ್ರಶ್ನೆಯಲ್ಲಿ ರಾಷ್ಟ್ರೀ[illegible] ಹಿತಾಸಕ್ತಿಗಳನ್ನು ಬಿಟ್ಟುಕೊಟ್ಟಿರುವುದು, [illegible] ಒಪ್ಪಂದದ ಮರುಪರಿಶೀಲನೆಗೆ ಸೇರಲಿರುವ [illegible] ವ್ಯಾಪಾರ ಸಂಸ್ಥೆಯ ಮಂತ್ರಿ ಮಟ್ಟದ ಸ[illegible] ತಯಾರಿ ನಡೆಸಲು ಇ[illegible] ಹಿಂಜರಿಯುತ್ತಿರುವುದು, ವಿದ[illegible] ಬಹುರಾಷ್ಟ್ರೀಯ ಕಂಪನಿಗಳಿಗೆ ವಿ[illegible] ವಲಯವನ್ನು ತೆರೆಯಲು ಅವರು ಮಾ[illegible] ಪ್ರಯತ್ನ ಹಾಗೂ ಅಮೆರಿಕಾದ ಎದುರು ಸಾಷ್ಟಾ[illegible] ನಮಸ್ಕಾರ ಹಾಕಿ ಸಿಟಿಬಿಟಿಗೆ ಸಹಿ ಹಾಕ[illegible] ಹಾತೊರೆಯುತ್ತಿರುವುದು - ಇವೆಲ್ಲಾ ಬಾಯಿ[illegible]



ಕೇರಳದಲ್ಲಿ ಚುನಾವಣಾ ಸಭೆಯೊಂದನ್ನು ಉದ್ದೇಶಿಸಿ ಮಾತನಾಡುತ್ತಿರುವ ಸುರ್ಜಿತ್

ರಾಷ್ಟ್ರೀಯವಾದಿಗಳೆಂದು ಹೇಳಿಕೊಂಡರೂ ವಾಸ್ತವವಾಗಿ ಅವರ ನಿಜವಾದ ಸಹಾನುಭೂತಿ ಯಾವ ಕಡೆಗಿದೆಯೆಂಬುದನ್ನು ಸ್ಪಷ್ಟವಾಗಿ ತೋರಿಸಿಕೊಟ್ಟಿದೆ. ಆದ್ದರಿಂದಲೇ ತಾನೇ ದೊಡ್ಡ ಕಂಪನಿಗಳು, ವಿದೇಶಿ ಬಹುರಾಷ್ಟ್ರೀಯ ಕಂಪನಿಗಳು, ಬಿಜೆಪಿಯ ತಿಜೋರಿಗೆ ಹಣವನ್ನು ಸುರಿಯುತ್ತಿರುವುದು? ಸಿಐಐ ಅಧ್ಯಕ್ಷ ರಾಹುಲ್ ಬಜಾಜ್ ಬಿಜೆಪಿ ಅತಿ ಹೆಚ್ಚು ಉದ್ಯಮ ಪರ(ಬಂಡವಾಳಪರ ಎಂದು ಓದಿಕೊಳ್ಳಿ) ಪಕ್ಷ ಎಂದು ಸರ್ಟಿಫಿಕೇಟ್ ನೀಡಿರುವುದು ಸುಮ್ಮನೇ ಅಲ್ಲ. ಪಾಕಿಸ್ತಾನದ ಮೂಲಭೂತವಾದಿ ಲಷ್ಕರ್-ಇ- ತಯ್ಯಾಬಾ ಕೂಡಾ ಬಿಜೆಪಿ ಸರಕಾರ ಮತ್ತೆ ಬರಲಿ ಎಂದು ಆಶಿಸುತ್ತಿರುವುದು ಸುಮ್ಮನೇ ಅಲ್ಲ - ಅದರಿಂದ ತಮ್ಮ ಉದ್ದೇಶ ಸಾಧನೆಯಾಗುತ್ತದೆಂದು ಅವರ ಯೋಚನೆ.

ಜನಗಳ ಆಕಾಂಕ್ಷೆಗಳ ಅರಿವಿಲ್ಲದ ಕೂಟ

ಬ್ರಿಟಿಶರ ವಿರುದ್ಧ ಸ್ವಾತಂತ್ರ್ಯ ಹೋರಾಟಗಳಲ್ಲಾಗಲೀ, ರಾಜ-ಮಹಾರಾಜರುಗಳ ಆಳ್ವಿಕೆಯ ವಿರುದ್ಧ ಜನತಾ ಹೋರಾಟಗಳಲ್ಲಾಗಲೀ ಒಟ್ಟಾರೆಯಾಗಿ ರಾಷ್ಟ್ರೀಯ ಆಂದೋಲನದಲ್ಲಿ ಎಂದೂ ಪಾತ್ರವಹಿಸದವರು ಕಟ್ಟಿಬೆಳೆಸಿದ ಈ ಪಕ್ಷದಿಂದ ಇಂತಹ ವರ್ತನೆ ಸಹಜ ಕೂಡ.ಈ ಜನ ಮಾಡಿದ್ದು ಇಷ್ಟೇ - ಕಾಶ್ಮೀರದಲ್ಲಾದಂತೆ ಆಳರಸರ ಪಕ್ಷ ವಹಿಸಿ ಸ್ವಾತಂತ್ರ್ಯದ ಮೊದಲು ಮತ್ತು ನಂತರ ಕೋಮುಗಲಭೆಗಳನ್ನು ಉದ್ರೇಕಿಸಿದ್ದು. ಅಥವಾ 1942 ರಲ್ಲಿ ಆಗ್ರಾದಲ್ಲಾದಂತೆ ಸ್ವಾತಂತ್ರ್ಯ ಹೋರಾಟಗಾರರಿಗೆ ಜೈಲು ಶಿಕ್ಷೆಯಾಗುವಂತಹ ಹೇಳಿಕೆಗಳನ್ನು ಪೋಲೀಸರಿಗೆ ನೀಡಿದ್ದು.

ಈಗಿನ ಬಿಜೆಪಿ ಮುಖಂಡರ ಪೂರ್ವಜರು ಸ್ವಾತಂತ್ರ್ಯ ಆಂದೋಲನ ದಲ್ಲಾಗಲೀ, ಸಂಸ್ಥಾನಗಳ ಲ್ಲಾಗಲೀ ನಡೆದ ಜನತಾ ಹೋರಾಟಗಳಲ್ಲಾಗಲೀ ಭಾಗವಹಿಸಿದ್ದರೆ ಜನಗಳ ನಿಜವಾದ ಭಾವನೆಗಳನ್ನು ಅರ್ಥಮಾಡಿಕೊಳ್ಳಲು ಸಾಧ್ಯವಾಗುತ್ತಿತ್ತು. ಉದಾಹರಣೆಗೆ, ಹೇಗೆ ಭೂಸುಧಾರಣೆಯ ಹೃದಯ ದಾಳದ ಆಕಾಂಕ್ಷೆಯಿಂದ ರೈತರು ಸ್ವಾತಂತ್ರ್ಯ ಹೋರಾಟದಲ್ಲಿ ಧುಮುಕಿ ದರು ಎಂದು ಅವರಿಗೆ ಅರ್ಥವಾಗುತ್ತಿತ್ತು. ಇಂತಹ ಪರಂಪರೆಯಿಲ್ಲದ ಜನಕ್ಕೆ ಅದರೊಡನೆ ಅವರ ಆಳುವ ವರ್ಗ ಹಿತಾಸಕ್ತಿಗಳು ಸೇರಿಕೊಂಡು ಜನಗಳ ನೈಜ ಆಕಾಂಕ್ಷೆಗಳು ಏನು ಎಂದೇ ಅರ್ಥವಾಗುತ್ತಿಲ್ಲ. ಆದ್ದರಿಂದಲೇ ಬಿಜೆಪಿಯಾಗಲೀ, ಅದರ ಹಿಂದಿನ ಅವತಾರವಾದ ಜನಸಂಘವಾಗಲೀ ಎಂದೂ ಯಾವ ರೀತಿಯ ಭೂಸುಧಾರಣೆಯ ಬಗ್ಗೆಯೂ ಪ್ರಸ್ತಾಪವನ್ನೇ ಮಾಡಿಲ್ಲ.


ಹೀಗಿರುವಾಗ ಬಿಜೆಪಿ ಮುಖಂಡರು ಜನ-ಪರ ಕ್ರಮಗಳ ಬಗ್ಗೆ ಮಾತನಾಡುವಾಗ ಅತ್ಯಂತ ಅಜ್ಞಾನಿಗಳಂತೆ ಕಾಣುತ್ತಾರೆ. ಅಥವಾ ಶಕುನಿಗಳಂತೆ ಕಾಣುತ್ತಾರೆ. ಏನೇ ಆಗಲೀ ಈ ವಿಷಯದಲ್ಲಂತೂ ಅವರ ಮಾತುಗಳು ಹಾಸ್ಯಾಸ್ಪದವೇ ಆಗುತ್ತಿವೆ. ಉದಾಹರಣೆಗೆ, ದಕ್ಷಿಣ ಏಶ್ಯಾದಲ್ಲಿ ಪರಮಾಣು ಅಥವಾ ಪಾರಂಪರಿಕ ಶಸ್ತ್ರಾಸ್ತ್ರಗಳ ಪೈಪೋಟಿ ಆರಂಭಿಸುವುದು ಜನ-ಪರವಾದ ಒಂದು ಕ್ರಮವೇ ಎಂದು ಕೇಳಿನೋಡಿ. ಇದಕ್ಕೆ ತಗಲುವ ಭಾರೀ ವೆಚ್ಚವನ್ನು ಭರಿಸಬೇಕಾದವರು ಯಾರು? ಜನಸಾಮಾನ್ಯರೇ ಅಲ್ಲವೇ? ಪೇಟೆಂಟ್ ವಿಷಯದಲ್ಲಿ ಶರಣಾಗತಿಗೆ ನಮ್ಮ ಜನಗಳು ಭಾರೀ ಬೆಲೆ ತೆರಬೇಕಾಗಿ ಬರುತ್ತದೆ ಎಂಬುದು ಇವರಿಗೆ ತಿಳಿದಿದೆಯೇ? ಹೀಗೆಯೇ ಈ ಪಟ್ಟಿಯನ್ನು ಬೆಳೆಸುತ್ತಾ ಹೋಗ ಬಹುದು. ಅವರ ಈ ಹೇಳಿಕೆಗಳು ಹಾಸ್ಯಾಸ್ಪದ ಮಾತ್ರವೇ ಅಲ್ಲ, ರಾಷ್ಟ್ರೀಯ ಹಿತಾಸಕ್ತಿಗಳಿಗೆ ಮತ್ತು ಜನಗಳ ಆಕಾಂಕ್ಷೆಗಳಿಗೆ ಮಾರಕ ಕೂಡಾ.

ಅಮೂಲ್ಯ ಪ್ರಶ್ನೆ

ಇವೆಲ್ಲಕ್ಕೂ ಮೀರಿದ ಕೋಟಿ ಕೋಟಿ ರೂಪಾಯಿ ಬೆಲೆಬಾಳುವ ಪ್ರಶ್ನೆಯೆಂದರೆ ಬಿಜೆಪಿ ಮತ್ತು ಅದರ ಮಿತ್ರಪಕ್ಷಗಳ ಮುಖಂಡರ ಕುಚೇಷ್ಟೆಗಳಿಗೆ ಜನ ಮರುಳಾಗು ತ್ತಾರೆಯೇ? ಇದಕ್ಕೆ ಉತ್ತರ-ಖಂಡಿತಾ ಇಲ್ಲ! ಇತ್ತೀಚೆಗಷ್ಟೇ ನವೆಂಬರ್ 1998 ರಲ್ಲಿ ದಿಲ್ಲಿ, ರಾಜಸ್ತಾನ್, ಮಧ್ಯಪ್ರದೇಶ ವಿಧಾನಸಭಾ ಚುನಾವಣೆಗಳಲ್ಲಿ ಜನತೆ ತಮ್ಮ ಭಾವನೆಗಳನ್ನು ಪ್ರದರ್ಶಿಸಿದ್ದಾರೆ. ಇದಕ್ಕೆ ಮೊದಲು ಲೋಕಸಭಾ ಚುನಾವಣೆಗಳಲ್ಲೂ ರಾಜಸ್ತಾನ, ಮಹಾರಾಷ್ಟ್ರಗಳಲ್ಲಿ ಜನ ತಮ್ಮ ಭಾವನೆಗಳ ಸಂಕೇತ ನೀಡಿದ್ದರು. ಪೋಖ್ರಾನ್॥ ರ ಹಿನ್ನೆಲೆಯಲ್ಲಿ ಎಬ್ಬಿಸಿದ ಭಾವೋನ್ಮಾದಕ್ಕೆ ಬಲಿಯಾಗಲು ನಮ್ಮ ಜನ ನಿರಾಕರಿಸಿದರು. ನಮ್ಮ ಗಡಿಗಳಲ್ಲಿ ಉದ್ರೇಕಕಾರಿ ಸ್ಥಿತಿ ಇದ್ದರೆ ಅದರ ಪರಿಣಾಮ ಏನು, ಅಥವಾ ನೆರೆಕರೆಯ ಜನ ಧರ್ಮದ ಹೆಸರಲ್ಲಿ ಕಿತ್ತಾಡಿದರೆ ದೇಶದ ಗತಿಯೇನು ಎಂದು ಅವರು ಅರಿಯುತ್ತಾರೆ.

ನಮ್ಮ ದೇಶದ ಬಹುಪಾಲು ಜನ ನಿರಕ್ಷರಿಗಳಾದರೂ, ಬಡವರು- ಶೋಷಿತರಾಗಿದ್ದರೂ ತಮ್ಮ ಮಿತ್ರರು ಯಾರು, ಶತ್ರುಗಳು ಯಾರು ಎಂದು ಅರಿತುಕೊಳ್ಳುವಷ್ಟು ರಾಜಕೀಯ ಜಾಣ್ಮೆ ತಮ್ಮಲ್ಲಿದೆ ಎಂದು ಹಿಂದೆ ಬಹಳ ಸಾರಿ ತೋರಿಸಿಕೊಟ್ಟಿದ್ದಾರೆ. ಆದ್ದರಿಂದಲೇ ದೇಶ ಈಗ ಎದುರಿಸುತ್ತಿರುವ ಸಂಕಷ್ಟಗಳನ್ನು ಮೀರಿ ನಿಲ್ಲುವ ಸಾಮರ್ಥ್ಯ ನಮ್ಮ ಜನರಿಗಿದೆ. ಜನಗಳ ನಿಜವಾದ ಹಿತಾಸಕ್ತಿಗಳನ್ನು ಮೀರಿ ಭೂಮಾಲಕರು, ದೇಶಿ ಗುತ್ತೇದಾರಿಗಳು, ಸಾಮ್ರಾಜ್ಯಶಾಹಿ ಶಕ್ತಿಗಳು ಹಾಗೂ ಅವರ ಆರ್ಥಿಕ ಸಾಧನಗಳಾದ ಬಹುರಾಷ್ಟ್ರೀಯ ಕಂಪನಿಗಳಿಗೆ ಲಾಭ ಒದಗಿಸಿಕೊಡುವ ಶಕ್ತಿಗಳನ್ನು ಅವರು ಸೋಲಿಸುತ್ತಾರೆ ಎಂಬ ಬಗ್ಗೆ ಕಮ್ಯೂನಿಸ್ಟರಿಗೆ ಏನೇನೂ ಸಂದೇಹವಿಲ್ಲ. ಈ ಚುನಾವಣೆಗಳಲ್ಲಿ ಈ ಸತ್ಯ ಪ್ರಖರವಾಗಿ ಮೂಡಿ ಬರಲಿದೆ. ○

ಇದು 'ಇಂಡಿಯಾ ಟುಡೇ' ಯಲ್ಲಿ ಅಜಿತ್ ನೈನನ್‌ರವರ ವ್ಯಂಗ್ಯ. 1989 ರಲ್ಲಿ ಅಡ್ವಾಣಿಗೆ ರಾಮಮಂದಿರ ಆಸರೆಯಾಗಿದ್ದರೆ ವಾಜಪೇಯಿಯವರಿಗೆ ಪೋಖ್ರಾನ್, ಕಾರ್ಗಿಲ್. ಹೇಗಾದರೂ ಅಧಿಕಾರ ಗಿಟ್ಟಿಸಿದರಾಯಿತು.



ಬಿಜೆಪಿ ಲೆಕ್ಕಾಚಾರ ತಲೆಕೆಳಕಾಗಬಹುದು

ಸೀತಾರಾಂ ಯೆಚೂರಿ

ಸಂಖ್ಯಾಶಾಸ್ತ್ರದ ಕನಿಷ್ಟ ಶರತ್ತುಗಳನ್ನು ಪೂರೈಸದ ಅಭಿಪ್ರಾಯ ಸಂಗ್ರಹಗಳು, ಅಭಿಮತ ಸಮೀಕ್ಷೆಗಳನ್ನು ಏಕಾದರೂ ಮಾಡಲಾಗುತ್ತಿದೆ - ಕೇವಲ ಚುನಾವಣಾ ದುರುದ್ದೇಶಕ್ಕಾಗಿ ಎಂಬುದು ಸ್ಪಷ್ಟ. ಆದ್ದರಿಂದ ಈ ಎಲ್ಲಾ ಲೆಕ್ಕಾಚಾರಗಳು ತಲೆಕೆಳಗಾದರೆ ಆಶ್ಚರ್ಯವಿಲ್ಲ.

13ನೇ ಲೋಕಸಭಾ ಚುನಾವಣೆಗಳಲ್ಲಿ ಹಲವು ಅಚ್ಚರಿಗಳು ಕಾದಿವೆಯೆಂದೆನಿಸುತ್ತದೆ. ವಿಶೇಷವಾಗಿ ಬಿಜೆಪಿ ಮತ್ತು ಅದರ ಮಿತ್ರರು ಅಧಿಕಾರಕ್ಕೆ ಬರುತ್ತಾರೆ, ಇನ್ನೂ ಹೆಚ್ಚಿನ ಬಹುಮತದಿಂದ ಬರುತ್ತಾರೆ ಎಂದು ಇತ್ತೀಚಿನವರೆಗೂ ನಿರೀಕ್ಷಿಸಿದ್ದವರಿಗೆ ಈಗಲೂ ಆ ನಿರೀಕ್ಷೆ ಇಟ್ಟುಕೊಂಡಿರುವ ಎಲ್ಲರಿಗೂ ಅಚ್ಚರಿ ಕಾದಿದೆ. ಇದಕ್ಕೆ ಕಾರಣಗಳೇನು ಎಂದು ತಡಕಾಡಬೇಕಾಗಿಲ್ಲ. ಏಕೆಂದರೆ ಈ ನಿರೀಕ್ಷೆಗಳಿಗೆ ಆಧಾರ ಹಲವಾರು ಅಭಿಪ್ರಾಯ ಸಂಗ್ರಹಗಳು. ಇವನ್ನು ಮಾಡಿದವರು ಕಂಪನಿಗಳ ಒಡೆತನದಲ್ಲಿರುವ ಪತ್ರಿಕೆಗಳ, ಚಾನೆಲ್‌ಗಳ ಕಂಪ್ಯೂಟರ್ ಪಂಡಿತರುಗಳು. ಈ ಕಂಪನಿಗಳ ಬಿಜೆಪಿ-ಪರ ಒಲವು ಎಲ್ಲರಿಗೂ ಗೊತ್ತಿದ್ದದ್ದೆ. ಇಂತಹ ಅಭಿಪ್ರಾಯ ಸಂಗ್ರಹಗಳು ಸ್ವಲ್ಪ ಮಟ್ಟಿಗೆ ವಾಸ್ತವ ಸನ್ನಿವೇಶದ ಮೇಲೆ ಪ್ರಭಾವ ಬೀರಿದರೂ ಅವನ್ನು ಮೂಲಭೂತವಾಗಿ ಬದಲಿಸುವ ಸಾಮರ್ಥ್ಯ ಇವಕ್ಕಿಲ್ಲ. ಇದು ಅವರ ದುರದೃಷ್ಟವೆನ್ನಬೇಕು.

ಈ ಅಭಿಪ್ರಾಯ ಸಂಗ್ರಹಗಳನ್ನು ಹಲವು ಕಾರಣಗಳಿಂದಾಗಿ ಸ್ವತಂತ್ರ ಪರಿಣತರು ಒಪ್ಪಿಕೊಳ್ಳಲು ಹಿಂಜರಿಯುತ್ತಾರೆ. ಅವುಗಳಲ್ಲೊಂದು ಈ ಸಂಗ್ರಹಗಳಿಗೆ ಬಳಸುವ ಸ್ಯಾಂಪಲ್‌ನ ಪರಿಮಾಣ. ಸಾವಿರಾರು ಜನಗಳನ್ನು ಸಂದರ್ಶಿಸಿ ಈ ಅಭಿಪ್ರಾಯಗಳನ್ನು ಸಂಗ್ರಹಿಸಲಾಗಿದೆ ಎಂದೆಲ್ಲಾ ಹೇಳಲಾಗುತ್ತದೆ. ಆದರೆ 55 ಕೋಟಿ ಮತದಾರರಲ್ಲಿ 14000 ದ ಒಂದು ಸ್ಯಾಂಪಲ್ ಎಷ್ಟರ ಮಟ್ಟಿಗೆ ಪ್ರಾತಿನಿಧಿಕ ಸರ್ವೆಯಾಗಬಲ್ಲುದು? ಇದು ಒಟ್ಟು ಮತದಾರರ 0.0025 ಶೇಕಡಾ ಮಾತ್ರವಾಗುತ್ತದೆ.

ಇನ್ನೊಂದು ಅಂಶ - ಈ ಸರ್ವೆಗಳಲ್ಲಿ ತಪ್ಪಿನ ಪ್ರಮಾಣ ಎಷ್ಟಿರಬಹುದು ಎಂದು ತಿಳಿಸಲಾಗುತ್ತದೆ. ಯಾವುದೇ ಸ್ಯಾಂಪಲ್ ಸರ್ವೆಯಲ್ಲಿ ಈ ತಪ್ಪಿನ ಪ್ರಮಾಣ ಸ್ಯಾಂಪಲ್ ಪ್ರಮಾಣಕ್ಕೆ ಕಮ್ಮಿಯಿದ್ದರೆ ಮಾತ್ರ ಆ ಸ್ಯಾಂಪಲ್‌ನ ಸರ್ವೆಗೆ ಏನಾದರೂ ಅರ್ಥವಿರುತ್ತದೆ ಎಂದು ಸಂಖ್ಯಾ ಶಾಸ್ತ್ರಜ್ಞರು ಹೇಳುತ್ತಾರೆ. ಈ ಎಲ್ಲಾ ಸರ್ವೆಗಳಲ್ಲಿ ಹೇಳಿರುವ ತಪ್ಪಿನ ಪ್ರಮಾಣ 3 ಶೇಕಡಾ. ಅಂದರೆ 1.8 ಕೋಟಿ ಮತದಾರರ ಅಭಿಪ್ರಾಯ ಆಕಡೆ ಅಥವಾ ಈಕಡೆ ಆಗಬಹುದು! ಆದರೆ ಇದನ್ನು ತಿಳಿಯಲು ಸಂದರ್ಶಿಸಿದ ಮತದಾರರ ಸಂಖ್ಯೆ ಇದುವರೆಗೆ ಗರಿಷ್ಟವೆಂದರೆ 14000 ಮಾತ್ರ. ಅಂದರೆ ಸಂಖ್ಯಾಶಾಸ್ತ್ರಜ್ಞರ ಕನಿಷ್ಟ ಶರತ್ತುಗಳನ್ನು ಈಡೇರಿಸದಿರುವ ಈ ಅಭಿಪ್ರಾಯ ಸಂಗ್ರಹಗಳಿಗೆ ಏನು ಅರ್ಥವಿದೆ? ಕೇವಲ ಚುನಾವಣಾ ಉದ್ದೇಶದಿಂದ ಈ ಎಲ್ಲಾ ಕನಿಷ್ಟ ಅಗತ್ಯಗಳನ್ನು ಬದಿಗೊತ್ತಿ ಇವನ್ನು ಸಂಗ್ರಹಿಸಲಾಗುತ್ತಿದೆ ಎಂಬುದು ಸ್ಪಷ್ಟ.

ಇನ್ನು ಸಂದರ್ಶನಕ್ಕೆ ಅಥವಾ ಅಭಿಪ್ರಾಯ ಸಂಗ್ರಹಕ್ಕೆಂದು ಆರಿಸುವ ವ್ಯಕ್ತಿಗಳು ಬಹುಪಾಲು ನಗರ ಪ್ರದೇಶಗಳವರು, ಅಲ್ಲದೆ ಇವುಗಳಲ್ಲಿ ಕೇಳುವ ಪ್ರಶ್ನೆಗಳೂ ಜನಗಳ ನಿಜವಾದ ಅಭಿಪ್ರಾಯ ಹೊರಬರದಂತೆ ರೂಪಿಸಿದ ಪ್ರಶ್ನೆಗಳು. ಇದರಿಂದಾಗಿಯೂ ಇಂತಹ ಸರ್ವೆಗಳು ಅವೈಜ್ಞಾನಿಕವಾಗಿ ಬಿಡುತ್ತವೆ. ಉದಾಹರಣೆಗೆ, ಮುಂಬೈಯಲ್ಲಿ ಎಬಿವಿಪಿ ವಿದ್ಯಾರ್ಥಿಗಳಿಗೆ ಕೊಟ್ಟ ಪ್ರಶ್ನಾವಳಿಯ ಒಂದು ಪ್ರಶ್ನೆ ಹೀಗಿದೆ - ಪ್ರಧಾನ ಮಂತ್ರಿಯ ಸ್ಥಾನವನ್ನು ಒಬ್ಬ ವಿದೇಶಿಯರು ಪಡೆಯಬೇಕೋ ಅಥವಾ ಭಾರತೀಯ ಸಂಸ್ಕೃತಿ ಮತ್ತು ಪರಂಪರೆಯನ್ನು ಪ್ರೀತಿಸುವವರು ಪಡೆಯಬೇಕೋ. ಇಲ್ಲಿ ಪ್ರಶ್ನಕರ್ತನ ಪಕ್ಷಪಾತ ಎದ್ದು ಕಾಣುತ್ತದೆ. ಪರಿಣತರೆಂದೆನಿಸಿಕೊಂಡವರು ನಡೆಸುವ ಸರ್ವೆಗಳಲ್ಲಿ ಈ ರೀತಿಯ ನೇರ ಪಕ್ಷಪಾತ ಎದ್ದು ಕಾಣಲಿಕ್ಕಿಲ್ಲ, ಆದರೆ ಪರೋಕ್ಷವಾಗಿ ಅದು ಇದ್ದೇ ಇದೆ.

ಆದ್ದರಿಂದಲೇ ಮೊದಲ ಹಂತದ ಚುನಾವಣೆ ಮುಗಿಯುವಷ್ಟರಲ್ಲೇ ಬಿಜೆಪಿ ಬಾಸ್‌ಗಳು ಹತಾಶರಾದಂತೆ ಕಾಣುತ್ತಾರೆ. ಇದಕ್ಕೆ ಆಶ್ಚರ್ಯ ಪಡಬೇಕಾಗಿಲ್ಲ. ಅವರ ಲೆಕ್ಕಾಚಾರಗಳೆಲ್ಲಾ ತಲೆಕೆಳಕಾಗುವಂತೆ ಕಾಣುತ್ತದೆ. ಉದಾಹರಣೆಗೆ ಕಾರ್ಗಿಲ್ ನಂತರ ತಮ್ಮ ಪ್ರಚಾರಕ್ಕೆ ಮರುಳಾಗಿ ತಮಗೆ ಮತ ನೀಡಬಹುದು ಎಂದು ಬಿಜೆಪಿ ನಿರೀಕ್ಷಿಸಿದ್ದ ಮಧ್ಯಮ ಮತ್ತು ಮೇಲ್ಮಧ್ಯಮ ವರ್ಗದ ಮತದಾರರು ದಿಲ್ಲಿಯಲ್ಲಿ ಮತದಾನವನ್ನೇ ಮಾಡಲಿಲ್ಲ. ಆದರೆ ಅಭಿಪ್ರಾಯ ಸಂಗ್ರಹಗಳಲ್ಲಿ ಖಂಡಿತಾ ಇವರ ಮತಗಳು ಬಂದಿರುತ್ತವೆ!

ಅದೇ ರೀತಿ ಮಹಾರಾಷ್ಟ್ರದಲ್ಲಿ ಎನ್.ಸಿ.ಪಿ.ಯಿಂದಾಗಿ ಬಿಜೆಪಿ-ಶಿವಸೇನೆಗೆ ವಿರುದ್ಧವಾದ ಮತಗಳು ಹಂಚಿಹೋಗಿ ಈ ಕೋಮುವಾದಿ ಕೂಟಕ್ಕೆ ಭಾರೀ ಗೆಲುವು ದೊರೆಯುತ್ತದೆ ಎಂಬ ನಿರೀಕ್ಷೆಯೂ ಈಡೇರುವುದಿಲ್ಲ. ಆಗಲೇ ಅವರು ಶರದ್ ಪವಾರರನ್ನು ಬಯ್ಯಲಾರಂಭಿಸಿದ್ದಾರೆ. ಬಹುಶಃ ಬೇಗನೇ ವಿಧಾನಸಭಾ ಚುನಾವಣೆಗಳನ್ನು ನಡೆಸುವ ತಮ್ಮ ನಿರ್ಧಾರದ ಬಗ್ಗೆ ಅವರು ಪಶ್ಚಾತ್ತಾಪ ಪಡುವ ಸಂದರ್ಭ ಬರುತ್ತದೆ.

ಆಂಧ್ರಪ್ರದೇಶದಲ್ಲೂ ಮಾಧ್ಯಮ ಪಂಡಿತರ ಭವಿಷ್ಯವಾಣಿಗಳಂತೆ ಟಿಡಿಪಿ-ಬಿಜೆಪಿಗೆ ಜಯ ಸುಲಭವೇನೂ ಅಲ್ಲ, ಅಲ್ಲಿ ತೀವ್ರ ಹಣಾಹಣಿ ನಡೆಯುತ್ತದೆ. ಇದೇ ರೀತಿ ಕರ್ನಾಟಕ, ಒರಿಸ್ಸಾ, ಪಂಜಾಬ್, ಹರ್ಯಾಣ, ರಾಜಸ್ತಾನ ಇತ್ಯಾದಿಗಳ ಬಗ್ಗೆಯೂ ಹೇಳಬಹುದು.

ಇಲ್ಲೆಲ್ಲಾ ಬಿಜೆಪಿ ಕೂಟ 1998 ಕ್ಕಿಂತ ಕಮ್ಮಿ ಸ್ಥಾನಗಳನ್ನು ಪಡೆಯುವ ಸಾಧ್ಯತೆಗಳಿವೆ. ಆದ್ದರಿಂದ ನಿಜವಾದ ಪರಿಣಾಮ ಕಾಣಲಾರಂಭಿಸಿದೆ. ಆದ್ದರಿಂದಲೇ ಬಿಜೆಪಿ ಮುಖಂಡರು ಆತಂಕಿತರಾಗಿದ್ದಾರೆ.



ಕೃಪೆ: 'ಟೈಮ್ಸ್ ಆಫ್ ಇಂಡಿಯಾ'ದಲ್ಲಿ ಆರ್.ಕೆ.ಲಕ್ಷ್ಮಣ್

ಜನರ ಸಂಕಷ್ಟ ಅರಿಯದ ಬಿಜೆಪಿ-ಕಾಂಗೆಸ್ ಅಭ್ಯರ್ಥಿಗಳು

ಚುನಾವಣೆಯನ್ನು ಹೋರಾಟದ ಭಾಗವಾಗಿಯೇ ಗುರುತಿಸಿಕೊಳ್ಳುವ ಪಕ್ಷ ದುಡಿಯುವ ಜನತೆಯ ಪರವಾಗಿ ಪ್ರಥಮ ಬಾರಿಗೆ ಅಭ್ಯರ್ಥಿಯನ್ನು ಕಣಕ್ಕಿಳಿಸಿ ವಿಷಯಾಧಾರಿತ ಬೆಂಬಲ-ಹೋರಾಟಕ್ಕೆ ಬೆಂಬಲ ಕೋರಿದೆ. ದೊಡ್ಡಬಳ್ಳಾಪುರ ಕ್ಷೇತ್ರದಲ್ಲಿ ಚುನಾವಣಾ ಪ್ರಚಾರದ ಬಗ್ಗೆ ಒಂದು ವರದಿ

ಎನ್.ಪ್ರಭಾ

ಚಿಕ್ಕಬಳ್ಳಾಪುರ ಲೋಕಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ದೊಡ್ಡಬಳ್ಳಾಪುರ ವಿಧಾನಸಭಾ ಕ್ಷೇತ್ರಕ್ಕೆ ಸಿಪಿಐ(ಎಂ) ಪ್ರಥಮ ಬಾರಿ ತನ್ನ ಅಭ್ಯರ್ಥಿಯನ್ನು ಕಣಕ್ಕಿಳಿಸಿದೆ. ಕಾಂಗ್ರೆಸ್, ಬಿಜೆಪಿ, ಸಿಪಿಎಂ ನಡುವಣ ತ್ರಿಕೋನ ಸ್ಪರ್ಧೆ ಏರ್ಪಟ್ಟಿದ್ದು ಕ್ಷೇತ್ರದಲ್ಲಿ ಸಿಪಿಎಂ ಪ್ರಚಾರ ವಿಶಿಷ್ಟವಾಗಿತ್ತು.

ತಾಲ್ಲೂಕಿನ ಕೇಂದ್ರ ದೊಡ್ಡಬಳ್ಳಾಪುರ ರೇಷ್ಮೆ ವಹಿವಾಟಿಗೆಲ್ಲ ಹೆಸರುವಾಸಿಯಾಗಿದ್ದು ರೇಷ್ಮೆ ನಗರವೆಂದೇ ಪ್ರಸಿದ್ಧಿ ಪಡೆದಿದೆ. ಇನ್ನುಳಿದಂತೆ ಗ್ರಾಮಾಂತರದಲ್ಲಿ ಕೃಷಿಗೆ ಪ್ರಾಧಾನ್ಯ. ರಾಗಿ, ಜೋಳ, ಕಡಲೆಕಾಯಿ ತರಕಾರಿ ಮುಂತಾದವು ಇಲ್ಲಿನ ಪ್ರಮುಖ ಬೆಳೆಗಳು.

ತಾಲ್ಲೂಕು ಕೇಂದ್ರದ ಸುತ್ತ-ಮುತ್ತಲಿನ ಕೃಷಿ ಜಮೀನಿನಲ್ಲಿ ವಿದೇಶಿ ಬಹುರಾಷ್ಟ್ರೀಯ ಕಂಪನಿಗಳು ನೆಲೆಯೂರಿವೆ. 'ವಿಶ್ವಸುಂದರಿ'ಯರು ತಂಗಿದ್ದ 'ಗ್ರೀನ್ ವ್ಯಾಲಿ' ಯಂಥ ರೆಸಾರ್ಟ್‌ಗಳು, ಹೂ ಬೆಳೆದು ವಿದೇಶಕ್ಕೆ ರವಾನಿಸಿ 'ಸೂಪರ್ ಲಾಭ' ಮಾಡುವ 'ಫ್ಲೋರಿಕಲ್ಚರ್' ಉದ್ಯಮ ಈಗಾಗಲೇ ಬೀಡು ಬಿಟ್ಟಾಗಿದೆ. ರಾಗಿ, ಕಾಳು-ಕಡ್ಡಿ ಆಹಾರ ಧಾನ್ಯಗಳನ್ನು ಬೆಳೆಯುತ್ತಿದ್ದ ತಾಲೂಕಿನ ಸಾವಿರಾರು ಎಕರೆ ಜಮೀನು ವಾಣಿಜ್ಯ ಬೆಳೆಗಳಿಗೆ ಹಾಗೂ ದೊಡ್ಡ ದೊಡ್ಡ ಹೋಟೆಲ್‌ಗಳಿಗೆ ಬಳಕೆಯಾಗುತ್ತಿದೆ.

ಹಳ್ಳಿಯ ಯುವಕನೊಬ್ಬ ಹೇಳುತ್ತಾನೆ "ನೆನ್ನೆ ಮೊನ್ನೆಯಷ್ಟೇ ವ್ಯಾಪಾರೀ ಕಸುಬನ್ನು ಪ್ರಾರಂಭಿಸಿರುವ ಜನ ಕಾರು-ಬಂಗಲೆ ಲಕ್ಷಾಂತರ ರೂಪಾಯಿಗಳ ಆಸ್ತಿ ಮಾಡಿದ್ದಾರೆ. ನಮ್ಮೆದುರು ರಾಜರಂತೆ ಓಡಾಡ್ತರೆ, ಬಂಡವಾಳ ಹಾಕಿ ಕಷ್ಟ ಪಟ್ಟು ಟೊಮೊಟೊ ತರಕಾರಿ ಬೆಳೆದ ನಾವು ಹರಕಲು ಚೆಡ್ಡಿಯಲ್ಲಿ ಓಡಾಡಬೇಕಿದೆ. ಯಾರೂ ಬಂದರೂ ರೈತರನ್ನು ಉದ್ದಾರ ಮಾಡಲ್ಲ. ಕಷ್ಟ ಪಡುವವರಿಗೆ ಬೆಲೆ ಇಲ್ಲ, ನಮಗೆ ಓಟಾಕಾಕೆ ಇಷ್ಟವಿಲ್ಲ" ಎಂದು ಹತಾಶೆಯಿಂದ.

ಅಂತರ್ಜಲದ ಅಭಾವವಿರುವ ತಾಲೂಕಿನಲ್ಲಿ ನೀರನ್ನು ಕಾಪಾಡಿಕೊಳ್ಳುವ ಯಾವುದೇ ಯೋಜನೆಯನ್ನು ಈವರೆಗೆ ಗೆದ್ದ ಯಾವ ರಾಜಕಾರಣಿಯೂ ಯೋಚಿಸಿಲ್ಲ.

ತೀರಾ ಇತ್ತೀಚೆಗೆ ರೈತರು ಬಳಸುವ ಪಂಪ್‌ಸೆಟ್‌ಗಳಿಗೆ ಕೆಪಾಸಿಟರಗಳನ್ನು ಅಳವಡಿಸಿಲ್ಲವೆಂದು ಆರೋಪಿಸಿ ಸಾವಿರಾರು ರೂಪಾಯಿಗಳ ದಂಡವನ್ನು ಸಹ ಹಾಕಲಾಗಿತ್ತು. ಇದರಿಂದ ತತ್ತರಿಸಿದ ರೈತರ ಕಷ್ಟವನ್ನು ಕೇಳಲು ಯಾವ ಕಾಂಗ್ರೆಸ್ ಬಿಜೆಪಿ ಮುಖಂಡರೂ ಮುಂದಾಗಲಿಲ್ಲ. ಬದಲಿಗೆ ತೆರೆಮರೆಯ ನಾಟಕವಾಡಿದರು. ರೈತರನ್ನು ಸಂಘಟಿಸಿ ಹೋರಾಟ ಮಾಡಿ ದಂಡ ವಾಪಸ್ಸಾಗುವಂತೆ ಮಾಡುವಲ್ಲಿ ಸಫಲವಾಗಿದ್ದು ಕರ್ನಾಟಕ ಪ್ರಾಂತ ರೈತ ಸಂಘ. ಇದರ ನೇತೃತ್ವ ವಹಿಸಿದ್ದವರು ಕ್ಷೇತ್ರದ ಸಿಪಿಐ(ಎಂ) ಅಭ್ಯರ್ಥಿಯಾಗಿ ಸ್ಪರ್ಧಿಸಿರುವ ಚಂದ್ರ ತೇಜಸ್ವಿ.

ಯಾವ ಆಧಾರದಲ್ಲಿ ಮತಯಾಚನೆ?

ಯಾವ ನಾಗರಿಕ ಸಮಸ್ಯೆಗಳ ಬಗ್ಗೆಯೂ 50 ವರ್ಷ ಆಳಿದ ಅರಸುಗಳು ಚಕಾರವೆತ್ತುವುದಿಲ್ಲ. ಚುನಾವಣೆ ಬಂದಿದೆ ಎಲ್ಲ ರಾಜಕೀಯ ಪಕ್ಷಗಳೂ ಕಾದಲ್ಲಿವೆ. ಮತ ಕೇಳುವುದು ಯಾವ ಆಧಾರದಲ್ಲಿ ಎಂದಿರಾ?

ಅತ್ಯಂತ ದೀರ್ಘ ಕಾಲ ಗಾದಿಯಲ್ಲಿದ್ದ ಪಕ್ಷ. ರಾಜಕೀಯ ಅನುಭವವಿರುವ ಪಕ್ಷ. ಸ್ಥಿರ ಸರ್ಕಾರಗಳನ್ನು ನೀಡಿದ ಪಕ್ಷ. ಸ್ವಾತಂತ್ರ್ಯ ಹೋರಾಟದ ಇತಿಹಾಸವಿರುವ ಪಕ್ಷ ಈ ದೇಶದ ಅಧಿಕಾರ ಹಿಡಿಯಲು ಲಗತ್ತಾಗಿರುವ ಏಕೈಕ ಪಕ್ಷ ನೆಹರೂ, ಇಂದಿರಾ, ರಾಜೀವ್, ಸೋನಿಯಾ ಪಕ್ಷ ಕಾಂಗ್ರೆಸ್ ಪಕ್ಷಕ್ಕೆ ಮತ ನೀಡಿ-- ಇದು ಕಾಂಗ್ರೆಸ್ ಪಕ್ಷ ಮತ ಕೇಳುವ ವೈಖರಿ ಯಾದರೆ, ಅಪ್ಪಟ ದೇಶ ಪ್ರೇಮಿಗಳು ಮತ ಯಾಚಿಸುವ ರೀತಿ ಹೀಗೆ--- ಸಮರ್ಥ ಪ್ರಧಾನಿ, ಹಸನ್ಮುಖೀ ವಾಜಪೇಯಿ ಇವರಿಗೆ ಜನಾದೇಶ ನೀಡಿ, ಭವ್ಯ ಭಾರತದ ನಿರ್ಮಾಣಕ್ಕಾಗಿ, ಬಿಜೆಪಿಗೆ ಮತನೀಡಿ. ಅಪ್ಪಟ ಸ್ವದೇಶಿ ವಾಜಪೇಯಿಗೆ ಮತನೀಡಿ ವಿದೇಶೀ ಮಹಿಳೆಗೆ ದೇಶ ಆಳುವ ಅಧಿಕಾರ ನೀಡಬೇಡಿ, ಶುದ್ಧ ಪಾರದರ್ಶಕ ದಕ್ಷ ಆಡಳಿತಕ್ಕೆ, ಸ್ವಾಭಿಮಾನಿ ಭಾರತಕ್ಕೆ ಜನ್ಮ ತಾಳಿರುವ ನಮಗೇ ನಿಮ್ಮ ಓಟು. ಶಿಸ್ತು ಬದ್ದ- ನೀತಿ ಬದ್ದ ಪಕ್ಷ ನಮ್ಮದು ಮರೆಯ ಬೇಡಿ (ನೀವು ಮೂರ್ಖ ಹೋಗಬೇಡಿ) ಇದು ಬಿಜೆಪಿ style(ಈ ಮೇಲಿನವು Poster ಗಳಲ್ಲಿ, ಭಾಷಣಗಳ ಶೈಲಿ ಬೇರೆಯೇ).

ಸ್ವಾಮಿ, 50 ವರ್ಷ ಆಳಿದ್ದೀರಿ ನಿಜ ನಮಗೂ ಗೊತ್ತಿದೆ. 50 ವರ್ಷ ಆಳಿದರೂ ಕ್ಷೇತ್ರದ ತುಂಬೆಲ್ಲಾ ಇಷ್ಟೊಂದು ಸಮಸ್ಯೆಗಳಿವೆ ನೀವಷ್ಟೇ ದೊಡ್ಡೋರಾದರೆ ಸಾಕೆ. 50 ವರ್ಷದ ಸಾಧನೆ ಏನು?

ಹೊಸ ಆರ್ಥಿಕ ನೀತಿ ಜಾರಿ ಮಾಡಿ-- ರೈತರ ಜನಸಾಮಾನ್ಯರ ಬೆನ್ನು ಮೂಳೆ ಮುರಿದಿದ್ದೇ? ಉದಾರೀಕರಣ ತಂದು ರೈತರ ಬಾಯಿಗೆ ವಿಷ ಹಾಕಿದ್ದೆ? ಲಕ್ಷಾಂತರ ಕಾರ್ಮಿಕರನ್ನು ಬೀದಿಗೆ ತಳ್ಳಿದ್ದೆ? ಕೋಮುವಾದಿ ಶಕ್ತಿಗಳು ಬೆಳೆಯಲು ಅವಕಾಶ ನೀಡಿದ್ದೆ? ಇವುಗಳನ್ನೆಲ್ಲಾ ಮರೆ ಮಾಚಲು ನಾಲ್ಕು ಜನ ಮುಖಂಡರ ಚಿತ್ರ ತೋರಿಸಿ ಮತ ಕೇಳುತ್ತೀರಲ್ಲಾ..... ದೇಶವನ್ನು ನೀವೆ ಆಳಬೇಕೆಂದು ಪಟ್ಟು ಹಿಡಿದರೆ ಹೇಗೆ, ಸ್ಥಿರ ಸರ್ಕಾರ ನೀಡಿದರೆ ಸಾಕೆ? ಸ್ಥಿರತೆ ಜನಕ್ಕೆ ಬೇಡವೆ? ಎಂದರೆ ಯಾವ ಕಾಂಗ್ರೆಸ್ಸಿಗರಲ್ಲೂ ಉತ್ತರವಿಲ್ಲ. ಆದರೂ ಕಾಂಗ್ರೆಸ್ಸಿಗೇ ಮತ ಹಾಕಬೇಕಂತೆ. ಪ್ರಥಮ ಬಾರಿಗೆ ಸ್ಪರ್ದೆ ಮಾಡಿದ್ದಾಗ ಟೋಮೋಟೋ-ಬದನೆಕಾಯಿ ಮಾರಿದರೆ ನನ್ನ ಜೀವನ ಎಂದು ಹೇಳುತ್ತಿದ್ದ ಲೋಕಸಭೆಯ ಕಾಂಗ್ರೆಸ್ ಅಭ್ಯರ್ಥಿ ಈಗ ಹೇಳುತ್ತಾರೆ ದೇವರು ಕೊಟ್ಟಿದ್ದಾನೆ ಎಲ್ಲಾ ಅವನ ಕೃಪೆ. ಎಂಥಾ ಭ್ರಷ್ಟರಪ್ಪಾ ಇವರು ಎಂದಿರಾ ಅಚ್ಚರಿ ಪಡಬೇಡಿ. 15 ವರ್ಷದ ಹಿಂದೆ ಬದನೆಕಾಯಿ ಮಾರುತ್ತಿದ್ದ ಅವರ ಆಸ್ತಿ ಈಗ ಜನ ಹೇಳುವಂತೆ ಕೇವಲ ಐವತ್ತು ಕೋಟಿ ಅಷ್ಟೆ?

ಈ ವಿಚಾರಗಳ ಕಡೆ ಜನತೆಯ ಗಮನ ಹರಿಸಿದ್ದು ಯಾರು ಗೊತ್ತೆ? ಸಿಪಿಎಂ ಮಾತ್ರ.

'ಅಪ್ಪಟ ದೇಶ ಪ್ರೇಮಿ'ಗಳು ಏನಂತಾರೆ?

ಕ್ಷೇತ್ರದ ತುಂಬಾ ಅಬ್ಬರ, ಆರ್ಭಟ ದೇಶ ಪ್ರೇಮ- ಸ್ವದೇಶಿಯ ಕಹಳೆ ಊದಿದ್ದೂ ಊದಿದ್ದೆ. ಸ್ವಾಭಿಮಾನಿ ಭಾರತದ ನಿರ್ಮಾತೃಗಳಂತೆ, ಯಾರ ಕಿವಿಗೆ ಹೂವು? ಹದಿಮೂರೇ ತಿಂಗಳಲ್ಲೇ ಭಯಂಕರ ಸಾಧನೆಗಳಂತೆ - ಯಾವುವು?

ಕಾರ್ಗಿಲ್‌ನಲ್ಲಿ ನಾನ್ನೂರು ಸೈನಿಕರನ್ನ ಬಲಿಕೊಟ್ಟಿದ್ದೆ? ಸಾವಿರ ಕೋಟಿ ರೂಪಾಯಿಗಳ ಪರಮಾಣು ಬಾಂಬು ಸಿಡಿಸಿದ್ದೇ? ಕ್ರಿಶ್ಚಿಯನ್ ಪಾದ್ರಿಯನ್ನು ಮಕ್ಕಳ ಸಹಿತ ಸುಟ್ಟಿದ್ದೆ? ಸನ್ಯಾಸಿನಿಯರ ಮೇಲೆ ಅತ್ಯಾಚಾರವೆಸಗಿ ಬಹಿರಂಗ ಸಮರ್ಥನೆ ಮಾಡಿದ್ದೆ? 50 ಸಾವಿರ ಕೋಟಿ ರೂಪಾಯಿಗಳ ಟೆಲಿಕಾಂ ಅವ್ಯವಹಾರ ನಡೆಸಿದ್ದೆ? ಕಾಂಗ್ರೆಸ್ ಅನುಸರಿಸಿದ ಆರ್ಥಿಕ ನೀತಿಗಳನ್ನು ಮತ್ತೂ speed ಮಾಡಿದ್ದೆ? ಕರ್ನಾಟಕದ ಸುರತ್ಕಲ್, ಭಟ್ಕಳ ಮುಂತಾದ ಕಡೆ ಕೋಮು ಗಲಭೆ ಹಬ್ಬಿಸಿ ರಕ್ತದ ಕೋಡಿ ಹರಿಸಿದ್ದೆ- ಗಬ್ಬುನಾಥ ಹೊಡೆಸಿದ್ದೆ? ಬಾಬಾಬುಡನ್ ಗಿರಿಗೆ ಕೋಮು ಬೆಂಕಿ ಹಚ್ಚಿದ್ದೇ? ಈರುಳ್ಳಿ ಬೆಲೆ ಕೆ.ಜಿ. 60 ರೂ ಮಾಡಿದ್ದೆ? ಉಪ್ಪಿಗೆ ಹಾಹಾಕಾರ ಪಡಿಸಿದ್ದೆ?ಯೂರಿಯ ಗೊಬ್ಬರದ ಬೆಲೆ ಏರಿಸಿ.... ರೈತರನ್ನು ದಿವಾಳಿಯೆಬ್ಬಿಸಿದ್ದೆ? ಒಂದಾ ಎರಡಾ..... ಅಬ್ಬಬ್ಬಾ ಎಷ್ಟೊಂದು ಸಾಧನೆಗಳು ಕಾಂಗ್ರೆಸ್ ಪಕ್ಷ ಈ ಸಾಧನೆಗಳಿಗಾಗಿ 50 ವರ್ಷ ತೆಗೆದುಕೊಂಡರೆ ಇವರಿಗೆ ಹದಿಮೂರೇ ತಿಂಗಳು ಸಾಕಾಯಿತು. ಓಟು ಕೇಳದೆ ಬಿಡುತ್ತಾರೆಯೇ ಹಿಂದೂ ರಾಷ್ಟ್ರದ ರೂವಾರಿಗಳು.

ಹುತ್ತ ಬಿಟ್ಟು ಮನ ಬಂದಂತೆ ಹರಿದಾಡುತ್ತಿರುವ, ಸಿಕ್ಕವರನ್ನೆಲ್ಲಾ ಕಚ್ಚುತ್ತಿರುವ ವಿಷ ಜಂತುಗಳ ಬಗ್ಗೆ ಎಚ್ಚರಿಸಿದವರು ಯಾರು ತಿಳಿಯಿತೆ? ಮುಂಬರುವ ಅಪಾಯಗಳ ಕಡೆ ಜಾಗೃತಿ ಮೂಡಿಸಿದವರು ಯಾರು ಗೊತ್ತೆ?

ವಸ್ತುನಿಷ್ಠ ಪ್ರಚಾರ

ನೀತಿ, ತತ್ವ, ಬದ್ಧತೆಗಳ ಆಧಾರದಲ್ಲಿ ಪ್ರಾಮಾಣಿಕವಾಗಿ ದುಡಿಯುತ್ತಿರುವ ಏಕೈಕ ರಾಷ್ಟ್ರೀಯ ರಾಜಕೀಯ ಪಕ್ಷ ಸಿಪಿಐ(ಎಂ), ವೈಯಕ್ತಿಕವಾಗಿ ಎಲ್ಲೂ ಎಂದೂ ಯಾರನ್ನೂ ಟೀಕಿಸದೇ ವಸ್ತು ನಿಷ್ಠ ಟೀಕೆ ಟಿಪ್ಪಣಿ ಬದ್ದತೆಯನ್ನು ಪ್ರದರ್ಶಿಸಿ ಪ್ರಶಂಸೆಗೊಳಗಾದ ಒಂದೇ ಒಂದು ಪಕ್ಷ.

ವಿವಿಧ ರಾಜಕೀಯ ಪಕ್ಷಗಳ ನೀತಿಗಳ ಕುರಿತಂತೆ, ಸಾಧನೆಗಳ ಕುರಿತಂತೆ ಧೋರಣೆಗಳ ಕುರಿತಂತೆ ವಸ್ತುನಿಷ್ಠ ವಿಷಯಗಳ ಕಡೆಗೆ ಕೇಂದ್ರೀಕರಿಸಿ ಚುನಾವಣಾ ಪ್ರಚಾರ ನಡೆಸಿದ್ದು ಸಿಪಿಐ(ಎಂ) ಮಾತ್ರ. ಇನ್ನುಳಿದವರೆಲ್ಲಾ ಅಭ್ಯರ್ಥಿಗಳೂ ಸೇರಿದಂತೆ ವೈಯಕ್ತಿಕ ದ್ವೇಷ- ಅಸೂಯೆ, ಮತ್ಸರ, ಜಿದ್ದಾ-ಜಿದ್ದಿ ಪೈಪೋಟಿಯನ್ನಷ್ಟೇ ಪ್ರದರ್ಶಿಸಿದ್ದು, ನನಗೆ ಕಾಂಗ್ರೆಸ್ ಟಿಕೆಟ್ ನೀಡದೆ ಅನ್ಯಾಯ ಮಾಡಿದೆ, ಅನ್ಯಾಯಕ್ಕೊಳಾಗಾದ ನನಗೆ ಮತನೀಡಿ, ನನಗೆ ಬಿಜೆಪಿ ಮೋಸ ಮಾಡಿದೆ, ಆ ಪಕ್ಷದಿಂದ ನೊಂದಿದ್ದೇನೆ, ಈ ಪಕ್ಷದಿಂದ ನೊಂದಿದ್ದೇನೆ ಹಾಗೂ ಪಕ್ಷದಿಂದ ಪಕ್ಷಕ್ಕೆ ನೆಗೆದಿದ್ದೇನೆ, ನೀವು ಅನ್ಯಾಯ ಮಾಡಬೇಡಿ-ಇವೇ ಅವರ ಬೇಡಿಕೆಗಳು. ಜನರಿಗಾದ ಅನ್ಯಾಯದ ಬಗ್ಗೆ ಅಪ್ಪಿ ತಪ್ಪಿಯೂ ಯಾರೂ ಸೊಲ್ಲೆತ್ತಿಲ್ಲ. ಬಿಜೆಪಿ ಅಭ್ಯರ್ಥಿ ನಾಮಪತ್ರ ಸಲ್ಲಿಸುವ ಹಿಂದಿನ ದಿನದ ಮಧ್ಯರಾತ್ರಿಯ ತನಕ ಕಾಂಗ್ರೆಸ್ ಟಿಕೆಟ್‌ಗಾಗಿ ಕಾದಿದ್ದವರು, ಇದೇ ಅವರಿಗಾದ ಅನ್ಯಾಯ. ಈ ಹಿನ್ನೆಲೆಯಲ್ಲಿ ನಮ್ಮ ಪಕ್ಷದ ಪ್ರಚಾರ ಎಲ್ಲ ವರ್ಗದ ಜನರನ್ನು ಆಕರ್ಷಿಸಿದೆ. ಪ್ರಶಂಸೆ ಗಳಿಸಿದೆ.

ಹಳ್ಳಿಗಳ ರೈತರು ಕಾಲೇಜು ವಿದ್ಯಾರ್ಥಿಗಳು, ನಿರುದ್ಯೋಗಿ ಯುವಕರು, ಉದ್ಯೋಗಸ್ಥರು ವಿಚಾರಗಳನ್ನು ಕೇಳಿದ್ದಾರೆ, ಮೆಚ್ಚಿದ್ದಾರೆ. ಒಂದು ಸಣ್ಣ ಅಪಸ್ವರ ಎಲ್ಲೂ ಕೇಳಲೇ ಇಲ್ಲ. ನಮ್ಮನ್ನ ದೂಷಿಸಿದ ನಿಷ್ಠುರ ಮಾಡಿದ ಒಂದೇ ಒಂದು ಉದಾಹರಣೆ ಇಡೀ ಪ್ರಚಾರದ ಸಮಯದಲ್ಲಿ ಕಾಣಲೇ ಇಲ್ಲ.

ಯಾವುದೇ ಹಳ್ಳಿಗೆ ಪ್ರವೇಶ ಮಾಡಿದರೂ ಹಿರಿಯ ಸ್ವಾತಂತ್ರ್ಯ ಹೋರಾಟಗಾರರಾದ ಕಾಂ. ಹೆಚ್ ಮುಗುವಾಳಪ್ಪನವರ ಅಭಿಮಾನಿಗಳು ಅವರನ್ನು ನೋಡಲೆಂದೇ ಕಾರಿನ ಬಳಿ ಬರುವ ಹಿರಿಯರು, ಅವರ ಬಗ್ಗೆ ಆ ಮೂಲಕ ಪಕ್ಷದ ಬಗ್ಗೆ ಎಷ್ಟೊಂದು ಹೆಮ್ಮೆ ಅವರಿಗೆ. ಆ ಕಾಲದ ಹೋರಾಟಗಳನ್ನು ಸ್ಮರಿಸಿದ ಹಿರಿಯರನೇಕರು ನುಡಿದದ್ದು ಹೀಗೆ ಮಗುವಾಳಪ್ಪನವರಿಗೆ ಅವರ ಪಕ್ಷಕ್ಕೆ ನಮ್ಮ ತಾಲ್ಲೂಕಿನಲ್ಲಿ ಸರಿಸಾಟಿ ಯಾರಿಲ್ಲ.

ನಮ್ಮ ಅಭ್ಯರ್ಥಿಯ ಬಗ್ಗೆಯೂ ಗೌರವ ಅಭಿಮಾನ. ವಿದ್ಯಾವಂತ, ಬುದ್ದಿವಂತ, ಪ್ರಾಮಾಣಿಕ, ಹೋರಾಟಗಾರ ನಿಷ್ಠಾವಂತ ಚಂದ್ರತೇಜಸ್ವಿ ಗೆಲ್ಲಬೇಕೆಂಬುದು ಅನೇಕರ ಆಶಯ. ಬೂರ್ಷ್ವಾ ಪತ್ರಿಕೆಗಳು ಬಣ್ಣಿಸಿದ್ದೂ ಇದನ್ನೇ ರೈತ ಸಂಕಷ್ಟದ ಪಕ್ಷದ ನೇತಾರರಾಗಿ ದುಡಿದ ಹಿರಿಯ ಸಂಗಾತಿ ಕಾಂ. ರಾಮಭದ್ರಯ್ಯನವರ ಪುತ್ರನೆಂಬ ಗೌರವವೂ ಅನೇಕರಲ್ಲಿ.

ಚುನಾವಣೆಯನ್ನು ಹೋರಾಟದ ಭಾಗವಾಗಿಯೇ ಗುರುತಿಸಿಕೊಳ್ಳುವ ಪಕ್ಷ ದುಡಿಯುವ ಜನತೆಯ ಪರವಾಗಿ ಪ್ರಥಮ ಬಾರಿಗೆ ಅಭ್ಯರ್ಥಿಯನ್ನು ಕಣಕ್ಕಿಳಿಸಿ ವಿಷಯಾಧಾರಿತ ಬೆಂಬಲ-ಹೋರಾಟಕ್ಕೆ ಬೆಂಬಲ ಕೋರಿದೆ. ಹೋರಾಟದ ಭಾಗವಾಗಿ ಗೆದ್ದರೂ ಕೆಲಸ ಸೋತರೂ ಕೆಲಸವೆಂಬುದು ನಮ್ಮೆಲ್ಲರಿಗೂ ತಿಳಿದಿರುವ ವಿಚಾರವೆ. ಇಡೀ ತಾಲ್ಲೂಕು ಸಮಿತಿ ಮತ್ತು ಪಕ್ಷದ ಸ್ಥಳೀಯ ಸದಸ್ಯರು ಹಿತೈಷಿಗಳು ಸಾಮೂಹಿಕಸಂಘಟನೆಗಳ ಕಾರ್ಯಕರ್ತರು ಜಿಲ್ಲಾ ಸಮಿತಿಯ ಕೆಲ ಸದಸ್ಯರು ಪ್ರಾಮಾಣಿಕತೆಯಿಂದ ಹಗಲಿರುಳು ದುಡಿದು, ಹೆಂಡ-ಸಾರಾಯಿ, ಅವ್ಯವಹಾರಗಳ ತೀವ್ರ ಪೈಪೋಟಿಯ ನಡುವೆ ಪ್ರಾಮಾಣಿಕವಾಗಿ ಸ್ಪರ್ಧೆಯನ್ನೆದುರಿಸಲಾಗಿದೆ. ಕ್ಷೇತ್ರದ, ಜನತೆಯ ಸಮಸ್ಯೆಗಳ ಕಡೆ ಬೆಳಕು ಚೆಲ್ಲಲಾಗಿದೆ.

ಫಲಿತಾಂಶಕ್ಕಾಗಿ ಕಾಯೋಣ.


ಇ.ಎಂ.ಎಸ್. ಭವನ ನಿಧಿ



ಹಿಂದಿನ ಮೊತ್ತ	ರೂ. 14,37,709.50
ಎಸ್ಎಫ್ಐ ಮಾರಿಕಾಂಬ ಪ್ರೌಢಶಾಲೆ ಘಟಕ	55.00
ಎಸ್.ಎಫ್.ಐ. ಹಾಸನ ಜಿಲ್ಲಾ ಸಮಿತಿ	115.00
ದ.ಕ. ಮತ್ತು ಉಡುಪಿ ಜಿಲ್ಲಾ ಸಮಿತಿ	500.00
ರಮೇಶ್(ತುಮಕೂರು ಜಿಲ್ಲಾಧ್ಯಕ್ಷ	50.00
ಪ್ರಕಾಶ್ ಎನ್.ಆರ್.(ಹಾಸನ ಜಿಲ್ಲಾಧ್ಯಕ್ಷ	50.00
ಸಿಪಿಐ(ಎಂ) ಮೈಸೂರು ಜಿಲ್ಲಾ ಸಮಿತಿ	700.00
ಹೆಚ್.ಎಸ್.ಕೃಷ್ಣಮೂರ್ತಿ(ಎಲ್ಐಸಿ)	250.00
ಹಿತೈಷಿ,ವಿರಾಜಪೇಟೆ	2500.00
ಜಮೀರ್, ವಿರಾಜಪೇಟೆ	600.00
ಎಸ್ಎಫ್ಐ ಧಾರವಾಡ ಜಿಲ್ಲಾ ಸಮಿತಿ (ಸಂಗ್ರಹ ಸೀತಾಪ್ರಭು)	1000.00
ಅಮೀನಬೀ ಗಫೂರ್ ಶಿವಮೊಗ್ಗ	100.00
ರಾಜು	100.00
ಕೃಷ್ಣ	100.00
ಈಶ್ವರ.ಎಸ.ವಿ	100.00
ಕೆ.ಆರ್.ರಾಜೇಶ್ವರಿ	100.00
ಶ್ರೀಮತಿ ಭಾಗ್ಯಲತಾ	50.00
ಎನ್.ಜಿ.ಹರ್ಷ	25.00
ಪುರುಷೋತ್ತಮ	25.00
ಶ್ರೀಮತಿ ಶಾರದಾ ಕುಮಾರಿ	50.00
ಸವಿತಾ	25.00
ಕಸ್ತೂರಿ ಶಾನ್‌ಬೋಗ್	25.00
ನಳಿನಿ	25.00
ಕವಿತಾ	25.00
ಜಯಾ	25.00
ಎಸ್ಎಲ್ಎನ್ ಶಾಸ್ತ್ರಿ	30.00
ಕೃಷ್ಣಮೂರ್ತಿ	25.00
ಪ್ರಭಾ	25.00
ವಸಂತಲಕ್ಷ್ಮಿ	50.00
ಎಂ.ಎಸ್.ಪೈ	25.00
ರಮೇಶ್ ಜೋಷಿ	25.00
ಅಕ್ಕಮ್ಮ	50.00
ರಿಫಾಕತ್	25.00
ಜಯಲಕ್ಷ್ಮಿ	100.00
ವೀಣಾ	25.0
ಒಟ್ಟು ಮೊತ್ತ	ರೂ. 14,44,684.50

ಎಡರಂಗದ ಕಂಚಿನ ಕೋಟೆ

ಪಶ್ಚಿಮ ಬಂಗಾಳದ ರಣಾಂಗಣದಲ್ಲಿ.....



ಪಶ್ಚಿಮ ಬಂಗಾಳ ಎಡರಂಗದ ಮುಕ್ಕಾಲು ಭಾಗ ಸೀಟು ಒದಗಿಸುವ ರಾಜ್ಯ. ಅದೂ ಈ ಬಾರಿ ಮೂರನೇ ರಂಗ ರಾಷ್ಟ್ರೀಯ ಮಟ್ಟದಲ್ಲಿ ದುರ್ಬಲವಾಗಿರುವ ಸಂದರ್ಭದಲ್ಲಿ ಎಡರಂಗ ಅತಿ ಹೆಚ್ಚಿನ ಸೀಟು ಗಳಿಸುವುದು ಅತ್ಯವಶ್ಯ. ಪಶ್ಚಿಮ ಬಂಗಾಳದ ಎಡರಂಗ ಸಿಪಿಐ(ಎಂ) ನಾಯಕತ್ವದಲ್ಲಿ ಇದಕ್ಕೆ ಸಿದ್ಧವಾಗುತ್ತಿದೆ. ಲೇಡಿ ಬಾಳಾ ಠಾಕ್ರೆ ಎಂದು ಕುಖ್ಯಾತವಾಗಿರುವ ಮಮತಾ ಬ್ಯಾನರ್ಜಿ ದಯೆಯಿಂದ ಪಶ್ಚಿಮ ಬಂಗಾಳ ನಿಜವಾಗಿಯೂ ರಣಾಂಗಣವಾಗು ವಂತೆ ಕಾಣುತ್ತದೆ. ಮಮತಾ ಬ್ಯಾನರ್ಜಿಯ ಸಮರ್ಥ ನಾಯಕತ್ವದಲ್ಲಿ ಈಗಾಗಲೇ ಚುನಾವಣೆ ಪ್ರಚಾರ ಆರಂಭವಾಗುವ ಮೊದಲೇ ತೃಣಮೂಲ ಗೂಂಡಾಗಳು ಈಗಾಗಲೇ ನಾಲ್ಕೈದು ಕೊಲೆಗಳನ್ನು ಮಾಡಿದ್ದಾರೆ. ಪಶ್ಚಿಮ ಬಂಗಾಳದ ಚುನಾವಣಾ ಕಣದ ಕೆಲವು ಚಿತ್ರಗಳು.

ದಂಗೆ ಏಳಲು ಪೋಲಿಸ್ ಗೆ ಮಮತಾ ಕರೆ

ತೃಣಮೂಲ ಕಾಂಗ್ರೆಸ್ ನಾಯಕಿ 'ಲೇಡಿ ಬಾಳಾಠಾಕ್ರೆ' ಯ ಇತ್ತೀಚಿನ ಸಾಹಸಕಥನವೆಂದರೆ ಪಶ್ಚಿಮ ಬಂಗಾಳದ ಪೋಲೀಸರಿಗೆ ರಾಜ್ಯ ಸರ್ಕಾರದ ವಿರುದ್ಧ ದಂಗೆ ಕರೆ ನೀಡಿದ್ದಾರಂತೆ. ಬಿಜೆಪಿ ಕೂಟ ಅಧಿಕಾರಕ್ಕೆ ಬಂದರೆ ಬರುವ ಫೆಬ್ರವರಿಯಲ್ಲೇ ರಾಜ್ಯ ವಿಧಾನ ಸಭೆ ಚುನಾವಣೆ ನಡೆಸುವ ಆಶ್ವಾಸನೆ ನೀಡಿದ್ದಾರೆ. ಅಂದರೆ ರಾಜ್ಯದ ಎಡರಂಗ ಸರಕಾರವನ್ನು ಕಿತ್ತೊಗೆಯಲಾಗುವುದು ಎಂದರ್ಥ.

ಪ.ಬಂಗಾಳದ ತರಬೇತಿ ಪಡೆದ ಮತ್ತು ಶಿಸ್ತಿನ ಪೋಲೀಸರಿಗೆ, ಮಮತಾ ಬ್ಯಾನರ್ಜಿಗಿಂತ ಹೆಚ್ಚಿನ ಶಿಕ್ಷಣ, ತಿಳುವಳಿಕೆ ಇದೆ. ಕಾಣದ ವಿಶ್ವವಿದ್ಯಾಲಯದ ಬೋಗಸ್ ಡಿಗ್ರಿ ಇದೆ ಎಂದು ಒದರುವ ಮಮತಾ ಬ್ಯಾನರ್ಜಿಗಿಂತ ಹೆಚ್ಚಿನ ಶಿಕ್ಷಣವು ಪೋಲೀಸರಿಗೆ ಇದೆ ಎಂದು ಮುಖ್ಯಮಂತ್ರಿ ಜ್ಯೋತಿಬಸು ಮಮತಾ ಹೇಳಿಕೆಗೆ ಚಾಟಿ ಏಟಿನ ಉತ್ತರ ನೀಡಿದ್ದಾರೆ.

ಇನ್ನು ರಾಜ್ಯ ಸರ್ಕಾರವನ್ನು ಅಮಾನತು ಮಾಡುವ ಬಗ್ಗೆ. ಇಂತಹ 'ಆಶ್ವಾಸನೆ'ಗಳನ್ನು ಬಿಹಾರದಲ್ಲಿ ಕಳೆದಬಾರಿ ಕೊಟ್ಟ ಬಿಜೆಪಿ-ಸಮತಾ ದುಷ್ಟಕೂಟಕ್ಕೆ ಎಂತಹ ಮುಖಭಂಗ ಆಯ್ತು ಎಂದು ಮಮತಾರಿಗೆ ನೆನಪಿಸುವ ಅಗತ್ಯ ಇಲ್ಲ ಅಲ್ಲವೇ? ಎಂಬುದು ಜ್ಯೋತಿಬಸು ಮೊನಚಿನ ಉತ್ತರ.

ತೃಣಮೂಲ ಹಿಂಸಾಕಾಂಡದ ಆರಂಭ

ತೃಣಮೂಲ ಹಿಂಸಾಕಾಂಡದ ಆರಂಭವನ್ನು ಪಶ್ಚಿಮಬಂಗಾಳ ಸಿಪಿಐ(ಎಂ)ನ ಕಾರ್ಯದರ್ಶಿ ಮತ್ತು ಪೊಲಿಟ್‌ಬ್ಯೂರೋ ಸದಸ್ಯ ಅನಿಲ್ ಬಿಸ್ವಾಸ್ ಮೇಲಿನ ಹಿಂಸಾತ್ಮಕ ದಾಳಿಯಿಂದ ಮಾಡಿತು. ಕಾಂ. ಬಿಸ್ವಾಸ್ ಕೃಷ್ಣ ನಗರ್‌ನಿಂದ ಕಲ್ಕತ್ತಾಗೆ ವಾಪಸಾಗುತ್ತಿದ್ದಾಗ ತೃಣಮೂಲ ಗೂಂಡಾಗಳು ರಸ್ತೆಯಲ್ಲಿ ಅಡ್ಡಗಟ್ಟಿ ಹಿಂಸಾತ್ಮಕ ದಾಳಿ ನಡೆಸಿದರು.

24 ಪರಗಣ ಜಿಲ್ಲೆಯ ಬಿಶ್ತ್‌ಪುರದ ರೂಪಚಂದ್ ಮಂಡಲ್ ಎಂಬ 14 ವರ್ಷದ ಹುಡುಗ ಅವರ ಒಬ್ಬ ಬಲಿಪಶು. ಆತನ ತಪ್ಪಾದರೂ ಏನು? ಅವರ ಊರಿನ ಸಿಪಿಐ(ಎಂ) ರ್‍ಯಾಲಿಯಲ್ಲಿ ಕುತೂಹಲದಿಂದ ಭಾಗವಹಿಸಿದ್ದು. ಬಿಶ್ತ್‌ಪುರದಲ್ಲಿ ಆ ರಾತ್ರಿ ಬಾಂಬ್ ಸ್ಫೋಟಗಳ ಸದ್ದು. ಎಲ್ಲರಂತೆ ರೂಪಚಂದ್ ತನ್ನ ಹಾಸಿಗೆ ಹಿಡಿದಿರುವ ತಂದೆ, ಕೃಷಿಕೂಲಿಗಾರ ತಾಯಿ ಜತೆ ಇರುವ ಗುಡಿಸಲಿನಿಂದ ಮೊದಲು ಹೊರಗಡೆ ಓಡಿದ. ಆತನನ್ನು ಮಿನಿವ್ಯಾನ್‌ಗಳಲ್ಲಿ ಬಂದಿದ್ದ ತೃಣಮೂಲ ಗೂಂಡಾಗಳು ಕದ್ದೊಯ್ದು ಬಾಯಿಗೆ ಬಟ್ಟೆಕಟ್ಟಿ, ಸಮೀಪದ ಜವುಳು ಪ್ರದೇಶಕ್ಕೆ ಒಯ್ದು ಅಮಾನುಷವಾಗಿ ಬಾಲಕನ ಕೊಲೆ ಮಾಡಿದರು. ಹಳ್ಳಿ ಜನ ಜಮಾಯಿಸುವ ಹೊತ್ತಿಗೆ ಜಾಗ ಖಾಲಿ ಮಾಡಿದ್ದರು.

ಇದೇ ರೀತಿ ಬಂಕುರಾದ ಕೋತುಲ್‌ಪುರದಲ್ಲಿ ಪಂಚಾಯತ್ ಸಮಿತಿಯಲ್ಲಿ ಅವಿಶ್ವಾಸ ಮತದಲ್ಲಿ. ಸೋತ ತೃಣಮೂಲ ಕಾಂಗ್ರೆಸ್‌ನ ಗೂಂಡಾಗಳು ಟ್ರಕ್ಕುಗಳ ತುಂಬಾ ಬಂದಿಳಿದರು. ಬಾಂಬ್‌ಗಳನ್ನು ಸ್ಫೋಟಿಸಲು ಆರಂಭವಾದಂತೆ ಜನ ತಮ್ಮ ಇದ್ದಬದ್ದ ಆಸ್ತಿ, ಪ್ರಾಣ ಕಾಪಾಡಿಕೊಳ್ಳಲು ಮನೆಯಿಂದ ಹೊರ ಬಂದವರೆಲ್ಲರ ಮೇಲೆ ಗುಂಡುಗಳ ಸುರಿಮಳೆ. 40 ಜನ ನೆಲಕ್ಕುರುಳಿದರು. ಅವರಿಗೆಲ್ಲ ತೀವ್ರ ಮರಣಾಂತಿಕ ಗಾಯಗಳಾಗಿವೆ. ಹತ್ತುಜನ ಆಸ್ಪತ್ರೆಗಳಲ್ಲಿ ಜೀವನ್ಮರಣ ಹೋರಾಟದಲ್ಲಿದ್ದಾರೆ. ಇದು ಸಾಲದೆಂಬಂತೆ ಹಳ್ಳಿಯ ಜನರ ಅಲ್ಪಸ್ವಲ್ಪ ಆಸ್ತಿಗಳನ್ನು ಲೂಟಿ ಮಾಡಿದರು. ಹೆಂಗಸರ ಮಾನಭಂಗ ಮಾಡಿದರು.

ಬಂಗಾಳಿ ದೈನಿಕ 'ಗಣಶಕ್ತಿ'ಯಲ್ಲಿ ಒಂದು ವ್ಯಂಗ್ಯಚಿತ್ರ



ಮಿಡ್ನಾಪುರ್‌ನ ಭಾಗಬಾನ್ಪುರದ ಮಾದಾಬಾಲಿ ಪ್ರದೇಶದಲ್ಲಿ ರಾತ್ರಿ ಮಾಡಿದ ದಾಳಿಯಲ್ಲಿ ಸ್ಥಳೀಯ ಸಿಪಿಐ(ಎಂ) ಸಮಿತಿಯ ಸದಸ್ಯ ಕಾಂ. ಸೃಷ್ಟಿದಾರರನ್ನು ಬಾಂಬ್ ದಾಳಿಯಲ್ಲಿ ಕೊಂದರು. ಕಾಂ. ಸೃಷ್ಟಿದಾರರ ಎಚ್ಚರಿಕೆಯ ಕರೆ ಕೇಳಿ ಹಳ್ಳಿಗರು ಓಡಿ ಬರುವ ಹೊತ್ತಿಗೆ ಕಾಂ. ಸೃಷ್ಟಿದಾರ ಅಸುನೀಗಿದ್ದರು. ಗೂಂಡಾಗಳು ಪರಾರಿಯಾಗಿದ್ದರು.

ಇವ ಬರೀ ಸ್ಯಾಂಪಲ್ಲುಗಳು. ಹೂಗ್ಲಿ, ಮಿಡ್ನಾಪುರ, 24 ಪರಗಣ, ಬಂಕುರಾ ಜಿಲ್ಲೆಗಳ ಹಲವು ಸಿಪಿಐ(ಎಂ) ಪ್ರಬಲವಾಗಿರುವ ಪ್ರದೇಶಗಳಲ್ಲಿ ಇಂತಹ ಘಟನೆಗಳು ನಡೆದಿವೆ. ಇದು 60-70 ದಶಕದಲ್ಲಿ ಕಾಂಗ್ರೆಸ್‌ನ ಆಟದ ಪುನರಾವರ್ತನೆ. ಸಿಪಿಐ(ಎಂ) ಪ್ರಬಲ ಪ್ರದೇಶಗಳಲ್ಲಿ ಭಾರೀ ಹಿಂಸಾಚಾರ ನಡೆಸಿ ಜನರನ್ನು ಬೆದರಿಸಲು ಪ್ರಯತ್ನಿಸುವುದು, ಆಮೇಲೆ ಹಿಂಸಾಚಾರವನ್ನು ಸಿಪಿಐ(ಎಂ)ನ ಮೇಲೆ ಆಪಾದಿಸಿ ಕಾನೂನು-ವ್ಯವಸ್ಥೆ ಸರಿ ಇಲ್ಲ, ಜನರು ಅಪಾಯದಲ್ಲಿ ಬದುಕುತ್ತಿದ್ದಾರೆ ಎಂದು ಪ್ರಚಾರ ಮಾಡುವುದು. ಕೇರಳ, ತ್ರಿಪುರಾಗಳಲ್ಲೂ ಇದೇ ತಂತ್ರ ಬಳಸಲಾಗಿದೆ.

ಎರಡನೇ ಹಂತದ ಚುನಾವಣಾ ಪ್ರಚಾರ ಕಾರ್ಯಕ್ರಮ ಆರಂಭ

ಎಡರಂಗ ಚುನಾವಣಾ ಪ್ರಚಾರ ಕಾರ್ಯಕ್ರಮ ಎರಡನೇ ಹಂತಕ್ಕೆ ತಲುಪಿದೆ. ಮೊದಲ ಹಂತದಲ್ಲಿ ಸಿಪಿಐ(ಎಂ)ಮತ್ತು ಎಡರಂಗದ ಕಾರ್ಯಕರ್ತರ ಜನರಲ್ ಬಾಡಿ ಸಭೆಗಳು, ಗುಂಪು ಸಭೆಗಳನ್ನು ವ್ಯಾಪಕವಾಗಿ ನಡೆಸಲಾಯಿತು. ಎರಡನೇ ಹಂತದಲ್ಲಿ ಸಾರ್ವಜನಿಕ ರ್‍ಯಾಲಿಗಳು ಆರಂಭವಾಗಿದೆ. ಈ ಬಾರಿ ಕೆಲವು 'ಭಾರಿ ಸಾರ್ವಜನಿಕ ರ್‍ಯಾಲಿ' ಗಳಿಗೆ ಬದಲಾಗಿ ಹಲವು 'ಸಣ್ಣ ಸಭೆ'ಗಳನ್ನು ನಡೆಸಲಾಗುವುದು ಎಂದು ಸಿಪಿಐ(ಎಂ) ಕಾರ್ಯದರ್ಶಿ ಪೊಲಿಟ್‌ಬ್ಯೂರೋ ಸದಸ್ಯ ಅನಿಲ್ ಬಿಸ್ವಾಸ್ ಹೇಳಿದ್ದಾರೆ. ಇಂತಹ ಸಭೆಗಳಲ್ಲೂ ಉದ್ದ ಭಾಷಣಗಳ ಬದಲು ಮತದಾರನಿಗಿರುವ ಪ್ರಶ್ನೆಗಳು, ಅನುಮಾನಗಳಿಗೆ ಉತ್ತರಿಸುವುದು ಮುಖ್ಯವಾಗಿ ಕಾಣಲಾಗುವುದು.. ಮತದಾರರ ಭಾಗವಹಿಸುವಿಕೆಗೆ, ಸಂವಾದಕ್ಕೆ ಒತ್ತು ಕೊಡಲಾಗುವುದು. ಈ ಬಗ್ಗೆ ಸಿಪಿಐ(ಎಂ)ನ ಮತ್ತು ಎಡರಂಗದ ಕಾರ್ಯಕರ್ತರಿಗೆ ತರಬೇತಿ ನೀಡಲಾಗಿದೆ ಎಂದಿದ್ದಾರೆ ಕಾಂ. ಬಿಸ್ವಾಸ್

ಕಾಂಗ್ರೆಸ್‌ನಿಂದ ತೃಣಮೂಲಗೆ ಪಕ್ಷಾಂತರ

ಕಾಂಗ್ರೆಸ್‌ನ ಪ್ರಮುಖ ನಾಯಕರಲ್ಲೊಬ್ಬರಾದ ಸುಬ್ರಾತಾ ಮುಖರ್ಜಿ ತೃಣಮೂಲ ಕಾಂಗ್ರೆಸ್‌ಗೆ ಸೇರಿದ್ದು ದೊಡ್ಡ ಸುದ್ದಿ. ಕಾಂಗ್ರೆಸ್‌ನ ಇನ್ನೂ ಕೆಲವು ನಾಯಕರು ತೃಣಮೂಲ ಕಾಂಗ್ರೆಸ್‌ಗೆ ಸೇರಿದ್ದು ಸೇರಿ ಬೂರ್ಜ್ವಾ ಪತ್ರಿಕೆಗಳು ಎಡರಂಗ ಕಷ್ಟದಲ್ಲಿದೆ ಎಂದು ಹೇಳಲು ಆರಂಭಿಸಿದ್ದಾರೆ. ನೀವು ಈ ಬೂರ್ಜ್ವಾ ಪತ್ರಿಕೆಗಳನ್ನು ನಂಬುವುದಾದರೆ, ಕಾಂಗ್ರೆಸ್‌ಗೆ ಲಭಿಸುವ ಮತಗಳು ಇನ್ನಷ್ಟು ಇಳಿಯಲಿವೆ. ಕಳೆದ ಬಾರಿಯ ತ್ರಿಕೋಣ ಸ್ಪರ್ಧೆಯ ಬದಲು, ಹೆಚ್ಚೆಚ್ಚು ನೇರ ಸ್ಪರ್ಧೆಗಳಾಗಿ ಎಡರಂಗ ಹಲವು ಸೀಟುಗಳನ್ನು ಕಳೆದುಕೊಳ್ಳಲಿದೆ ಎಂದು ಅವರ ಥಿಯರಿ.

ಕಾಂಗ್ರೆಸ್ ರಾಷ್ಟ್ರಮಟ್ಟದಲ್ಲಿ ಗಣನೀಯ ಜಾತ್ಯಾತೀತ ಶಕ್ತಿಯಾಗಿರುವವರೆಗೆ ಕೆಲವು ನಾಯಕರು ಪಕ್ಷಾಂತರ ಮಾಡಿದರೆ ಅದರಿಂದ ಏನೂ ವ್ಯತ್ಯಾಸ ವಾಗದು ಎಂಬುದು ನಿಜ ಸಂಗತಿ. ಕಾಂಗ್ರೆಸ್ ದುರ್ಬಲವಾದಾಗ ಅದರ ಮತಗಳೂ ತೃಣಮೂಲಕ್ಕೆ ಹೋಗಬೇಕೆಂದಿಲ್ಲ. ಜಾತ್ಯಾತೀತ ಮತಗಳು ಖಂಡಿತ ಬಿಜೆಪಿ ತೃಣಮೂಲದ ಕೂಟಕ್ಕೆ ಖಂಡಿತ ಹೋಗುವುದಿಲ್ಲ. ಮಮತಾ ಗೊಂದಲ, ಅವಾಂತರಗಳನ್ನು ಕಂಡಿರುವ ತೃಣಮೂಲ ಬೆಂಬಲಿಗರ ಒಂದು ವಿಭಾಗವೇ ಅವರಿಗೆ ಕೈಕೊಡಬಹುದು. ಇಂತಹ ಎಲ್ಲಾ ಭವಿಷ್ಯವಾಣಿಗಳು ಜನರನ್ನು ಅಂಕಿ ಸಂಖ್ಯೆಗಳಾಗಿಸುವ, ಜನರ ರಾಜಕೀಯ ಪ್ರಜ್ಞೆ, ಬುದ್ಧಿಮತ್ತೆಯನ್ನು ಪ್ರಶ್ನಿಸುವ ಆಧಾರದ ಮೇಲೆ ಇವೆ. ಜನ ಪಕ್ಷಗಳ ಧೋರಣೆಗಳು, ಕೆಲಸದ ಗುಣಮಟ್ಟ, ಅಭ್ಯರ್ಥಿಗಳ ಪ್ರಾಮಾಣಿಕತೆ-ಮೌಲ್ಯವನ್ನು ನೋಡುತ್ತಾರೆ ಎಂಬುದು ಇಂತಹ ಭವಿಷ್ಯವಾಣಿಗಳು ನೆಲಕಚ್ಚಿರುವ ಹಲವು ಉದಾಹರಣೆಗಳಿಂದ ಗೊತ್ತಾಗುತ್ತದೆ.

ಇದು ಸಾಲದೆಂಬಂತೆ ಬೂರ್ಜ್ವಾ ಪತ್ರಿಕೆಗಳು ಈ ಬಾರಿ ಎಡರಂಗದಲ್ಲಿ ಸೀಟು ಹಂಚಿಕೆಯಲ್ಲಿ, ಅಭ್ಯರ್ಥಿಗಳ ಆಯ್ಕೆಯಲ್ಲಿ ಭಾರಿ ಗೊಂದಲ ಇದೆ ಎಂದೆಲ್ಲಾ ಅಪಪ್ರಚಾರಮಾಡಲು ಪ್ರಯತ್ನಿಸಿದರು. ಆದರೆ ತೃಣಮೂಲ ಬಿಜೆಪಿ, ಕಾಂಗ್ರೆಸ್‌ಗಳಿಗಿಂತ ಮೊದಲೇ ಎಡರಂಗ ತನ್ನ ಅಭ್ಯರ್ಥಿ ಪಟ್ಟಿ ಪ್ರಕಟಿಸಿಬಿಟ್ಟಿದೆ.

ಪಂಜಾಬ್: ಅಕಾಲಿ-ಬಿಜೆಪಿ ನಿದ್ದೆಗೆಡಿಸಿದ ಸನ್ನಿವೇಶ

ಕಳೆದ ಲೋಕಸಭಾ ಚುನಾವಣೆಗಳಲ್ಲಿ ಪಂಜಾಬಿನ ಲೋಕಸಭಾ ಸ್ಥಾನಗಳಲ್ಲಿ 13 ರಲ್ಲಿ 10 ಸ್ಥಾನಗಳನ್ನು ಅಕಾಲಿ-ಬಿಜೆಪಿ ಕೂಟ ಗೆದ್ದಿತ್ತು. ಇದಲ್ಲದೆ ಮಾಜಿ ಪ್ರಧಾನಿ ಗುಜ್ರಾಲ್ ಕೂಡಾ ಅಕಾಲಿ ಬೆಂಬಲದಿಂದ ಜಲಂಧರ್‌ನಿಂದ ಗೆದಿದ್ದರು. ಆದರೆ ಈ ಬಾರಿ ಇದರ ಅರ್ಧದಷ್ಟು ಬಿಜೆಪಿ-ಅಕಾಲಿದಳ ಗೆಲ್ಲುವ ಸಾಧ್ಯತೆಯಿಲ್ಲ ಎಂದು ಹೇಳಲಾಗುತ್ತಿದೆ.

ಕಾರಣ ಇಷ್ಟೆ - ಈ ಕೂಟ ರೈತರಿಗೆ ಪುಕ್ಕಟ್ಟೆ ವಿದ್ಯುತ್ತಿನ ಭರವಸೆ ನೀಡಿತ್ತು. ಅದು ಸಿಕ್ಕಿದ್ದು ಕೇವಲ ಶ್ರೀಮಂತ ರೈತರಿಗೆ ಮಾತ್ರ. ಬಡ ರೈತರಿಗೆ ವಿದ್ಯುತ್ತೇ ಸಿಗದಂತಾಯಿತು. ಹಲ ತಿಂಗಳ ಹಿಂದೆಯಂತೂ ಎಲ್ಲರಿಗೂ ನೂರಾರು ರೂಪಾಯಿಗಳಿಂದ ಸಾವಿರಾರು ರೂಪಾಯಿಗಳವರೆಗಿನ ಬಿಲ್ ಬಾಕಿ ತೀರಿಸಲು ನೋಟೀಸು! ಕಳೆದ 3 ವರ್ಷಗಳಿಂದ 2.5 ಲಕ್ಷ ವಿದ್ಯುತ್ ಕನೆಕ್ಷನ್ ಕೊಡಬೇಕೆಂದು ಹಾಕಿದ ಅರ್ಜಿಗಳು ಧೂಳು ತಿನ್ನುತ್ತಿವೆ. ಸರ್ಕಾರಿ ಆಸ್ಪತ್ರೆಗಳಲ್ಲೇ ವಿವಿಧ ಪರೀಕ್ಷಣೆಗಳಿಗೆ ಶುಲ್ಕಗಳಲ್ಲಿ 200-900 ಶೇ ಏರಿಕೆ. ಹಿಂದೂ ಓಟುಗಳು ತನ್ನ ಜೇಬಿನಲ್ಲಿವೆ ಎಂದು ಬಿಜೆಪಿ ಭಾವಿಸುವ ಪರಿಸ್ಥಿತಿ ಈಗಿಲ್ಲವಾಗಿದೆ.

ಸಂಗ್ರೂರ್ ಮತ್ತು ಭಟಿಂಡಾದಲ್ಲಿ ಕಮ್ಯುನಿಸ್ಟ್ ಪಕ್ಷಗಳ ಸ್ಪರ್ಧಿಗಳು ಕಣದಲ್ಲಿದ್ದು ಬಿಜೆಪಿಗೆ-ಅಕಾಲಿ ಕೂಟಕ್ಕೆ ಬಲವಾದ ಸವಾಲು ಹಾಕಿದ್ದಾರೆ.

ಭಟಿಂಡಾದಲ್ಲಿ ಸಿಪಿಐನ ಭಾನ್ ಸಿಂಗ್ ಭಾವುರಾ ತಮ್ಮ ಪ್ರತಿಸ್ಪರ್ಧಿಗಳಿಗಿಂತ ಮುಂದೆ ಇದ್ದರೆ, ಸಂಗ್ರೂರ್‌ನಲ್ಲಿ ಸಿಪಿಐ(ಎಂ)ನ ಅಭ್ಯರ್ಥಿ ನಿವೃತ್ತ ಪ್ರಿನ್ಸಿಪಾಲ್ ಅಜಿತ್ ಸಿಂಗ್ ಮಾಜಿ ಕೇಂದ್ರ ಕೃಷಿ ಮಂತ್ರಿ ಸುರ್ಜಿತ್ ಸಿಂಗ್ ಬರ್ನಾಲ ಮತ್ತು ಮಾಜಿ ಐ.ಪಿ.ಎಸ್.ಅಧಿಕಾರಿ ಮತ್ತು ಅಕಾಲಿದಳ ಗುಂಪಿನ ಮುಖ್ಯಸ್ಥ ಸಿಮ್ರಾನ್‌ಜಿತ್ ಸಿಂಗ್ ಮಾನ್‌ಗೆ ಬಲವಾದ ಸ್ಪರ್ಧೆಯೊಡ್ಡಿದ್ದಾರೆ. ಬರ್ನಾಲಾ ತಮ್ಮ ರಾಜಕೀಯ ಜೀವನದ ಅತ್ಯಂತ ಬಲವಾದ ಸವಾಲು ಎದುರಿಸುತ್ತಿದ್ದಾರೆ ಎಂದು ಹೇಳಲಾಗುತ್ತಿದೆ.

ಸಂಗ್ರೂರ್ ಜಿಲ್ಲೆ ಕೆಂಬಾವುಟ ಕೆಂಪು ಬ್ಯಾನರುಗಳಿಂದ ಕಂಗೊಳಿಸುತ್ತಿದೆ. ಕೇಂದ್ರ ಕೃಷಿ ಮಂತ್ರಿಯಾಗಿ ತನ್ನ ಕುಕೃತ್ಯಗಳನ್ನು ಸಮರ್ಥಿಸಿಕೊಳ್ಳಲು ಬರ್ನಾಲಾಗೆ ಆಗುತ್ತಿಲ್ಲ. ಈ ಪ್ರದೇಶದ ರೈತರು ಆತ್ಮಹತ್ಯೆ ಮಾಡಿಕೊಳ್ಳುವ ಸಂಗತಿಯನ್ನು ಹಿಂದೆಂದೂ ನಾವಿಲ್ಲಿ ಕೇಳಿರಲಿಲ್ಲ. ಈಗ ಕೇಳುತ್ತಿದ್ದೇವೆ. ಇದಕ್ಕೆ ರೈತರು ಸಾಲವನ್ನು ದುಂದುವೆಚ್ಚ ಮಾಡಿದ್ದೇ ಕಾರಣ ಎಂದು ಮಂತ್ರಿಗಳು ಆಪಾದಿಸುತ್ತಾರೆ ಎಂದು ಪಿಂಡಿ ಗ್ರಾಮದ ತಾರಾಸಿಂಗ್ ಹೇಳುತ್ತಾರೆ. ನಗರ ಪ್ರದೇಶಗಳ ಮತದಾರರಂತೂ ಏನೂ ಉತ್ಸುಕತೆ ತೋರುತ್ತಿಲ್ಲ.

ಮಗನ ಕುಕೃತ್ಯಕ್ಕೆ ತಂದೆಯ ರಕ್ಷಣೆ

ಬಿಜೆಪಿ ಕೂಟ ವಂಶಪಾರಂಪರ್‍ಯ ಆಳ್ವಿಕೆಯ ವಿರುದ್ಧ ಬೊಬ್ಬೆ ಹಾಕುತ್ತದೆ. ಆದರೆ ಪಂಜಾಬಿನ ಮುಖ್ಯಮಂತ್ರಿ ಪ್ರಕಾಶ್ ಸಿಂಗ್ ಬಾದಲ್ ತನ್ನ ಪುತ್ರ ಹಾಗೂ ಕೇಂದ್ರ ಉದ್ದಿಮೆ ಉಪ ಮಂತ್ರಿ ಸುಖ್‌ಬೀರ್ ಸಿಂಗ್ ಬಾದಲ್‌ನ ಕುಕೃತ್ಯವನ್ನು ಮುಚ್ಚಿಹಾಕಲು ಪ್ರಯತ್ನಿಸುತ್ತಿದ್ದಾರೆ. ದೇಶ್ ಸೇವಕ್ ಪತ್ರಿಕೆಯ ಮಾನ್ಯತೆ ಪಡೆದ ಛಾಯಾಚಿತ್ರಗಾರ ಅಜಯ್ ಕುಮಾರ್ ವರ್ಮಾರನ್ನು ಥಳಿಸಿ ಕ್ಯಾಮರಾ ಕಿತ್ತುಕೊಂಡ ದುರ್ವರ್ತನೆಯನ್ನು ಸೆಪ್ಟೆಂಬರ್ 8 ರಂದು ಚಂಢಿಗಡ್‌ನಲ್ಲಿ ನಡೆದ ಸಾಮೂಹಿಕ ಧರಣಿಯೊಂದರಲ್ಲಿ ಬಲವಾಗಿ ಖಂಡಿಸಲಾಯಿತು. ಇನ್ನೊಬ್ಬ ಅಕಾಲಿ ಮಂತ್ರಿ ಹಾಗೂ ಮುಖ್ಯಮಂತ್ರಿಗಳ ನಿಕಟ ಸಹಯೋಗಿ ಗುರುದೇವ್ ಸಿಂಗ್ ಬಾದಲ್‌ನ ಮಗ ಸುಖಾಸಿಂಗ್ ಇನ್ನೂ ಗಂಭೀರ ಆಪಾದನೆ ಎದುರಿಸುತ್ತಿದ್ದಾನೆ. ಒಂದು ಅಪ್ರಾಪ್ತ ವಯಸ್ಸಿನ ಬಾಲಕಿಯ ಮೇಲೆ ಅತ್ಯಾಚಾರ ಮಾಡಿದ ಆಪಾದನೆ ಆತನ ಮೇಲಿದೆ. ಆತನನ್ನು ತಕ್ಷಣ ಬಂಧಿಸಬೇಕು ಎಂದೂ ಈ ಧರಣಿ ಒತ್ತಾಯಿಸಿತು. ಸಿಪಿಐ(ಎಂ), ಸಿಪಿಐ, ಪಂಜಾಬ್ ಭಲಾಯಿ ಪಾರ್ಟಿ, ಜನತಾದಳ ಮತ್ತು ಎಐಡಿಡಬ್ಲ್ಯೂಎ ಘಟಕಗಳು ಈ ಧರಣಿಯಲ್ಲಿ ಭಾಗವಹಿಸಿದವು.

ಆಂಧ್ರಪ್ರದೇಶ: ಮಾಧ್ಯಮಗಳ ಪಂಡಿತರ ಭವಿಷ್ಯವಾಣಿ ತಲೆಕೆಳಗಾಗಬಹುದು

1998 ರಲ್ಲಿ ವಾಜಪೇಯಿ ಸರಕಾರ ರಚನೆಗೊಂಡದ್ದು ತೆಲುಗುದೇಶಂ ಪಕ್ಷದ 'ಹೊರಗಿನ' ಬೆಂಬಲದಿಂದ. ಈ ಹೊರಗಿನ ಬೆಂಬಲಕ್ಕೆ ಪ್ರತಿಫಲವಾಗಿ ಅದು ಲೋಕಸಭೆಯ ಅಧ್ಯಕ್ಷ ಸ್ಥಾನ ಪಡೆಯಿತು, ಇದಕ್ಕಾಗಿ ಮೂರನೇ ರಂಗವನ್ನು ಒಡೆಯಿತು ಎಂಬುದು ಈಗ ಹಳೆಯ ಮಾತು. ಆಂಧ್ರಪ್ರದೇಶದಲ್ಲಿ ಕರ್ನಾಟಕದಂತೆ ಲೋಕಸಭಾ ಚುನಾವಣೆಗಳೊಂದಿಗೆ ವಿಧಾನಸಭಾ ಚುನಾವಣೆಗಳೂ ನಡೆಯುತ್ತಿವೆ. ಭಾರೀ ಜಗ್ಗಾಟಗಳ ನಂತರ ಈ ಬಾರಿ ಟಿಡಿಪಿ-ಬಿಜೆಪಿ ನಡುವೆ ಚುನಾವಣಾ ಹೊಂದಾಣಿಕೆ ನಡೆದಿದೆ. ಇದರಿಂದಾಗಿ ಈ ಕೂಟಕ್ಕೆ ಭಾರಿ ಗೆಲುವು ದೊರೆಯಲಿದೆ ಎಂದು ಪತ್ರಿಕೆಗಳು ಹೇಳುತ್ತಿವೆ. ಆದರೆ ಇಲ್ಲಿಯೂ ವಾಸ್ತವತೆ ಭಿನ್ನವಾಗಿದೆ. ಒಂದು ಬಲವಾದ ಟಿ.ಡಿ.ಪಿ.-ಬಿಜೆಪಿ ವಿರೋಧಿ ಗುಪ್ತಗಾಮಿನಿ ಇದ್ದಂತೆ ಕಾಣುತ್ತದೆ ಎಂದು ಹಿಂದುಸ್ತಾನ್ ಟೈಮ್ಸ್ ವರದಿ ಮಾಡಿದೆ. ಈ ಕೂಟದ ಮುಖಂಡರೂ ಖಾಸಗಿಯಾಗಿ ಇದನ್ನು ಒಪ್ಪಿಕೊಳ್ಳುತ್ತಿದ್ದಾರೆ.

ಇದಕ್ಕೆ ಸಾಮಾನ್ಯವಾಗಿ ನೀಡಲಾಗುವ ಕಾರಣ ಅಧಿಕಾರಸ್ಥರ ವಿರುದ್ಧವಾಗಿ ಸಾಮಾನ್ಯವಾಗಿ ಇರುವ ಭಾವನೆ ಎಂದು ಹೇಳಲಾಗುತ್ತಿದೆ. ಆದರೆ ಇದಿಷ್ಟೇ ಕಾರಣವಲ್ಲ. ಕಂಪ್ಯೂಟರ್ ಭಕ್ತ ಚಂದ್ರಬಾಬು ನಾಯ್ಡು ರವರ ಹೊಸ ಆರ್ಥಿಕ ನೀತಿಗಳು ಜನಸಾಮಾನ್ಯರಿಗೆ ನೀಡಿದ್ದು ವಿಪರೀತ ಬೆಲೆಯೇರಿಕೆ ಮಾತ್ರ. ವಿಶ್ವ ಬ್ಯಾಂಕ್‌ನ ಶರತ್ತುಗಳ ಎದುರು ಸಾಷ್ಟಾಂಗ ನಮಸ್ಕಾರ ಮಾಡಿದ್ದು ಇಲ್ಲಿ ಒಂದು ಮುಖ್ಯ ಚುನಾವಣಾ ವಿಷಯವಾಗಿದೆ. ಇದರಿಂದಾಗಿ ಹಲವು ಸಬ್ಸಿಡಿಗಳು ಕಡಿತಗೊಂಡು ಬಡಜನರ ಗೋಳು ಹೆಚ್ಚಿದೆ. ಈ ಹಿಂದೆ ಸಬ್ಸಿಡಿಗಳ ಪರವಾದ ಟಿ.ಡಿ.ಪಿ.ಯ ನಿಲುವಿನಿಂದಾಗಿ ಅದು ಅಧಿಕಾರ ಪಡೆದಿತ್ತು ಎಂಬುದನ್ನು ಇಲ್ಲಿ ನೆನಪಿಸಿಕೊಳ್ಳಬೇಕು.

ಆಂಧ್ರಪ್ರದೇಶ ಸಾಕಷ್ಟು ಸಂಖ್ಯೆಯಲ್ಲಿ ಅಲ್ಪಸಂಖ್ಯಾತರಿರುವ ಒಂದು ರಾಜ್ಯ. ಇಲ್ಲಿ ಬಿಜೆಪಿಯೊಂದಿಗೆ ತೆಲುಗು ದೇಶಂನ ಮೈತ್ರಿಯ ದುಷ್ಫಲವನ್ನು ಅನುಭವಿಸಬೇಕಾಗಿ ಬಂದೀತು. ತನ್ನದು ಹೊರಗಿನ ಬೆಂಬಲವಷ್ಟೇ - ಕಾಂಗ್ರೆಸ್ ಸರಕಾರ ಮಾಡದಂತೆ ತಡೆಯಲು ಎಂದು ಇದುವರೆಗೆ ತನ್ನ ಶಾಮೀಲನ್ನು ಮುಚ್ಚಿಕೊಳ್ಳಲು ಅದಕ್ಕೊಂದು ಮುಖವಾಡವಿತ್ತು. ಆದರೆ ಈಗ ಬಿಜೆಪಿಯೊಂದಿಗೆ ಚುನಾವಣಾ ಒಪ್ಪಂದ ಮಾಡಿಕೊಂಡ ಮೇಲೆ ಆ ಮುಖವಾಡವೂ ಕಳಚಿ ಬಿದ್ದಿದೆ. ಇದರಿಂದಾಗಿ ಕಳೆದ ಮಾರ್ಚಿನವರೆಗೆ ಟಿ.ಡಿ.ಪಿ.ಗೆ ಸಂಪೂರ್ಣ ಬೆಂಬಲ ನೀಡಿದ್ದ ಅಲ್ಪಸಂಖ್ಯಾತರು ಈಗ ತಿರುಗಿಬೀಳುವ ಅಪಾಯವನ್ನು ಟಿ.ಡಿ.ಪಿ. ಎದುರಿಸುತ್ತಿದೆ.

ಇಷ್ಟೇ ಅಲ್ಲ. ಸೈದ್ಧಾಂತಿಕವಾಗಿಯೂ ಬಿಜೆಪಿಯೊಂದಿಗೆ ಟಿ.ಡಿ.ಪಿ. ಚುನಾವಣಾ ಒಪ್ಪಂದವನ್ನು ಸಮರ್ಥಿಸಿಕೊಳ್ಳಲು ಆಗುತ್ತಿಲ್ಲ. ತೆಲುಗುದೇಶಂ ಪಕ್ಷ ಹುಟ್ಟಿದ್ದೇ ಒಕ್ಕೂಟ ತತ್ವದ ಪ್ರಶ್ನೆಯ ಮೇಲೆ, ಕೇಂದ್ರ-ರಾಜ್ಯ ಸಂಬಂಧಗಳ ಪುನರ್ರಚನೆಯಾಗಬೇಕು ಎಂಬ ತಳಹದಿಯ ಮೇಲೆ. ಆದರೆ ಬಿಜೆಪಿಯೊಂದಿಗೆ ಒಪ್ಪಂದ ಮಾಡಿಕೊಳ್ಳಲು ಟಿ.ಡಿ.ಪಿ. ತನ್ನ ಹಾಗೂ ಭಾರತೀಯ ಪ್ರಜಾಪ್ರಭುತ್ವ ಈ ಮೂಲಭೂತ ಪ್ರಶ್ನೆಯನ್ನು ಕೈಬಿಟ್ಟಿದೆ. ಬಿಹಾರದಲ್ಲಿ ಎರಡೆರಡು ಬಾರಿ 356ನೇ ಕಲಮನ್ನು ವಾಜಪೇಯಿ ಸರಕಾರ ಬಳಸಿದಾಗ ಅದನ್ನು ಬಲವಾಗಿ ವಿರೋಧಿಸದೆ ಟಿ.ಡಿ.ಪಿ. ಬಹಳಷ್ಟು ಜನರ ಕೋಪಕ್ಕೆ ಪಾತ್ರವಾಗಿದೆ.

ಆಂಧ್ರಪ್ರದೇಶದಲ್ಲಿನ ಇನ್ನೊಂದು ಮುಖ್ಯ ಅಂಶ ಎಂದರೆ ಇಲ್ಲಿ ಎಡಪಕ್ಷಗಳ ಪ್ರಭಾವ. ಕಳೆದ ಒಂದೂವರೆ ದಶಕದಲ್ಲಿ ಒಕ್ಕೂಟ ತತ್ವ, ಧರ್ಮನಿರಪೇಕ್ಷತೆ ಹಾಗೂ ಜನ-ಪರ ನೀತಿಗಳಲ್ಲಿ ಎಡ ಪಕ್ಷಗಳು ಟಿ.ಡಿ.ಪಿ.ಗೆ ಬೆಂಬಲವಾಗಿ ನಿಂತಿದ್ದವು. 1984 ರಲ್ಲಿ ಎನ್.ಟಿ. ರಾಮರಾವ್‌ರ ಸರಕಾರವನ್ನು ವಜಾ ಮಾಡಿದಾಗ ದೇಶಾದ್ಯಂತ ಅದರ ವಿರುದ್ಧ ಚಳುವಳಿ ಎಬ್ಬಿಸುವಲ್ಲಿ ಮುಖ್ಯ ಪಾತ್ರ ವಹಿಸಿದ್ದು ಎಡಪಕ್ಷಗಳು. ಸ್ವತಃ ಎನ್.ಟಿ.ರಾಮರಾವ್ ಇದನ್ನು ಬಹಿರಂಗವಾಗಿ ಹೇಳಿದ್ದರು. ಎಡಪಕ್ಷಗಳೊಂದಿಗೆ ಮೈತ್ರಿ ಟಿ.ಡಿ.ಪಿ.ಗೆ ಒಂದು ವಿಶ್ವಾಸಾರ್ಹತೆಯನ್ನು ನೀಡಿತ್ತು. ಈಗ ಎಡಪಕ್ಷಗಳು ಟಿ.ಡಿ.ಪಿ.ಯ ತಿಪ್ಪರಲಾಗದಿಂದಾಗಿ ಅದರೊಂದಿಗೆ ಸಂಬಂಧ ಕಡಿದುಕೊಂಡಿರುವುದರಿಂದಲೂ ಟಿ.ಡಿ.ಪಿ. ಭಾರಿ ಬೆಲೆ ತೆರಬೇಕಾಗಿ ಬರಬಹುದು.

ಮೊದಲ ಬಾರಿಗೆ ಕಮ್ಯುನಿಸ್ಟ್ ಪಕ್ಷಗಳು ಖಮ್ಮಂ ಮತ್ತು ನಲಗೊಂಡಾ ಜಿಲ್ಲೆಗಳಲ್ಲಿ ಎಲ್ಲಾ ಸ್ಥಾನಗಳಿಗೆ ಸ್ಪರ್ಧಿಸಿವೆ. ಈ ಎರಡು ಜಿಲ್ಲೆಗಳು 1946-50ರ ಐತಿಹಾಸಿಕ ತೆಲಂಗಾಣ ಸಮರದ ಎರಡು ಪ್ರಮುಖ ಕೇಂದ್ರಗಳಾಗಿದ್ದವು. ತೆಲಂಗಾಣಾ ಪ್ರದೇಶದ ಇತರ ಜಿಲ್ಲೆಗಳಲ್ಲೂ ಹಲವು ಸ್ಥಾನಗಳಿಗೆ ಸಿಪಿಐ ಹಾಗೂ ಸಿಪಿಐ(ಎಂ) ಸ್ಪರ್ಧಿಸುತ್ತಿವೆ. ಈ ಬಾರಿಯ ಫಲಿತಾಂಶ ಏನೇ ಇರಲಿ, ರಾಜಕೀಯವಾಗಿ ಈ ಎರಡು ಪಕ್ಷಗಳು ಈ ಚುನಾವಣೆಗಳಲ್ಲಿ ಮುನ್ನಡೆ ಸಾಧಿಸುವುದಂತೂ ಖಂಡಿತ.

ದಿಲ್ಲಿ: ಯಾತ್ರೆಗಳ ಪಕ್ಷದ ವಿರುದ್ಧ ಯಾತ್ರೆ

'ಜನತೆಯನ್ನು ಉಳಿಸಿ, ಭಾರತವನ್ನು ಉಳಿಸಿ, ಬಿಜೆಪಿಯನ್ನು ಸೋಲಿಸಿ' ಇದು ದಿಲ್ಲಿಯ ಎಲ್ಲಾ ಲೋಕಸಭಾ ಕ್ಷೇತ್ರಗಳಲ್ಲಿ ಸಿಪಿಐ(ಎಂ) ದಿಲ್ಲಿ ರಾಜ್ಯ ಸಮಿತಿ ಸಂಘಟಿಸಿದ ಯಾತ್ರೆ. ಬ್ಯಾನರುಗಳು, ಬಾವುಟಗಳಿಂದ ಅಲಂಕರಿಸಿದ ಟೆಂಪೋ ಸಭೆಗಳಿಗೆ ವೇದಿಕೆಯಾಗಿಯೂ ಬಳಕೆಯಾಗುತ್ತಿತ್ತು. ದಿಲ್ಲಿಯ ಏಳು ಕ್ಷೇತ್ರಗಳಲ್ಲಿ ಪ್ರತಿಯೊಂದರಲ್ಲೂ 10-15 ಸಭೆಗಳು ನಡೆದವು.

ಈ ಸಭೆಗಳನ್ನುದ್ದೇಶಿಸಿ ಮಾತನಾಡಿದ ಮುಖಂಡರುಗಳಿಗೆ ಉತ್ತಮ ಸ್ಪಂದನ ದೊರೆಯಿತು. ಕೆಲವು ಸ್ಥಳಗಳಲ್ಲಿ ಯಾತ್ರೆಯನ್ನು ತಡೆದು ಜನ ಕರಪತ್ರಗಳನ್ನು ಕೇಳುತ್ತಿದ್ದರು. ಬಿಜೆಪಿಯನ್ನು ಸೋಲಿಸಲು ಕರೆ ನೀಡುವ ಎರಡು ಲಕ್ಷ ಕರಪತ್ರಗಳು ಈ ರೀತಿ ಹಂಚಲ್ಪಟ್ಟವು. ಈ ಯಾತ್ರೆ ಕಾರ್ಮಿಕ ವರ್ಗದ ವಾಸಸ್ಥಳಗಳು, ಜುಗ್ಗಿ-ಜೋಪಡಿಗಳ ಮೇಲೆ ಹೆಚ್ಚು ಗಮನ ಕೇಂದ್ರೀಕರಿಸಿತ್ತು. ಇಲ್ಲಿ ಬಲವಾದ ಬಿಜೆಪಿ-ವಿರೋಧಿ ಭಾವನೆ ಕಂಡು ಬಂತು ಎಂದು ಯಾತ್ರೆಯಲ್ಲಿ ಭಾಗವಹಿಸಿದ ವರು ಹೇಳಿದ್ದಾರೆ. ಬೆಲೆಯೇರಿಕೆ ತಡೆಯುವ, ಕೆಲಸ ಕೊಡುವ ಆಶ್ವಾಸನೆಗಳನ್ನು ಈಡೇರಿಸದೆ ವಿಶ್ವಾಸಘಾತ ಮಾಡಿದರೆಂದು ಜನ ದೂರುತ್ತಿದ್ದರು.

ಬೃಂದಾಕಾರಟ್, ಎನ್.ಬಿ.ಭಾರದ್ವಾಜ್, ಪಿ.ಎಂ.ಎಸ್. ಗ್ರೆವಾಲ್, ನಾಥು ಪ್ರಸಾದ್ ಮತ್ತು ರಾಂಸೇವಕ್‌ಶರ್ಮಾ ಸಭೆಗಳನ್ನುದ್ದೇಶಿಸಿ ಮಾತನಾಡಿದರು.

ಇಲ್ಲಿ ಸೆಪ್ಟೆಂಬರ್ 5 ಕ್ಕೆ ಚುನಾವಣೆಗಳು ಮುಗಿದಿದ್ದು ಮಧ್ಯಮ ವರ್ಗಗಳು ಹೆಚ್ಚಾಗಿರುವ ನವದೆಹಲಿ ಮತ್ತು ದಕ್ಷಿಣ ದಿಲ್ಲಿಯಲ್ಲಿ ಅತಿ ಕಮ್ಮಿ ಮತದಾನವಾಗಿದೆ. - 42%. ಇದುವರೆಗೆ ಅಲ್ಲಿ ಇಷ್ಟು ಕಮ್ಮಿ ಮತದಾನವಾಗಿಲ್ಲ ಎಂದು ಹೇಳಲಾಗಿದೆ. 'ಕಾರ್ಗಿಲ್ ವಿಜಯ'ದ ಪರವಾಗಿ ಮತದಾನ ನೀಡುತ್ತಾರೆ ಎಂದು ಬಿಜೆಪಿ ನಿರೀಕ್ಷಿಸಿದ್ದ ಜನವಿಭಾಗ ಇದು. (ಐ.ಎನ್.ಎನ್)

ಮಹಾರಾಷ್ಟ್ರ: ಎನ್.ಸಿ.ಪಿ. ಯಿಂದ ಕೂಡಾ ಬಿಜೆಪಿ-ಶಿವಸೇನೆಗೆ ಲಾಭವಿಲ್ಲ

ಮಹಾರಾಷ್ಟ್ರದಲ್ಲಿ ಕಳೆದ ಲೋಕಸಭಾ ಚುನಾವಣೆಗಳಲ್ಲಿ ಬಿಜೆಪಿ-ಶಿವಸೇನೆ ಕೂಟ ಭಾರಿ ಹೊಡೆತ ತಿಂದಿತ್ತು. ಸುದ್ದಿಮಂತ್ರಿ, ಈಗ ಹೊಲಸು ಬಾಯಿಯ ಮಂತ್ರಿಯೆಂದು ಕುಖ್ಯಾತರಾಗಿರುವ ಪ್ರಮೋದ್ ಮಹಾಜನ್ ಸೋತು ಹಿಂಬಾಗಿಲಿನಿಂದ ರಾಜ್ಯಸಭೆಯ ಮೂಲಕ ಬಂದು ಮಂತ್ರಿಯಾದದ್ದು ನಿಮಗೆ ನೆನಪಿರಬಹುದು. ಆದರೆ ಈ ಬಾರಿ ಶರದ್ ಪವಾರ್ ವಿದೇಶಿ ಹೆಸರಲ್ಲಿ ಕಾಂಗ್ರೆಸ್ಸನ್ನು ಒಡೆದದ್ದು ಎನ್.ಸಿ.ಪಿ. ರಚಿಸಿರುವ ಕೋಮುವಾದಿ ಕೂಟಕ್ಕೆ ಭಾರೀ ಸಂತೋಷವಾಗಿತ್ತು. ಕೋಮುವಾದ-ವಿರೋಧಿ ಮತಗಳು ಒಡೆದು ತಮ್ಮಸ್ಥಿತಿ ಸುಧಾರಿಸಬಹುದು ಎಂಬುದು ಅವರ ನಿರೀಕ್ಷೆ. ಇದೇ ನಿರೀಕ್ಷೆಯಿಂದ ವಿಧಾನಸಭಾ ಚುನಾವಣೆಗಳನ್ನು ಜತೆಗೇ ನಡೆಸಲು ಅವರು ನಿರ್ಧರಿಸಿದರು. ಪತ್ರಿಕಾ ಭವಿಷ್ಯಗಳು ಕೂಡಾ ಅವರಿಗೆ ಬಹುಮತದ ಭರವಸೆ ನೀಡಿವೆ. ಆದರೆ ಇಲ್ಲಿಯೂ ವಾಸ್ತವತೆ ಭಿನ್ನವಾಗಿರುವಂತೆ ಕಾಣುತ್ತಿದೆ. ಈಗ ಬಿಜೆಪಿ-ಶಿವಸೇನೆ ಮುಖಂಡರು ಶರದ್ ಪವಾರರನ್ನು ಹೀಗಳೆಯುವ ರೀತಿ ನೋಡಿದರೆ ಅವರ ಹತಾಶೆ ಮಿತಿ ಮೀರುತ್ತಿರುವಂತೆ ಕಾಣುತ್ತದೆ. ಪ್ರಮೋದ್ ಮಹಾಜನ್ ಮಹಾರಾಷ್ಟ್ರದಲ್ಲಿ ಪ್ರಚಾರ ಮಾಡುತ್ತಿರುವಾಗಲೇ ಒಂದಲ್ಲ ಎರಡು ಬಾರಿ ಅಸಭ್ಯ ಮಾತುಗಳನ್ನಾಡಿ ಇಡೀ ದೇಶದಲ್ಲಿ ವಿಶೇಷವಾಗಿ ಮಹಿಳೆಯರ ಕೋಪಕ್ಕೆ ತುತ್ತಾಗಿದ್ದಾರೆ.

ಹರ್ಯಾಣ: ಮತ್ತೆ ಸಂದರ್ಭಸಾಧಕ ರಾಜಕೀಯ

ಬನ್ಸೀಲಾಲರ ಹರ್ಯಾಣ ವಿಕಾಸ್ ಪಾರ್ಟಿಯ ಜತೆಗೆ ಮೈತ್ರಿಮಾಡಿಕೊಂಡು ಅಧಿಕಾರ ಹಂಚಿಕೊಂಡ ಬಿಜೆಪಿ ಈಗ ಅವರನ್ನು ಕೈಬಿಟ್ಟು ಚೌತಾಲರವರ ಐಎನ್‌ಎಲ್‌ಡಿ ಜತೆ ಕೈಮಿಲಾಯಿಸಿದ್ದಾರೆ. ಆದರೂ ಬನ್ಸಿಲಾಲ್ ಜೊತೆಗೂಡಿ ನಡೆಸಿದ ಸರಕಾರ ದುಷ್ಕೃತ್ಯಗಳಿಗೆ ಉತ್ತರ ನೀಡದೇ ಇರಲು ಜನ ಒಪ್ಪುತ್ತಿಲ್ಲ. ಮಂಡಿಹಾಲಿಯಲ್ಲಿ ರೈತರ ಮೇಲೆ ಹಲ್ಲೆ, ತೋಕಾಂನಲ್ಲಿ ರೈತರ ಮೇಲೆ ಗೋಲೀಬಾರು ನಡೆಸಿದ ಸರಕಾರದಲ್ಲಿ ಬಿಜೆಪಿಯೂ ಶಾಮೀಲಾಗಿತ್ತು, ವಿದ್ಯುತ್ತನ್ನು ಖಾಸಗೀಕರಿಸಿ ಜನಗಳ ಹೊರೆ ಹೆಚ್ಚಿಸಿದ ಧೋರಣೆಯಲ್ಲಿ ಬಿಜೆಪಿಯೂ ಶಾಮೀಲಾಗಿತ್ತು. ಆದರೆ ಆ ಸರಕಾರವನ್ನು ಉರುಳಿಸಿ ಚೌತಾಲರ ಐಎನ್‌ಎಲ್‌ಡಿ ಸರಕಾರಕ್ಕೆ ಸದ್ಯಕ್ಕೆ ಹೊರಗಿನಿಂದ ಬೆಂಬಲ ನೀಡುತ್ತಿರುವ ಬಿಜೆಪಿಗೆ ತನ್ನ ಮುಖದ ಮೇಲಿನ ಕಳಂಕವನ್ನು ಒರೆಸಿಹಾಕಲಾಗುತ್ತಿಲ್ಲ.

ಸಾಲ ಷರತ್ತಿಗೆ ತಿರಸ್ಕಾರ

ವಿಶ್ವಬ್ಯಾಂಕ್‌ಗೇ ಸಡ್ಡು ಹೊಡೆದ ಪ. ಬಂಗಾಳ ಸರಕಾರ

ಇಡೀ ಜಗತ್ತಿನ, ವಿಶೇಷವಾಗಿ ಅಭಿವೃದ್ಧಿ ಹೊಂದುತ್ತಿರುವ ಬಡದೇಶಗಳ ಆರ್ಥಿಕ ವ್ಯವಸ್ಥೆಯನ್ನು ತನ್ನ ಕಪಿಮುಷ್ಟಿಯಲ್ಲಿ ಇಟ್ಟುಕೊಳ್ಳಲು ಎಲ್ಲ ರೀತಿಯ ಕುಟಿಲೋಪಾಯಗಳನ್ನು ಮಾಡುತ್ತಿರುವ ಎರಡು ಸಂಸ್ಥೆಗಳು ವಿಶ್ವ ಬ್ಯಾಂಕ್ ಮತ್ತು ಅಂತರಾಷ್ಟ್ರೀಯ ಹಣಕಾಸು ನಿಧಿ (ಐ.ಎಂ.ಎಫ್). ಇವೆರಡೂ ಸಾಮ್ರಾಜ್ಯಶಾಹಿಗಳ ಹಿಡಿತದಲ್ಲಿವೆ.

ಈ ಎರಡು ಸಂಸ್ಥೆಗಳ ಪೈಕಿ ಒಂದಾದ ವಿಶ್ವಬ್ಯಾಂಕ್ ಯಾವುದೇ ಒಂದು ದೇಶದಿಂದ, ಅದರಲ್ಲೂ ಒಂದು ರಾಜ್ಯ ಸರಕಾರದಿಂದ ಮಂಗಳಾರತಿ ಮಾಡಿಸಿಕೊಳ್ಳುವುದು ಸಾಮಾನ್ಯ ವಿಚಾರವೇನೂ ಅಲ್ಲ. ಬಂಡವಾಳಶಾಹಿಗಳು, ಸಾಮ್ರಾಜ್ಯಶಾಹಿಗಳಿಗೆ ಅನುಕೂಲ ಮಾಡಿಕೊಡಲು ಹೊರಟಿರುವ ಈ ವಿಶ್ವಬ್ಯಾಂಕ್‌ನ ಷರತ್ತುಗಳನ್ನು ಸಾರಾಸಗಟಾಗಿ ತಿರಸ್ಕರಿಸಿ ಅದಕ್ಕೆ ಅವಮಾನ ಮಾಡಿದ ರಾಜ್ಯ ಸರಕಾರ ಬೇರಾವುದೂ ಅಲ್ಲ. ಭಾರತದ ಎಡ ಪ್ರಜಾಸತ್ತಾತ್ಮಕ ಆಂದೋಲನದ ಕಾವಲು ಬುರುಜು ಎಂದೇ ಪ್ರಸಿದ್ಧವಾದ ಪಶ್ಚಿಮ ಬಂಗಾಳದ ಎಡರಂಗ ಸರಕಾರ. 2300 ಕೋಟಿ ರೂಪಾಯಿ ಸಾಲದ ಭಾಗವನ್ನು ಬಿಡುಗಡೆ ಮಾಡಲು ವಿಶ್ವಬ್ಯಾಂಕ್ ಅಧಿಕಾರಿಗಳು ಎಡರಂಗ ಸರಕಾರದ ಮೇಲೆ ಷರತ್ತನ್ನು ಹೇರಬಯಸಿದರು. ರಾಜ್ಯದ ಆರ್ಥಿಕತೆಯ ನಿರ್ವಹಣೆಯ ಬಗ್ಗೆ ಪೂರ್ಣವಾಗಿ ಅಧ್ಯಯನ ಮಾಡಲು ತನಗೆ ಅವಕಾಶ ಕೊಡಬೇಕೆಂಬುದೇ ಆ ಷರತ್ತಾಗಿತ್ತು. ಮುಖ್ಯಮಂತ್ರಿ ಜ್ಯೋತಿ ಬಸು ಅದನ್ನು ಹಿಂದು ಮುಂದು ನೋಡದೆ ತಿರಸ್ಕರಿಸಿಬಿಟ್ಟರು.

ಸಾಲದ ಭಾಗದ ಬಿಡುಗಡೆಗಾಗಿ ವಿಧಿಸಲಾಗುವ ಈ ಕಾನೂನುಬಾಹಿರ ಷರತ್ತನ್ನು ಒಪ್ಪಲು ಸಾಧ್ಯವೇ ಇಲ್ಲ ಎಂದು ಬಸು ಸ್ಪಷ್ಟಪಡಿಸಿದರು. ಈ ವಿಚಾರದಲ್ಲಿ ರಾಜಿಯೇ ಇಲ್ಲ ಎಂದರು.

ವಿಶ್ವಬ್ಯಾಂಕ್‌ನ ಇಂಥ ಷರತ್ತು, ಯಾವುದೇ ಸರಕಾರವಿರಲಿ, (ರಾಜ್ಯ ಅಥವಾ ಕೇಂದ್ರ) ಅವುಗಳ ಸಾರ್ವಭೌಮತೆಯ ಮೇಲಿನ ಆಕ್ರಮಣವಾಗುತ್ತದೆ ಎಂದು ಕಾ. ಬಸು ಹೇಳುತ್ತಾರೆ. 'ಎಲ್ಲ ಮುಂಗಡಪತ್ರಗಳ ಕಾಗದಪತ್ರಗಳನ್ನು ನೋಡಲು ಹಾಗೂ ರಾಜ್ಯದ ಹಣಕಾಸು ಖಾತೆ ಪ್ರತಿವರ್ಷ ಪ್ರಕಟಿಸುವ ಆರ್ಥಿಕ ಸಮೀಕ್ಷೆಗಳನ್ನು ಪರಿಶೀಲಿಸಲು ಅವರಿಗೆ (ವಿಶ್ವಬ್ಯಾಂಕ್) ಸ್ವಾಗತವಿದೆ' ಎನ್ನುತ್ತಾರೆ ಬಸು. ಆದರೆ, ಅವರ ನಿಬಂಧನೆ ಭಾರತದ ಸಂವಿಧಾನಕ್ಕೆ ವಿರುದ್ಧವಾದುದು ಎಂದು ಮುಖ್ಯಮಂತ್ರಿ ಅಭಿಪ್ರಾಯಪಟ್ಟಿದ್ದಾರೆ.

ಎಲ್ಲಾ ವಿಶ್ವಬ್ಯಾಂಕ್ ಜತೆ ಸಾಲದ ಸಂಬಂಧ ಸಮಾಲೋಚನೆ ಮಾಡುವಾಗ ವಿಶ್ವಬ್ಯಾಂಕ್ ಯಾವತ್ತೂ ಇಂಥ ಅಸಂಬದ್ಧವಾದ ಷರತ್ತನ್ನು ಮಂಡಿಸಿರಲಿಲ್ಲ ಎಂಬುದನ್ನು ಅವರು ನೆನಪಿಸಿದ್ದಾರೆ.

ರಾಜ್ಯದಲ್ಲಿ ಈಗ ಒಂದು ಯೋಜನೆ ಜಾರಿಯಲ್ಲಿದೆ. ಶೇಕಡ 70ರಷ್ಟು ಹಣ ವಿಶ್ವಬ್ಯಾಂಕಿನಿಂದ ಬರುತ್ತದೆ. ಉಳಿದ ಶೇ. 30ನ್ನು ರಾಜ್ಯ ಸರಕಾರ ಒದಗಿಸುತ್ತದೆ. ಸಾಲ ಬಿಡುಗಡೆ ಮಾಡಲು ವಿಶ್ವಬ್ಯಾಂಕ್ ಇಂಥ ಅಸಂಬದ್ಧ ಷರತ್ತು ಮಂಡಿಸುವ ಮುನ್ನ ಮಾತುಕತೆ ನಡೆಯಿತು. ಯೋಜನೆ ರೂಪಿಸುವುದು ಮತ್ತು ಯೋಜನೆಯ ಅನುಷ್ಠಾನಗಳ ವಿಕೇಂದ್ರಿಕರಣವುಳ್ಳ ಚುನಾಯಿತ ಪಂಚಾಯತಿ ವ್ಯವಸ್ಥೆ ಪಶ್ಚಿಮ ಬಂಗಾಳದಲ್ಲಿ ಅಭಿವೃದ್ಧಿಯ ಯಂತ್ರವಾಗಿದೆ ಎಂದು ಚರ್ಚೆಯ ವೇಳೆ ರಾಜ್ಯ ಸರಕಾರ ವಾದಿಸಿತು. ಆರಂಭದಲ್ಲಿ ಸ್ವಲ್ಪ ಹಿಂಜರಿದರೂ ವಿಶ್ವಬ್ಯಾಂಕ್ ಅಧಿಕಾರಿಗಳು ರಾಜ್ಯದ ವಾದಗಳನ್ನು ಒಪ್ಪಿಕೊಂಡರು.

ಏನಿದ್ದರೂ ಇದು ವಿಶ್ವಬ್ಯಾಂಕ್‌ಗೆ ಸಾಧ್ಯವಾಗಲಿಲ್ಲ ಎಂಬುದು ಸ್ಪಷ್ಟವಿತ್ತು. ವಿಶ್ವಬ್ಯಾಂಕ್ ಸಾಲಮಂಜೂರು ಮಾಡಲಿರುವ ಸಾರ್ವಜನಿಕ ಆರೋಗ್ಯ ಕ್ಷೇತ್ರದಲ್ಲಿ ಪಂಚಾಯತಿಗಳ ಪಾತ್ರವನ್ನು ಸಂವಿಧಾನದ 11ನೇ ವಿಧಿ ಸ್ಪಷ್ಟವಾಗಿ ಗುರುತಿಸಿದೆ ಎಂಬುದನ್ನು ಈ ಬಾರಿ ಇನ್ನಷ್ಟು ಸ್ಫುಟವಾಗಿ ಗಮನಕ್ಕೆ ತಂದರೂ ಅಧಿಕಾರಿಗಳು ಈ ತರ್ಕವನ್ನೇ ಮುಂದುವರಿಸಿದರು. ಸಾಲ ಮಂಜೂರಾತಿಯನ್ನು ಪರಿಶೀಲಿಸಬೇಕಾದರೆ "ಸಮೀಕ್ಷೆ ಮೂಲಕ ರಾಜ್ಯದ ಆರ್ಥಿಕತೆ ನಿರ್ವಹಣೆಯ ಅನುದಾನರಹಿತ ಪರಿಶೀಲನೆ ಅಗತ್ಯ ಎಂದು ಅಧಿಕಾರಿಗಳು ವಾದಿಸಿದರು.

ಇನ್ನೊಂದು ಕತೆ

ಬಹುಶಃ ಈ ರೀತಿ ಬಹಿರಂಗಕ್ಕೆ ಬಂದ ಕತೆಯ ಹಿಂದೆ ಇನ್ನೊಂದು ಕತೆ ಇರುವುದು ಯಾರಿಗೂ ಗೊತ್ತಿರಲಿಕ್ಕಿಲ್ಲ. ವಿಶ್ವ ಬ್ಯಾಂಕ್, ಹಾಗೆ ನೋಡಿದರೆ ಜಾಗತಿಕ ಹಣಕಾಸು ರಂಗದ ಇನ್ನೊಂದು ರಾಕ್ಷಸೀ ಸಂಸ್ಥೆ ಐ.ಎಂ.ಎಫ್. ಅಭಿವೃದ್ಧಿ ಕಾರ್ಯದಲ್ಲಿ ಜನತೆಯ ಪಾಲ್ಗೊಳ್ಳುವಿಕೆಯನ್ನು ಯಾವತ್ತೂ ಇಷ್ಟಪಡುವುದಿಲ್ಲ. ಅಭಿವೃದ್ಧಿ ಕಾರ್ಯದಲ್ಲಿ ಜನತೆಯ ಭಾಗವಹಿಸುವಿಕೆ ಪ್ರಕ್ರಿಯೆಯನ್ನು ಪಶ್ಚಿಮ ಬಂಗಾಳದಲ್ಲಿ ಸಂಘಟಿಸಲಾಗಿದೆ. ಚುನಾಯಿತ ಪಂಚಾಯತಿಗಳ ಮೂಲಕ ನಡೆಸಲಾಗುವ ಈ ಅಭಿವೃದ್ಧಿ ಕಾರ್ಯದಲ್ಲಿ 'ದೋಷ'ವನ್ನು ಕಂಡು ಹಿಡಿಯಲು ಅಧಿಕಾರ ಶಾಹಿಯ ಒಂದು ವರ್ಗ ಯಾವಾಗಲೂ ತುದಿಗಾಲ ಮೇಲೆ ನಿಂತಿರುತ್ತದೆ.!

ಈಗ ಚುನಾವಣೆ ಹತ್ತಿರ ಬಂದಿರುವುದರಿಂದ ಇಂಥ ಒಂದು ಮಹತ್ವದ್ದೇ ಅಲ್ಲದ ವಿಷಯವನ್ನು ಕೆದಕಿ ಎಡರಂಗ ಸರಕಾರಕ್ಕೆ ಮಸಿಬಳಿಯಲು ಸ್ಥಾಪಿತ ಹಿತಾಸಕ್ತಿಗಳು ಪ್ರಯತ್ನಿಸುತ್ತಿವೆ.

ರಾಜ್ಯ ಸರಕಾರದ ಅಭಿವೃದ್ಧಿಮಾರ್ಗವನ್ನು ಯಾವಾಗಲೂ ವಿರೋಧಿಸುವ ಕಲ್ಕತ್ತದ ಒಂದು ದೈನಿಕ ಕೂಡ ಈ ಬಾರಿ ವಿಶ್ವಬ್ಯಾಂಕ್ ಷರತ್ತನ್ನು ತಿರಸ್ಕರಿಸಿದ ರಾಜ್ಯ ಸರಕಾಡದ ಕ್ರಮವನ್ನು 'ಸರಕಾರ ಜನತೆಯ ಸ್ವಾಭಿಮಾನವನ್ನು ಕಾಪಾಡಿದೆ' ಎಂದು ಶೀರ್ಷಿಕೆಯಡಿ ಪ್ರಕಟಿಸಿತು. ದುರದೃಷ್ಟವಶಾತ್ ಆ ಪತ್ರಿಕೆಯ ಕಾರ್ಯನಿರ್ವಾಹಕ ಮುಖಂಡರು ಕುದುರೆಯ ಮುಂದೆ ಗಾಡಿ ಕಟ್ಟುತ್ತಿರುವಂತೆ ಕಾಣುತ್ತದೆ. ಬಂಗಾಳದ ಜನತೆಯ ಸ್ವಾಭಿಮಾನ ಕಳೆದೆರಡು ದಶಕಗಳಲ್ಲಿ ಭಾರೀ ಬದಲಾವಣೆ ಹೊಂದಿದೆ. ರಾಜ್ಯದ ಬಡವರು ಹಾಗೂ ತುಳಿತಕ್ಕೊಳಗಾದವರು ಯಾರೋ ಸಾಹೇಬರು ಹೇಳಿದ್ದನ್ನು ಕೇಳಿ ತಲೆಯಾಡಿಸುವ ಸ್ಥಿತಿ ಈಗಿಲ್ಲ. ಅಥವಾ ಅವರು ಏನು ಮಾಡಬೇಕು ಅಥವಾ ಮಾಡಬಾರದು ಎಂದು ಹೇಳಬೇಕಾದ ಸನ್ನಿವೇಶವೇನೂ ಇಲ್ಲ. ಅವರು ಜಾಗೃತರಾಗಿದ್ದಾರೆ.

ಇಷ್ಟು ಮಾತ್ರವೇ ಅಲ್ಲದೆ, ಕಲ್ಕತ್ತ ಪತ್ರಿಕಾ ಮಾಧ್ಯಮದ ಹಿರಿಯ ತಲೆಗಳು ನಂಬಿಸಲು ಹೊರಟಿರುವಂತೆ ಸಾಲದ ತಿರಸ್ಕಾರ ಸಾಗಬೇಕಾಗಿರುವ ಪಥದ ಅಂತ್ಯವೇನೂ ಅಲ್ಲ. ಯೋಜನೆಗಳು, ಮಧ್ಯದಲ್ಲೇ ಸ್ಥಗಿತವಾಗಿವೆ. ಮುಂದುವರಿದುಕೊಂಡು ಹೋಗುವುದನ್ನು ಖಾತರಿಪಡಿಸುವ ಸಲುವಾಗಿ ಪಶ್ಚಿಮ ಬಂಗಾಳ ಹಣಕಾಸು ನಿಗಮ, ಹುಡ್ಕೊ ಮತ್ತು ಎಲ್.ಐ.ಸಿ. ಮತ್ತಿತರ ಹಣಕಾಸು ಸಂಸ್ಥೆಗಳ ಜತೆ ಆಗಲೇ ಸಮಾಲೋಚನೆ ಆರಂಭಿಸಲಾಗಿದೆ ಎಂದು ಮುಖ್ಯಮಂತ್ರಿ ಜ್ಯೋತಿ ಬಸು ಬಹಿರಂಗಪಡಿಸಿದ್ದಾರೆ.

ಸಾಲ ಮರುಪಾವತಿ ಮಾಡುವ ಸಾಮರ್ಥ್ಯದ ಆಧಾರದ ಮೇಲೆ ಸಾಲನೀಡಿಕೆಗೆ ಪಶ್ಚಿಮ ಬಂಗಾಳದ ಬದಲು ಆಂಧ್ರಪ್ರದೇಶವನ್ನು ಆಯ್ದುಕೊಳ್ಳಲಾಗಿದೆ ಎಂದು ವಿಶ್ವಬ್ಯಾಂಕ್ ಹೇಳಿರುವುದು ಸರ್ವಥಾ ಅಸಮರ್ಥನೀಯ. ಯಾಕೆಂದರೆ ಇತ್ತೀಚಿನ ದಿನಗಳಲ್ಲಿ ಪ. ಬಂಗಾಳ ಸರಕಾರ ಕೇಂದ್ರದಿಂದ ಓವರ್ ಡ್ರಾಫ್ಟ್ ಪಡೆದೇ ಇಲ್ಲ. ಇದಕ್ಕೆ ತದ್ವಿರುದ್ಧವಾಗಿ ಅತಿ ಹೆಚ್ಚು ಮೊತ್ತದ ಓವರ್ ಡ್ರಾಫ್ಟ್ ಪಡೆದ ರಾಜ್ಯಗಳಲ್ಲಿ ಆಂಧ್ರಪ್ರದೇಶ ಮೊದಲ ರ್‍ಯಾಂಕ್ ಪಡೆದಿದೆ ಎನ್ನುವುದು ಗಮನಾರ್ಹ.

1947 ನವೆಂಬರ್ 21ರಂದು ವಿಧಾನಸಭೆಯಲ್ಲಿ ಮುಖ್ಯಮಂತ್ರಿ ಒಂದು ಗೊತ್ತುವಳಿಯನ್ನು ಮಂಡಿಸಿದರು.

'ಪಶ್ಚಿಮ ಬಂಗಾಳ ಸರಕಾರ ಮತ್ತು ವಿಧಾನಸಭೆ ತನ್ನ ಉದ್ಘಾಟನೆ ಅಧಿವೇಶನದ ಸಂದರ್ಭದಲ್ಲಿ ರಾಜ್ಯದ ಎಲ್ಲ ನಾಗರೀಕರನ್ನು ಅಭಿನಂದಿಸುತ್ತದೆ ಹಾಗೂ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಪ್ರಾಣಾರ್ಪಣೆ ಮಾಡಿದ ಅಥವಾ ಕಷ್ಟ ಅನುಭವಿಸಿದ ಎಲ್ಲರಿಗೂ ಗೌರವಗಳನ್ನು ಸಲ್ಲಿಸುತ್ತದೆ.'

ಈ ಗೊತ್ತುವಳಿ ಒಮ್ಮತದಿಂದ ಸ್ವೀಕಾರವಾಯಿತು ಅದನ್ನು ಬೆಂಬಲಿಸಿ ನಾವೆಲ್ಲರೂ ಎದ್ದು ನಿಂತೆವು.

ಅಧಿವೇಶನದ ಮೊದಲ ದಿನವೇ ಕಲ್ಕತ್ತದ ಎಸ್ಪ್ಲೆನೇಡ್ ಈಸ್ಟ್‌ನಲ್ಲಿ ಜಮಾಯಿಸಿದ್ದ 25,000 ದಣಿದಿದ್ದ ವಿದ್ಯಾರ್ಥಿಗಳು ಮತ್ತು ರೈತರನ್ನು ಚದುರಿಸಲು ರಾಜ್ಯದ ಪೊಲೀಸರು ಲಾಠಿ ಪ್ರಹಾರ ಮಾಡಿದ್ದಲ್ಲದೆ ಅಶ್ರುವಾಯು ಶೆಲ್ ಸಿಡಿಸಿದ್ದು ನನಗೆ ಇನ್ನು ಚೆನ್ನಾಗಿ ನೆನಪಿದೆ.

"ನಮ್ಮನ್ನು ಅಭಿನಂದಿಸಲಿಕ್ಕಾಗಿ ಅಸಂಖ್ಯಾತ ರೈತರು ರಾಜ್ಯದ ನಾನಾ ಭಾಗಗಳಿಂದ ಬರುತ್ತಿದ್ದಾರೆ. ದುರದೃಷ್ಟವಶಾತ್ ಪೊಲೀಸರು ಅವರನ್ನು ಯಾಕೆ ಹೀಗೆ ಮಾಡಿದರು ಎಂಬ ಬಗ್ಗೆ ಮುಖ್ಯಮಂತ್ರಿ ಹೇಳಿಕೆ ನೀಡಬೇಕು" ಎಂದು ಸ್ಪೀಕರ್‌ನ ಆಯ್ಕೆಯ ಮುನ್ನ ನಾನು ಹೇಳಿದೆ.

ವಾಸ್ತವವಾಗಿ ರೈತರನ್ನು ಹೊಡೆದು ಅಶ್ರುವಾಯು ಪ್ರಯೋಗ ಮಾಡಿದ್ದ ಸುದ್ದಿ ನಮಗೆ ಆಗ ತಲುಪಿರಲಿಲ್ಲ. ಬಂಗಾಳ ಪ್ರಾಂತೀಯ ಕೃಷಿಕ ಸಭಾ ರೈತರನ್ನು ಕರೆತಂದಿತ್ತು. ಮುಖ್ಯಮಂತ್ರಿ ಹೇಳಿಕೆ ಏನೇನೂ ತೃಪ್ತಿದಾಯಕ ಆಗಿರಲಿಲ್ಲ. ನಾನು ಎಸ್ಪ್ಲೆನೇಡ್‌ವರೆಗೆ ನಡೆದುಕೊಂಡೇ ಹೋದೆ. ಅಲ್ಲಿನ ದೃಶ್ಯಗಳನ್ನು ನೋಡಿ ನಾನು ದಿಗ್ಭ್ರಾಂತನಾದೆ.

ಪೊಲೀಸರು ಸಾವಿರಾರು ರೈತರ ಮೇಲೆ ಯದ್ವಾತದ್ವಾ ಲಾಠಿ ಬೀಸುತ್ತಿದ್ದುದನ್ನು ಹಾಗೂ ಅಶ್ರುವಾಯು ಶೆಲ್ ದಾಳಿ ನಡೆಸುತ್ತಿದ್ದುದನ್ನು ಕಣ್ಣಾರೆ ಕಂಡೆ. ಅದೇ ಮೊದಲ ಬಾರಿ ಅಶ್ರುವಾಯುವಿನ ರುಚಿ ಅನುಭವಿಸಿದೆ. ನನ್ನ ಕಣ್ಣುಗಳು ಮತ್ತು ಇಡೀ ಮುಖ ಉರಿಯತೊಡಗಿತು. ಕರವಸ್ತ್ರದಿಂದ ಮುಖವನ್ನು ಒರೆಸಿಕೊಳ್ಳುತ್ತಲೇ ರೈಟರ್ಸ್ ಬಿಲ್ಡಿಂಗ್‌ಗೆ ಹೋದೆ.

ಅಶ್ರುವಾಯು ತಯಾರಿ ಬಗ್ಗೆ ಉಪನ್ಯಾಸ!!

ಶಾಂತಿಯುತ ಜನರ ಮೇಲೆ ಪೊಲೀಸರೇಕೆ ದೌರ್ಜನ್ಯ ನಡೆಸಿದರು ಎಂದು ನಾನು ಮುಖ್ಯಮಂತ್ರಿ ಪ್ರಫುಲ್ಲ ಬಾಬು ಅವರನ್ನು ಕೇಳಿದೆ. ರೈತರನ್ನು ಭೇಟಿಯಾಗಿ ಪರಿಸ್ಥಿತಿಯನ್ನು ವಿವರಿಸುವಂತೆಯೂ ನಾನು ಅವರನ್ನು ಕೋರಿದೆ. ಮುಖ್ಯಮಂತ್ರಿ ರಸಾಯನ ಶಾಸ್ತ್ರದ (ಕೆಮಿಸ್ಟ್ರಿ) ವಿದ್ಯಾರ್ಥಿ ಆಗಿದ್ದರು. ಇದೇ ಅವಕಾಶ ಎಂದು ಭಾವಿಸಿದ ಅವರು ಅಶ್ರುವಾಯುವನ್ನು ತಯಾರಿಸುವ ಬಗ್ಗೆ ನನಗೆ ಉಪನ್ಯಾಸವನ್ನೇ ನೀಡಿದರು!

ಡಮ್‌ಡಮ್‌ಗೆ ಹೋಗುವುದರಿಂದ ತಮಗೆ ಎಸ್ಪ್ಲೆನೇಡ್‌ಗೆ ಹೋಗಲು ಆಗುವುದಿಲ್ಲ ಎಂದೂ ಪ್ರಫುಲ್ಲ ಹೇಳಿದರು. ಸಚಿವ ಕಾಳಿಪಾದ ಮುಖರ್ಜಿಯವರನ್ನು ಕಳಿಸಿದರು. ಅವರ ಹಾದಿಯಲ್ಲಿ ನಾವು ಎಸ್ಪ್ಲೆನೇಡ್ ಕಡೆ ಹೊರಟೆವು. ಪರಿಸ್ಥಿತಿ ತುಂಬಾ ಉದ್ವಿಗ್ನವಾಗಿತ್ತು. ಕಾಳಿಪಾದರನ್ನು ಸುತ್ತುವರಿದ ಜನರು ಧಿಕ್ಕಾರದ ಘೋಷಣೆಗಳನ್ನು ಕೂಗಿದರು.

ಪರಿಸ್ಥಿತಿ ಕೈಮೀರಬಹುದು ಎಂಬುದನ್ನು ಅರಿತ ನಾನು ಕಾಳಿಪಾದರಿಗೆ ಮರಳುವಂತೆ ಸೂಚಿಸಿದೆ. ಅವರು ವಾಪಸ್ ಹೋದರು. ನೆರೆದಿದ್ದ ಜನರನ್ನು ಗುಂಪು ಗುಂಪಾಗಿ ಕರೆದು ನಾನು ಮಾತನಾಡಿಸಿದೆ. ಸ್ವಲ್ಪ ಹೊತ್ತಿನ ನಂತರ ಅವರೆಲ್ಲರೂ ವಾಪಸ್ ಹೋದರು.

ಈ ಘಟನೆಯ ಬಗ್ಗೆ ನಿಲುವಳಿ ಗೊತ್ತುವಳಿ ಮಂಡಿಸಬೇಕೆಂಬ ನನ್ನ ಉದ್ದೇಶ ಕೋರಂ ಅಭಾವದಿಂದಾಗಿ ಈಡೇರಲಿಲ್ಲ.

ಕರಾಳ ಕಾನೂನು

ಪಶ್ಚಿಮ ಬಂಗಾಳ ವಿಶೇಷ ಅಧಿಕಾರಗಳ ಕಾನೂನು ಇದು ಪ್ರಫುಲ್ಲ ಘೋಷ್ ಮುಖ್ಯಮಂತ್ರಿಯಾಗಿದ್ದಾಗ ರೂಪಿತವಾದ ಮೊದಲ 'ಕರಾಳ ಕಾನೂನು'. ಇದನ್ನು ಅನಂತರ ಪಶ್ಚಿಮ ಬಂಗಾಳ ಭದ್ರತಾ ಕಾನೂನಿನಲ್ಲಿ ಅಳವಡಿಸಲಾಯಿತು.

ಬ್ರಿಟಿಷ್ ಆಡಳಿತವಿದ್ದಾಗಲೇ ಮುಸ್ಲಿಂ ಲೀಗ್ ಸರಕಾರ ವಿಶೇಷಾಧಿಕಾರಗಳ ಸುಗ್ರೀವಾಜ್ಞೆಯನ್ನು ಹೊರಡಿಸಿತ್ತು. ಕೋಮು ಸಂಘರ್ಷವನ್ನು ಮುಚ್ಚಿಹಾಕುವುದು ಈ ಕಾನೂನಿನ ಉದ್ದೇಶವಾಗಿದ್ದರೂ ವಾಸ್ತವವಾಗಿ ಪ್ರತಿಪಕ್ಷಗಳ ವಿರುದ್ಧ ಅದನ್ನು ಬಳಸಲಾಯಿತು. ತನ್ನ ಪೂರ್ವಾಧಿಕಾರಿ ಮಾಡುತ್ತಿದ್ದುದನ್ನೇ ಘೋಷ್ ಕೂಡ ಮಾಡಿದರು.

ಹೋದೆಯಾ ಪಿಶಾಚಿ ಅಂದರೆ ಬಂದೆ ಗವಾಕ್ಷಿಯೊಳಗೆ ಅಂದಂತಿತ್ತು ಈ ಕರಾಳ ಕಾಯಿದೆ.

1947ರ ನವೆಂಬರ್ 27 ರಂದು ವಿಧೇಯಕವನ್ನು ಅಸೆಂಬ್ಲಿಯಲ್ಲಿ ಮಂಡಿಸಲಾಯಿತು. ಮಸೂದೆಯನ್ನು ವಾಪಸ್ ಪಡೆಯಬೇಕು ಇಲ್ಲವೇ ಈ ವಿಚಾರದಲ್ಲಿ ಸಾರ್ವಜನಿಕರ ಅಭಿಪ್ರಾಯವನ್ನು ಪಡೆಯಬೇಕು ಎಂದು ನಾನು ವಾದಿಸಿದೆ.

"ಸಾರ್ವಜನಿಕ ಚಳುವಳಿಗಳನ್ನು ತಡೆಯಲು ಆಡಳಿತಶಾಹಿ ಮತ್ತು ಪೊಲೀಸರಿಗೆ ಈ ಕರಾಳ ಮಸೂದೆ ಅನಿಯಂತ್ರಿತ ಅಧಿಕಾರಗಳನ್ನು ನೀಡುತ್ತದೆ. ಸುಹ್ರವರ್ದಿ ಸರಕಾರ ಕೂಡ ಈ ಉದ್ದೇಶಕ್ಕಾಗಿಯೇ ಸುಗ್ರೀವಾಜ್ಞೆಯನ್ನು ಬಳಸಿಕೊಂಡಿತ್ತು" ಎಂದು ನಾನು ಹೇಳಿದೆ.

ಒಬ್ಬ ವ್ಯಕ್ತಿ ಅಥವಾ ಪಕ್ಷ ರಾಜ್ಯದ ಭದ್ರತೆಗೆ ವಿರುದ್ಧವಾಗಿ ಕೆಲಸ ಮಾಡುತ್ತಿದೆ ಎಂದು ಪೊಲೀಸರು ಭಾವಿಸಿದರೆ ಅಂತವರನ್ನು ಬಂಧಿಸಲು ಸುಗ್ರೀವಾಜ್ಞೆಯಲ್ಲಿ ಅವಕಾಶ ಕಲ್ಪಿಸಲಾಗಿತ್ತು.

1947 ಡಿಸೆಂಬರ್ 8 ರಂದು ಈ ಆದ್ಯಾದೇಶವನ್ನು ಕಾಂಗ್ರೆಸ್ ಸರಕಾರ ಕೂಡ ತಿಳಿಸಿತು. 1944ರ ಸುಗ್ರೀವಾಜ್ಞೆಯ ಸೆಕ್ಷನ್ 18ರ ಅನ್ವಯ ಸೌಮ್ಯೇಂದ್ರನಾಥ್ ಟಾಗೋರ್ ಅವರನ್ನು ವಿಚಾರಣೆಯಿಲ್ಲದೆ ಬಂಧಿಸಿರುವುದಾಗಿ ನನ್ನ ಪ್ರಶ್ನೆಯೊಂದಕ್ಕೆ ಉತ್ತರಿಸಿದ ಡಾ| ಘೋಷ್ ತಿಳಿಸಿದರು. ಟಾಗೋರ್ ವಿರುದ್ಧದ ಆರೋಪಗಳೇನು ಎಂದು ನಾವು ಪ್ರಶ್ನಿಸಿದೆವು.

ಟಾಗೋರ್ ಮತ್ತವರ ಸಂಗಡಿಗರು ರಾಜ್ಯದ ಭದ್ರತಾ ಹಿತಾಸಕ್ತಿಗೆ ಹಾನಿಯಾಗಬಹುದಾದ ಚಟುವಟಿಕೆಗಳಲ್ಲಿ ತೊಡಗಿದ್ದಾರೆಂಬ ಮಾಹಿತಿ ಬಂದಿದೆ ಎಂಬುದು ಮುಖ್ಯಮಂತ್ರಿಯ ಉತ್ತರ.

ಬೇರೆಬೇರೆ ಜಿಲ್ಲೆಗಳಲ್ಲಿ ಈ ಆಧ್ಯಾದೇಶ ಜಾರಿಯಲ್ಲಿದ್ದು ಅನೇಕ ಜನರನ್ನು ಬಂಧಿಸಲಾಗಿದೆ ಎಂದು ಅವರು ಹೇಳಿದರು. ಮುಸ್ಲಿಂಲೀಗ್ ಮತ್ತು ಇತರ ಪಕ್ಷಗಳು ವಿರೋಧ ವ್ಯಕ್ತಪಡಿಸಿದರೂ ಘೋಷ್ ಸರಕಾರ ಈ ಸುಗ್ರೀವಾಜ್ಞೆಯನ್ನು ವಿಧೇಯಕವನ್ನಾಗಿ ಪರಿವರ್ತಿಸಿತು. ಅದನ್ನು ಆಯ್ಕೆ ಸಮಿತಿಗೆ ಕಳಿಸಲಾಯಿತು.

ತೇಭಾಗ ಚಳುವಳಿ ವಿರುದ್ಧ

ಸ್ವತಃ ಸುಹ್ರವರ್ದಿ ಈ ಸುಗ್ರೀವಾಜ್ಞೆಯನ್ನು ತೇಭಾಗ ಚಳವಳಿಯ ವಿರುದ್ಧ ಬಳಸಿದ್ದರು ಎನ್ನುವುದು ಒಂದು ಆಸಕ್ತಿದಾಯಕ ಅಂಶವಾಗಿದೆ.

ಹೊಸ ಮಸೂದೆಗೆ ವಿರೋಧವಾಗಿ ರಾಜ್ಯಾದ್ಯಂತ ವ್ಯಾಪಕ ಪ್ರತಿಭಟನೆ ಭುಗಿಲೆದ್ದಿತು. ನಾಗರೀಕರ ಹಕ್ಕುಗಳ ರಕ್ಷಣೆಗಾಗಿ ನಮ್ಮ ಪಕ್ಷದ ಕಾಳಜಿ ಮೇರೆಗೆ ಒಂದು ಸರ್ವಪಕ್ಷ ಸಮಿತಿ ಅಸ್ತಿತ್ವಕ್ಕೆ ಬಂತು.

ಶರತ್ ಚಂದ್ರ ಬೋಸ್, ಅಂದಿನ ಬಂಗಾಳ ಪ್ರಾಂತ ಟ್ರೇಡ್‌ಯೂನಿಯನ್ ಕಾಂಗ್ರೆಸ್ ಅಧ್ಯಕ್ಷ ಮೃಣಾಲ್ ಕಾಂತಿ ಬೋಸ್, ವಕೀಲ ನಿರ್ಮಲ ಚಂದ್ರ ಚಟರ್ಜಿ, ಕಾಂಗ್ರೆಸ್ ನಾಯಕ ಕ್ಷಿತಿಶ್ ಪ್ರಸಾದ್ ಚಟರ್ಜಿ ಇವರಲ್ಲಿ ಸಕ್ರಿಯವಾಗಿ ಪಾಲ್ಗೊಂಡವರಲ್ಲಿ ಸೇರಿದ್ದರು. ನಮ್ಮ ಪಕ್ಷದ ಎಲ್ಲಾ ಮುಖಂಡರು ಇದರಲ್ಲಿ ಮುಖ್ಯಪಾತ್ರ ನಿರ್ವಹಿಸಿದರು.

ಚಳವಳಿ, ದಬ್ಬಾಳಿಕೆಯ ಸರಣಿಯೇ ನಡೆಯಿತು.

(ಮುಂದುವರಿಯುವುದು)

ಕೇರಳದಲ್ಲಿ ಕಾಂಗ್ರೆಸ್-ಬಿಜೆಪಿ ಒಪ್ಪಂದ!

ಕೇರಳದ ಮಾಜಿ ಮುಖ್ಯ ಮಂತ್ರಿ, ಕಾಂಗ್ರೆಸ್‌ನ ರಾಷ್ಟ್ರೀಯ ಮುಖಂಡ ಕೆ.ಕರುಣಾಕರನ್ ಈ ಬಾರಿ ಲೋಕಸಭಾ ಕ್ಷೇತ್ರ ಬದಲಾಯಿಸಿದ್ದಾರೆ. ಅವರು ತಿರುವನಂತಪುರ ಲೋಕಸಭಾ ಕ್ಷೇತ್ರದ ಬದಲು ತ್ರಿಶೂರ್ ಜಿಲ್ಲೆಯ ಮುಕುಂದ ಪುರಂ ಕ್ಷೇತ್ರಕ್ಕೆ ವಲಸೆ ಹೋಗಿದ್ದಾರೆ.

1996 ರ ಲೋಕಸಭಾ ಚುನಾವಣೆಯಲ್ಲಿ ತಿರುವನಂತಪುರ ಕ್ಷೇತ್ರದಿಂದ 15 ಸಾವಿರ ಮತಗಳ ಅಂತರದಿಂದ ಸಿಪಿಐ ಅಭ್ಯರ್ಥಿ ವಿರುದ್ಧ ಕರುಣಾಕರನ್ ಜಯಗಳಿಸಿದ್ದರು. ಬಿಜೆಪಿ ಅಭ್ಯರ್ಥಿ 96 ಸಾವಿರ ಮತಗಳಿಸಿದ್ದರು.

ಮುಕುಂದಪುರ ಕ್ಷೇತ್ರದಲ್ಲಿ ಕಳೆದ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿ ಕೇವಲ 8 ಸಾವಿರ ಮತಗಳ ಅಂತರದಿಂದ ಗೆದ್ದಿದ್ದರು. ಆದರೂ ಕರುಣಾಕರನ್ ಇಲ್ಲಿಂದ ಕಾರಣ ಬಿಜೆಪಿ-ಕಾಂಗ್ರೆಸ್ ನಡುವೆ ನಡೆದಿರುವ ರಹಸ್ಯ ಹಾಗೂ ಅನೈತಿಕ ಒಪ್ಪಂದವೇ ಕಾರಣ.

ತಿರುವನಂತಪುರದಲ್ಲಿ ಬಿಜೆಪಿ ಅಭ್ಯರ್ಥಿ ಜಿ.ರಾಜಗೋಪಾಲ್ ರಿಗೆ ಅನುಕೂಲವಾಗುವಂತೆ ಅಲ್ಲಿ ಕಾಂಗ್ರೆ ಜನಪ್ರಿಯರಿಗೆ ಹಾಗೂ ಮಾಜಿ ಸಂಸದರಿಗೆ ಟಿಕೆಟ್ ನೀಡದೆ ದುರ್ಬಲ ಅಭ್ಯರ್ಥಿಯನ್ನು ಕಣಕ್ಕಿಳಿಸಿದೆ.

ಕಾಂಗ್ರೆ ಋಣ ತೀರಿಸಲು ಬಿಜೆಪಿ ಮುಕುಂದ ಪುರಂ ಕ್ಷೇತ್ರದಲ್ಲಿ ತನ್ನ ಅಭ್ಯರ್ಥಿಯನ್ನು ಕಣಕ್ಕಿಳಿಸದೆ. ಕೇರಳದ ಮತದಾರರು ಎಂದೋ ಮರೆತಿರುವ SRP ಪಕ್ಷದ ದುರ್ಬಲ ಅಭ್ಯರ್ಥಿಗೆ ತನ್ನ ಬೆಂಬಲ ಘೋಷಿಸಿದೆ.

ಕೋಜಿಕೋಡ್ ಕ್ಷೇತ್ರದಲ್ಲಿ ಕೆ.ಕರುಣಾಕರನ್ ಮಗ ಮುರುಳಿಧರ್ ಕಾಂಗ್ರೆ ಅಭ್ಯರ್ಥಿ. ಇಲ್ಲಿಯೂ ಬಿಜೆಪಿ ಕಾಂಗ್ರೆ ನಡುವೆ ಒಪ್ಪಂದ ಏರ್ಪಟ್ಟಿದೆ. ಕೇರಳದ ಯಾವುದೇ ಕ್ಷೇತ್ರದಲ್ಲಿ ಬಿಜೆಪಿ ಗೆಲ್ಲುವ ಸೂಚನೆಯಿಲ್ಲ, ಆದರೆ ಅವರ ಮತಗಳು ಕೆಲವಡೆ ರಹಸ್ಯವಾಗಿ, ಹಲವೆಡೆ ಬಹಿರಂಗವಾಗಿಯೇ ಕಾಂಗ್ರೆಸ್‌ಗೆ ಮಾರಾಟವಾಗಿವೆ.

ಸಿಪಿಐ(ಎಂ) ನ ರಾಜ್ಯ ಸಮಿತಿ ಸದಸ್ಯರು ಹಾಗೂ 'ದೇಶಾಭಿಮಾನಿ' ಕಣ್ಣೂರು ಘಟಕದ ಮ್ಯಾನೇಜರ್ ಕಾಂ. ಜಯರಾಜ್‌ರನ್ನು ಕೇರಳದ ಓಣಂ ಹಬ್ಬದ ದಿನ ಬಿಜೆಪಿ ಮತ್ತು RSS ಗೂಂಡಾಗಳು ಮನೆಗೆ ನುಗ್ಗಿ ಮಾರಕಾಸ್ತ್ರಗಳಿಂದ ಹಲ್ಲೆ ಮಾಡಿ, ಕಾಲು ಕತ್ತರಿಸಿದ್ದಾರೆ. ಈ ಹಲ್ಲೆಯನ್ನು ರಾಜಕೀಯ ಜವಾಬ್ದಾರಿ ಇರುವ ಕಾಂಗ್ರೆಸ್ ಖಂಡನೆ ಮಾಡಲು ತಯಾರಿಲ್ಲ. ಏಕೆಂದರೆ ಕಾಂಗ್ರೆ-ಬಿಜೆಪಿ ನಡುವಿನ ಚುನಾವಣಾ ಅನೈತಿಕ ಒಪ್ಪಂದ.

ಮೊನ್ನೆ ಕಾಂಗ್ರೆ ಆಡಳಿತದ ಒರಿಸ್ಸಾದಲ್ಲಿ ಪಾದ್ರಿಯನ್ನು ಬಿಜೆಪಿ ಮತ್ತು ಸಂಘ ಪರಿವಾರದ ಪ್ರೇರಣೆಯ ಹತ್ಯೆಯನ್ನು ಕಾಂಗ್ರೆಸ್ ಮತ್ತು ಬಿಜೆಪಿ ಪಕ್ಷಗಳು ಖಂಡಿಸಲು ತಯಾರಿಲ್ಲ. ಇದರಿಂದ ಕೇರಳದ ಅಲ್ಪ ಸಂಖ್ಯಾತರು ಕಾಂಗ್ರೆಸ್ ಬಗ್ಗೆ ಆಕ್ರೋಶಗೊಂಡಿದ್ದಾರೆ.

ಎಡ ಪ್ರಜಾಸತ್ತಾತ್ಮಕ ಒಕ್ಕೂಟದಲ್ಲಿ ಒಡಕು ತಂದು ತನ್ನ ಬೇಳೆ ಬೇಯಿಸಿಕೊಳ್ಳಲು RSP ಮತ್ತು ಕಾಂಗ್ರೆಸ್(ಎನ್)ನಲ್ಲಿ ಒಡಕು ತಂದು ಕೆಸರಲ್ಲಿ ಮೀನು ಹಿಡಿಯುವ ವಿಫಲ ಯತ್ನ ನಡೆಸಿತು. 1996 ರ ಚುನಾವಣೆಗಳಿಂದ ಎಲ್‌ಡಿಎಫ್ ಅಭ್ಯರ್ಥಿಗಳು ಉತ್ತಮ ರೀತಿಯಲ್ಲಿ ಜಯಗಳಿಸುತ್ತಿದ್ದಾರೆ.

ಕಳೆದ ಚುನಾವಣೆಯಲ್ಲಿ LDF ಮತ್ತು UDF ತಲಾ ಹತ್ತು ಸ್ಥಾನ ಪಡೆದಿದ್ದವು. ಈ ಚುನಾವಣೆಯಲ್ಲಿ ಬಹು ಪಾಲು ಸ್ಥಾನಗಳನ್ನು LDF ತನ್ನತ್ತ ಸೆಳೆದುಕೊಳ್ಳಲಿದೆ.

LDF ನೇತೃತ್ವದಲ್ಲಿ ರಾಜ್ಯ ಸರ್ಕಾರದ ವಿರುದ್ಧ ಕಾಂಗ್ರೆಸ್- ಬಿಜೆಪಿಯ ಅಖಿಲ ಭಾರತ ಮುಖಂಡರುಗಳು ಇಲ್ಲ ಸಲ್ಲದ ಸುಳ್ಳು ಆರೋಪಗಳನ್ನು ಹೋರಿಸುತ್ತಿದ್ದರೂ ಕೇರಳದ ಮತದಾರರು ಇತ್ತ ಕಿವಿಗೊಡುತ್ತಿಲ್ಲ.

ಸಿಪಿಐ(ಎಂ) ಮುಖಂಡರಾದ ಹರಿಕಿಶನ್ ಸಿಂಗ್ ಸುರ್ಜಿತ್, ತ್ರಿಪುರದ ಮುಖ್ಯಮಂತ್ರಿ ಮಾಣಿಕ್ ಸರ್ಕಾರ್, ಇ.ಕೆ. ನಯನಾರ್, ಅಚ್ಯುತಾನಂದನ್, ಬಾಲನಂದನ್ ಮೊದಲಾದ ಮುಖಂಡರ ಪ್ರಚಾರ ಸಭೆಗಳಿಗೆ ಸೇರುತ್ತಿರುವ ಅಪಾರ ಮತದಾರರೇ ಸಾಕ್ಷಿ. ಹಲವಾರು ವರ್ಷಗಳಿಂದ ಕಾಂಗ್ರೆ ತೆಕ್ಕೆಯಲ್ಲಿದ್ದ ಲೋಕಸಭಾ ಕ್ಷೇತ್ರಗಳಲ್ಲಿ LDF ಅಭ್ಯರ್ಥಿಗಳು ಮುಂದಿದ್ದಾರೆ.

ಬೆಲೆಏರಿಕೆಯನ್ನು ನಿಯಂತ್ರಣದಲ್ಲಿಟ್ಟಿರುವುದು ಕೂಡ ಕೇರಳದ ಬಡ ಹಾಗೂ ಮಧ್ಯಮ ವರ್ಗ LDF ಸರ್ಕಾರದ ಬಗ್ಗೆ ವಿಶ್ವಾಸ ವ್ಯಕ್ತ ಪಡಿಸಿದ್ದಾರೆ.

ಜನತಾ ಯೋಜನಾ ಕಾರ್ಯಕ್ರಮದಿಂದ ಯೋಜನಾ ಪ್ರಕ್ರಿಯೆ ವಿಧಾನಸಭೆಯಿಂದ ಗ್ರಾಮ ಪಂಚಾಯಿತ್ ಗಳವರೆಗೆ ತಲುಪಿರುವುದರಿಂದ ಕೇರಳದ ಜನತೆ LDF ಸರ್ಕಾರದ ಬಗ್ಗೆ ಅಪಾರವಾದ ನಂಬಿಕೆ ಇಟ್ಟಿದೆ.


ಚುನಾವಣೆ ವೇಳೆಯಲ್ಲಿ ಸಿಪಿಐ(ಎಂ) ಕಾರ್ಯಕರ್ತರನ್ನು ಹಲ್ಲೆ- ಹತ್ಯೆ ಮಾಡಿ ಅವರನ್ನು ರೊಚ್ಚಿಗೆಬ್ಬಿಸಿ ರಾಜ್ಯದಲ್ಲಿ ಅಶಾಂತಿ ಉಂಟುಮಾಡಿ ಎಡರಂಗದ ವಿರುದ್ಧ ಜನಾಭಿಪ್ರಾಯ ಮೂಡುವಂತೆ ಮಾಡಿ ಮತ ವಿಭಜನೆ ಮಾಡುವ ಕಾಂಗ್ರೆ-ಬಿಜೆಪಿ ಯತ್ನ ವಿಫಲಗೊಂಡಿದೆ. ಇದೇ ಉದ್ದೇಶದಿಂದ ಕಣ್ಣೂರಿನ ಸಿಪಿಐ(ಎಂ) ಕಾಯಕರ್ತ ಕಾಂ. ದಾಸನ್‌ರನ್ನು ಹತ್ಯೆ ಮಾಡಲಾಯಿತು.

ಸಿಪಿಐ(ಎಂ), ಸಿಪಿಐ, ಆರ್.ಎಸ್.ಪಿ. ಮತ್ತು ಕಾಂಗ್ರೆಸ್(ಎಸ್) ಒಗ್ಗಟ್ಟಾಗಿ ಹುಮ್ಮಸ್ಸಿನಿಂದ ಚುನಾವಣಾ ಪ್ರಚಾರ ಕಾರ್ಯದಲ್ಲಿ ತೊಡಗಿದ್ದಾರೆ.

ಇತ್ತ ಯು.ಡಿ.ಎಫ್. ನಲ್ಲಿ ಟಿಕೆಟ್ ಸಿಗದವರು ಹಾಗೂ ಅವರ ಬೆಂಬಲಿಗರು 'ಭಗ್ನ ಪ್ರೇಮಿ' ಗಳಂತೆ ಹತಾಶರಾಗಿ ತಟಸ್ಥರಾಗಿದ್ದಾರೆ.

ಚುನಾವಣಾ ಸಭೆಯೊಂದನ್ನು ಉದ್ದೇಶಿಸಿ ಮಾತನಾಡುತ್ತಿರುವ ಮುಖ್ಯಮಂತ್ರಿ ಇ.ಕೆ.ನಾಯನಾರ್





ಭಾಗ-13

ದೇಶದ ವಿಭಜನೆ, ಸ್ವಾತಂತ್ರ್ಯದ ನಂತರ ಪಕ್ಷದ ನಾಲ್ಕನೇ ರಾಜ್ಯ ಸಮ್ಮೇಳನ, ಬಹುತೇಕ ವಿರೋಧ ಪಕ್ಷವೆಂಬುದೇ ಇರದ ಹೊಸ ವಿಧಾನಸಭೆಯಬಗ್ಗೆ ಕಳೆದಬಾರಿ ಓದಿದ್ದೀರಿ. ಸ್ವಾತಂತ್ರ್ಯದ ನಂತರ ಹಿಡಿದ ದಾರಿಯ ಮೊದಲ ದಿನಗಳ ನೆನಪು ಇಲ್ಲಿದೆ.

ಗವಾಕ್ಷಿಯೊಳಗೆ ಬಂದ ಪಿಶಾಚಿ!

ಖಾವಿ ಪಡೆಗಳಿಂದ ಅಭಿವ್ಯಕ್ತಿಯ ಮೇಲೆ ಮತ್ತೊಂದು ಹಲ್ಲೆ

ತಾನು ಮತ್ತೆ ಅಧಿಕಾರಕ್ಕೆ ಬರುವುದು ಕನಸಿನ ಮಾತು ಎಂಬುದು ಸ್ಪಷ್ಟವಾಗುತ್ತಿದ್ದ ಹಾಗೆ ಖಾವಿ ಪಡೆಗಳ ಆಸಹನೆ, ಮೇರೆ ಮೀರುತ್ತಿದೆ. ದೇಶದೆಲ್ಲೆಡೆ ತನ್ನ ವಿರೋಧಿಗಳ ಮೇಲೆ, ಅವರ ಅಭಿವ್ಯಕ್ತಿಗಳ ಮೇಲೆ ಅತ್ಯಂತ ಅಸಹ್ಯಕರ ರೀತಿಯಲ್ಲಿ ಖಾವಿಪಡೆಗಳು ದಾಳಿ ನಡೆಸುತ್ತಿವೆ. ಅವರ ಮಾತು, ಕೃತಿ ಎಲ್ಲವೂ ನಾಗರಿಕ ಸಮಾಜ ತಲೆತಗ್ಗಿಸುವ ಮಟ್ಟಕ್ಕೆ ಇಳಿದಿದೆ. ಖಾವಿ ಪಡೆಗಳಾದ ಬಿಜೆಪಿ, ಆರೆಸ್ಸೆಸ್‌ನ ದುರಾಕ್ರಮಣ ಇತ್ತೀಚೆಗೆ ಮೈಸೂರಿನಲ್ಲಿ ಪ್ರಗತಿಪರ ಸಂಘಟನೆಗಳು ಏರ್ಪಡಿಸಿದ್ದ 'ಸಹಮತ್'ನ ಭಿತ್ತಿಚಿತ್ರಗಳ ಪ್ರದರ್ಶನದ ಮೇಲೆ ನಡೆಯಿತು.

ದೆಹಲಿಯ 'ಸಹಮತ್' ಸಂಸ್ಥೆ ಬಿಜೆಪಿಯ 13 ತಿಂಗಳುಗಳ ವಿನಾಶಕಾರಿ ಮತೀಯವಾದಿ ಆಡಳಿತದ ಭಯಾನಕ ಸ್ವರೂಪವನ್ನು ಪ್ರದರ್ಶಿಸುವ 38 ಪೋಸ್ಟರು ಗಳನ್ನು ಹೊರತಂದಿದೆ. ಈ ಪೋಸ್ಟರುಗಳನ್ನು ಈಗ ದೇಶದೆಲ್ಲಡೆ ಪ್ರದರ್ಶಿಸಲಾಗುತ್ತಿದೆ. ಈ ಪೋಸ್ಟರು ಗಳಲ್ಲಿರುವ ತನ್ನ ನಿಜ ಸ್ವರೂಪವನ್ನು ಕಂಡು ಬೆಚ್ಚಿಬಿದ್ದ ಸಂಘ ಪರಿವಾರ-ಬಿಜೆಪಿ ಅದನ್ನು ನೋಡಿ ಸುಮ್ಮನಿರು ವಷ್ಟು ಸಹನಾಶೀಲವೂ ಅಲ್ಲ ಅಥವಾ ಚರ್ಚೆ ಸಂವಾದಗಳ ಮೂಲಕ ಇಂಥ ವಿಚಾರಗಳ ಬಗ್ಗೆ ತನ್ನ ನಿಲುವು ವ್ಯಕ್ತಪಡಿಸ ಬೇಕೆನ್ನುವ ಮೌಲ್ಯವುಳ್ಳದ್ದೂ ಅಲ್ಲ ಹಾಗಾಗಿ ಅದು ಆಕ್ರಮಣದ ದಾರಿಯನ್ನು ಹಿಡಿದಿದೆ.

ಮೈಸೂರಿನಲ್ಲಿ ದಾಳಿ

'ಪ್ರಗತಿಪರ ಸಂಘಟನೆಗಳ ಒಕ್ಕೂಟ' ಮೈಸೂರಿನಲ್ಲಿ 'ಸಹಮತ್'ನ ಈ 38 ಪೋಸ್ಟರುಗಳ ಪ್ರದರ್ಶನವನ್ನು ಸೆಪ್ಟಂಬರ್ 7 ರಂದು ಪುರಭವನದ ಅಂಬೇಡ್ಕರ್ ಪ್ರತಿಮೆಯ ಮುಂದೆ ಆಯೋಜಿಸಿತ್ತು. ತಕ್ಷಣ ಆರೆಸ್ಸೆಸ್-ಬಿಜೆಪಿಯ ಜನ ಎಚ್ಚೆತ್ತರು. ಪ್ರದರ್ಶನದ ಸ್ಥಳಕ್ಕೆ ಹೋಗಿ ಪ್ರದರ್ಶನವನ್ನು ನಿಲ್ಲಿಸುವಂತೆ,ಪೋಸ್ಟರುಗಳನ್ನು ತೆಗೆದು ಹಾಕುವಂತೆ ಬಲವಂತ ಮಾಡಿದರು. ಅದಕ್ಕೆ ಒಪ್ಪದಿದ್ದಾಗ ಪೋಸ್ಟರುಗಳನ್ನು ಹರಿದುಹಾಕಿ ಹಲ್ಲೆಗೂ ಮುಂದಾದರು. ಅತ್ಯಂತ ಅನಾಗರೀಕವಾಗಿ ವರ್ತಿಸಿ ಈ ದೇಶದ ಕಾನೂನು-ಸಂವಿಧಾನವನ್ನು ತಾವು ಒಪ್ಪುವುದಿಲ್ಲ ವೆಂಬುದನ್ನು ಸಂವಿಧಾನ ಶಿಲ್ಪಿ ಅಂಬೇಡ್ಕರ್ ಪ್ರತಿಮೆಯ ಮುಂದೆಯೇ ಅನಾವರಣಗೊಳಿಸಿದರು. ಅವರ ಆಕ್ರಮಣ ತೀವ್ರ ಸ್ವರೂಪ ಪಡೆದುಕೊಳ್ಳುವಷ್ಟರಲ್ಲಿ ಪೋಲೀಸರು ಮಧ್ಯಪ್ರವೇಶ ದಿಂದಾಗಿ ರಕ್ತಪಾತ ನಡೆಯುವುದು ತಪ್ಪಿತು.

ಗಾಂಧಿಯನ್ನು ಕೊಂದವರಿಗೆ
ಮತ ನೀಡಬೇಡಿ ಎನ್ನುವುದು ಅಪರಾಧ!

ಗಾಂಧಿಯನ್ನು ಕೊಂದವರಿಗೆ ಮತ ಕೊಡಬೇಡಿ ಎಂದು ಹೇಳುವುದು ಅಪರಾಧವೇ? ಹೌದು ಎನ್ನುತ್ತಾರೆ ಮೈಸೂರಿನ ಪೋಲೀಸರು. 'ಸಹಮತ್' ನ ಪೋಸ್ಟರುಗಳ ಪ್ರದರ್ಶನಕ್ಕೆ ಅಡ್ಡಿಪಡಿಸಿ ಆಕ್ರಮಣ ಮಾಡಿದ ಬಿಜೆಪಿ ಸಂಘ ಪರಿವಾರಗಳ ವಿರುದ್ಧ ಪ್ರತಿಭಟನೆ ಮಾಡಲು ಮೈಸೂರಿನ ಪ್ರಗತಿಪರ ಸಂಘಟನೆಗಳು ನಿರ್ಧರಿಸಿದಾಗ ಪೋಲೀಸರು ಅನುಮತಿ ನೀಡಲು ನಿರಾಕರಿಸಿದರು, ಅವರ ನಿರಾಕರಣೆಗೆ ಅವರು ನೀಡುವ ಕಾರಣ ಪ್ರತಿಭಟನೆಯ ಕರಪತ್ರದಲ್ಲಿದ್ದ ಒಂದು ವಾಕ್ಯ "......... ಗಾಂಧಿಯನ್ನು ಕೊಂದ ಕೋಮುವಾದಿಗಳಿಗೆ ಮತ ನೀಡಬೇಡಿ" ಎಂಬುದು. ಮೈಸೂರು ಪೋಲೀಸರ ಪ್ರಕಾರ ಗಾಂಧಿಯನ್ನು ಕೊಂದ ಮತೀಯವಾದಿಗಳಿಗೆ ಮತನೀಡಬೇಡಿ ಎಂದು ಹೇಳುವುದು ತಪ್ಪು. ಇದು ಬಿಜೆಪಿ-ಆರೆಸ್ಸೆಸ್‌ನ ಪ್ರಭಾವ ಕಾರ್ಯಾಂಗದ ಮೇಲೆ ಇರುವ ಸ್ಪಷ್ಟ ಉದಾಹರಣೆ.

ಬೆಂಗಳೂರಿನಲ್ಲಿ ಪ್ರತಿಭಟನೆ

ಮೈಸೂರಿನಲ್ಲಿ 'ಸಹಮತ್'ನ ಪೋಸ್ಟರುಗಳ ಪ್ರದರ್ಶನದ ಮೇಲೆ ನಡೆದ ದಾಳಿಯನ್ನು ಪ್ರತಿಭಟಿಸಿ ಬೆಂಗಳೂರಿನಲ್ಲಿ ಸೆಪ್ಟಂಬರ್ 8 ರಂದು 'ವಿವೇಕ' ಸಂಘಟನೆಯ ಆಶ್ರಯದಲ್ಲಿ ಪುರಭವನದ ಮುಂದೆ ಧರಣಿ-ಪ್ರದರ್ಶನ ನಡೆಸಲಾಯಿತು. ಅತ್ಯಂತ ಕಡಿಮೆ ಸಮಯದಲ್ಲಿ ತುರ್ತಾಗಿ ಈ ಕಾರ್ಯಕ್ರಮ ಸಂಘಟಿಸಿ ದರೂ ನಿರೀಕ್ಷೆಗೂ ಮೀರಿ ಹಲವಾರು ಪ್ರಗತಿಪರ ಸಂಘಟನೆಗಳ ಸದಸ್ಯರು ಈ ಪ್ರದರ್ಶನದಲ್ಲಿ ಭಾಗವಹಿಸಿ ಖಾವಿಪಡೆಗಳ ಕೃತ್ಯವನ್ನು ಬಲವಾಗಿ ಖಂಡಿಸಿದರು.

ಈ ಧರಣೆಯಲ್ಲಿ ಡಾ. ವಿಜಯ, ರಂಜಾನ್ ದರ್ಗಾ, ಜಿ.ಕೆ.ಗೋವಿಂದರಾವ್, ಶೂದ್ರಶ್ರೀನಿವಾಸ್ ಮುಂತಾದ ಸಾಂಸ್ಕೃತಿಕ ಲೋಕದ ಗಣ್ಯರು, ಸಮುದಾಯದ ಎಂ.ಜಿ.ವೆಂಕಟೇಶ್, ಶಶಿಧರ ಬಾರಿಘಾಟ್, ಜನವಾದಿ ಮಹಿಳಾ ಸಂಘಟನೆಯ ಕೆ.ಎಸ್.ವಿಮಲಾ, ಎನ್.ಪ್ರಭಾ, ಎಸ್‌ಎಫ್‌ಐನ ಉಮೇಶ್, ರಾಮಕೃಷ್ಣ, ಡಿವೈಎಫ್‌ಐನ ಶ್ರೀನಿವಾಸ್, ಲಕ್ಷ್ಮಣ್, ಸಿಐಟಿಯುನ ಮುಖಂಡರಾದ ಮೀನಾಕ್ಷಿ ಸುಂದರಂ, ಎಲ್‌ಐಸಿ ಯ ಕೆ.ವಿ.ಶ್ರೀನಿವಾಸ, ದಲಿತ ಸಂಘರ್ಷ ಸಮಿತಿಯ ಮುನಿ ಎಲ್ಲಪ್ಪ ಮುಂತಾದವರು ಭಾಗವಹಿಸಿದ್ದರು.

ಪ್ರದರ್ಶನಕಾರರನ್ನು ಉದ್ದೇಶಿಸಿ ಹಲವಾರು ಸಂಘಟನೆಗಳ ನಾಯಕರುಗಳು ಮಾತನಾಡಿದರು.

ಸಂವಿಧಾನದ ಬಗ್ಗೆ ಗೌರವವಿಲ್ಲದ ಸಂಘ ಪರಿವಾರ

"ಸಂಘ ಪರಿವಾರಕ್ಕೆ ಸಂವಿಧಾನದ ಬಗ್ಗೆ ಕಿಂಚಿತ್ತೂ ಗೌರವವಿಲ್ಲ" ಹೀಗೆಂದವರು ವಕೀಲರ ಸಂಘದ ವೆಂಕಟೇಶ ಗೌಡರು. ಅವರು ಪ್ರದರ್ಶನಕಾರರನ್ನು ಉದ್ದೇಶಿಸಿ ಮಾತನಾಡುತ್ತಾ ಕಳೆದ ಹಲವಾರು ವರ್ಷಗಳಿಂದ ನಡೆದಿರುವ ಹಲವಾರು ಘಟನೆಗಳು ಇದನ್ನು ಬಹಿರಂಗ ಪಡಿಸುತ್ತದೆ ಎಂದರು.

ಜನವಾದಿ ಮಹಿಳಾ ಸಂಘಟನೆಯ ಎನ್.ಪ್ರಭಾ ಮಾತನಾಡಿ ಮಹಿಳೆಯರ ಬಗ್ಗೆ ಕಿಂಚಿತ್ತೂ ಗೌರವವಿಲ್ಲದೆ ವರ್ತಿಸುವ ಸಂಘ ಪರಿವಾರಗಳು ಸಂಸ್ಕೃತಿಯ ವಕ್ತಾರರಂತೆ ಮಾತನಾಡುವುದು ನಾಚಿಕೆಗೇಡಿನ ಸಂಗತಿ ಎಂದರು. ಅಧಿಕಾರದ ರುಚಿ ಹಿಡಿದಿರುವ ಸಂಘ ಪರಿವಾರ ಅದಕ್ಕಾಗಿ ಏನನ್ನೂ ಮಾಡಲು ಹೇಸುವುದಿ[ಲ್ಲ] ಜನಸಮೂಹ ಒಗ್ಗಟ್ಟಾಗಿ ಅದನ್ನು ಪ್ರತಿಭಟಿಸಬೇಕು ಎಂ[ದು] ಕರೆ ನೀಡಿದರು.

'ಸಮುದಾಯ'ದ ಎಂ.ಜಿ.ವೆಂಕಟೇಶ್ ಬಿಜೆ[ಪಿ] ಅಧಿಕಾರಕ್ಕೆ ಬಂದ ನಂತರ ಸಾಂಸ್ಕೃತಿಯ ರಂಗದ ಮೇ[ಲೆ] ಹೆಚ್ಚುತ್ತಿರುವ ದಬ್ಬಾಳಿಕೆಗಳನ್ನು ಪ್ರಸ್ತಾಪಿಸಿ... ಬಿಜೆಪಿ ಮ[...] ಸಂಘ ಪರಿವಾರಕ್ಕೆ ತನ್ನ ವಿರೋಧಿ ವಾದಗಳನ್ನು ಒಪ್ಪ[...] ಅಥವಾ ಅದನ್ನು ಚರ್ಚಿಸುವ ಕಿಂಚಿತ್ತೂ ಸಹನೆಯ[...] ಇಲ್ಲ ಬಿಜೆಪಿಯ ಈ ಫ್ಯಾಸಿಸ್ಟ್ ಮನೋಭಾವವನ[್ನು] ಬಲವಾಗಿ ಖಂಡಿಸಬೇಕು ಎಂದರು.

ಮಹಾನುಭಾವರ ಹೇಳಿಕೆಗಳನ್ನು ತಿರುಚುವ ದುರಾತ್ಮ[...]

ವಿವೇಕಾನಂದ, ಗಾಂಧಿ ಮುಂತಾ[ದ] ಮಹಾನುಭಾವರೇ ಹೇಳಿದ್ದಾರೆ ಎಂದು ಸ್ವಂಯ ಸೃಷ್ಟಿಸಿ[...] ಹೇಳಿಕೆಗಳನ್ನು ಪ್ರಚಾರ ಮಾಡುತ್ತ ಅಲ್ಪಸಂಖ್ಯಾತರನ[್ನು] ದಲಿತರನ್ನು ಬೆದರಿಸುತ್ತಿರುವ ಸಂಘ ಪರಿವಾರದ ಕೃತ್ಯವ[...] ಸಾಹಿತಿ ರಂಜಾನ್ ದರ್ಗಾ ಬಲವಾಗಿ ಖಂಡಿಸಿದರು[.] ವಿವೇಕಾನಂದರ ಹೇಳಿಕೆಯೊಂದನ್ನು ಸಭೆಗೆ ಓದಿ ಹೇಳಿ[...] ರಂಜಾನ್ ದರ್ಗಾ ವಿವೇಕಾನಂದರು ಎಷ್ಟು ಪ್ರಗತಿಶೀಲರ[ಾ]ಗಿದ್ದರು, ಧಾರ್ಮಿಕ ಮೂಲಭೂತವಾದವನ[್ನು] ವಿರೋಧಿಸುತ್ತಿದ್ದರು ಎಂಬುದನ್ನು ತಿಳಿಸಿದರು. ಆದರ[ೆ] ಇಂತಹವರ ಹೇಳಿಕೆಗಳೆಂದು ಸ್ವಯಂ ಕಲ್ಪಿತ ಪೊಳ್[ಳು] ಹೇಳಿಕೆಗಳನ್ನು ಹರಡುತ್ತಿರುವ ಸಂಘಪರಿವಾರವನ[್ನು] ಬಲವಾಗಿ ಖಂಡಿಸಿದರು.


ಎಸ್‌ಎಫ್‌ಐನ ರಾಮಕೃಷ್ಣ, ಡಿಎಸ್‌ಎಸ್ ನ ಮುನಿ ಎಲ್ಲಪ್ಪ, ಎಐಬಿಇಎನ ಮುರುಳೀಕೃಷ್ಣ, ಎಐಐಇಎ[ನ] ಎನ್.ನಾಗರಾಜ್, ಪ್ರಗತಿಪರ ಪ್ರಜಾಪ್ರಭುತ್ವ ವೇದಿಕೆಯ ನಗರಗೆರೆ ರಮೇಶ್ ಮುಂತಾದವರು ಸಭೆಯನ್ನುದ್ದೇಶಿ[ಸಿ] ಮಾತನಾಡಿದರು.

-ಅನಂತ[...]




ಬೆಂಗಳೂರಿನಲ್ಲಿ ಪುರಭವನದ ಎದುರು 'ಸಹಮತ್' ನ ಪೋಸ್ಟರುಗಳನ್ನು ಹಿಡಿದು ಪ್ರತಿಭಟನೆ

ಸಹಮತ್‌ನ ಈ ಪೋಸ್ಟರ್‌ಗಳ ಮೇಲೆ ಖಾವಿಪಡೆಗಳು ದಾಳಿ ನಡೆಸಿದವು.










ಬಿಜೆಪಿ
ತನ್ನದೇ ಚುನಾವಣಾ
ಪ್ರಣಾಳಿಕೆ ಪ್ರಕಟಿಸದೆ
ಎನ್.ಡಿ.ಎ. ಮಾತ್ರ ಪ್ರಣಾಳಿಕೆ
ಪ್ರಕಟಿಸಿ ಅದರಲ್ಲಿ ಬಿಜೆಪಿಯ ಪ್ರಿಯ
ವಿಷಯಗಳಾದ ರಾಮಮಂದಿರ,
ಕಲಮು 370 ರದ್ದತಿ, ಸಮಾನ ನಾಗರಿಕ
ಸಂಹಿತೆ ಇತ್ಯಾದಿ ವಿವಾದಾತ್ಮಕ
ವಿಷಯಗಳನ್ನು ಕೈಬಿಟ್ಟಿದೆ ಎಂಬ ಬಗ್ಗೆ
ಸಾಕಷ್ಟು ಚರ್ಚೆ, ಪ್ರಶ್ನೆ-ಉತ್ತರಗಳು
ನಡೆದಿವೆ. ಆದರೆ ಇದರಿಂದ
ಬಿಜೆಪಿಯ ಗೋಸುಂಬೆತನ
ಇನ್ನಷ್ಟು ಬಯಲಾಗಿದೆ. ಅದಕ್ಕೆ
ಈ ವ್ಯಂಗ್ಯಚಿತ್ರಗಳೇ
ಸಾಕ್ಷಿ.

ಬಚ್ಚಿಟ್ಟ ಅಜೆಂಡಾ



Reg. No. 17015/64 KRNM/BGS-405 MAG(2) PRB DECR 319-79/79 AIKYARANGA WEEKLY
ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಎಸ್.ಸೂರ್ಯನಾರಾಯಣ ರಾವ್
ಸಂಪಾದಕರು: ಜಿ.ಎನ್ ನಾಗರಾಜ್, ಸಂಪಾದಕೀಯ ಕಛೇರಿ: ನಂ. 12, 18ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು-27 ಫೋನ್ ನಂ. 2236462,
ಮುದ್ರಣ: ಹಸಿ ಪ್ರಿಂಟರ್ಸ್, ಕ್ವೀನ್ ರಸ್ತೆ, ಬೆಂಗಳೂರು-1
Printed & Published by Communist Party of India(Marxist), Karnataka State Committee. Editor : G.N. NAGARAJ